ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರ ಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :-

ಶ್ರೀ ಬಸವರಾಜ. ರಾ. ಯಲಶೆಟ್ಟಿ

ನೋಂದಣಿ ಸಂಖ್ಯೆ : ಬಿ.ಆರ್.ಡಿ.ಎಸ್/ಎಚ್002

ಮಾರ್ಗದರ್ಶಕರು :

ಡಾ. ಬಸವರಾಜ ಎನ್. ಅಕ್ಕಿ

ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ.

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ,

ಹಾರೂಗೇರಿ, ಜಿ. ಬೆಳಗಾವಿ.

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ -೫೮೩೨೭೬

೨೦೧೧

ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು

(ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ

ಸಾದರ ಪಡಿಸಿದ ಸಂಶೋಧನ ನಿಬಂಧ)

ಸಂಶೋಧಕರು :

ಶ್ರೀ ಬಸವರಾಜ. ರಾ. ಯಲಶೆಟ್ಟಿ

ನೋಂದಣಿ ಸಂಖ್ಯೆ : ಬಿ.ಆರ್.ಡಿ.ಎಸ್/ಎಚ್೦೦೭

ಮಾರ್ಗದರ್ಶಕರು :

ಡಾ. ಬಸವರಾಜ ಎನ್. ಅಕ್ಕಿ

ಸರಕಾರಿ ಪ್ರಥಮ ದರ್ಜೆ ಕಾಲೇಜು, ಅಳ್ನಾವರ.

ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ. ಬೆಳಗಾವಿ.

ಕನ್ನಡ ವಿಶ್ವವಿದ್ಯಾಲಯ, ಹಂಪಿ,

ವಿದ್ಯಾರಣ್ಯ –೫೮೩೨೭೬

೨೦೧೧

ಪ್ರಮಾಣ ಪತ್ರ

''ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು' ಎಂಬ ಶೀರ್ಷಿಕೆಯ ನಿಬಂಧವನ್ನು ಡಾ.ಬಸವರಾಜ ಎನ್. ಅಕ್ಕಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, **ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಪ್ರಕಟಿಸಿರುವುದಿಲ್ಲವೆಂದೂ ಹಾಗೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೭-೨೦೧೧

ಶ್ರೀ ಬಸವರಾಜ. ರಾ. ಯಲಶೆಟ್ಟಿ
ಸಂಶೋಧನ ವಿದ್ಯಾರ್ಥಿ
ಶ್ರೀ ಬಿ.ಆರ್.ದರೂರ ಸಂಶೋಧನ ಕೇಂದ್ರ,
ಹಾರೂಗೇರಿ, ಜಿ. ಬೆಳಗಾವಿ.

ದೃಢೀಕರಣ ಪತ್ರ

ಶ್ರೀ ಬಸವರಾಜ. ರಾ. ಯಲಶೆಟ್ಟಿ ಇವರು ***'ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು'*** ಎಂಬ ಶೀರ್ಷಿಕೆಯ ನಿಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದು, ***ಹಾರೂಗೇರಿಯ ಶ್ರೀ ಬಿ.ಆರ್. ದರೂರ ಸಂಶೋಧನ ಕೇಂದ್ರದ*** ಮೂಲಕ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಚರಿತ್ರೆ ವಿಷಯದಲ್ಲಿ ಎಂ.ಫಿಲ್. ಪದವಿಗಾಗಿ ಸಲ್ಲಿಸುತ್ತಿದ್ದಾರೆ. ಪ್ರಸ್ತುತ ನಿಬಂಧವನ್ನು ಇವರು ಈ ಮೊದಲು ಇಡಿಯಾಗಿಯಾಗಲಿ, ಬಿಡಿಯಾಗಿಯಾಗಲಿ ಎಲ್ಲಿಯೂ ಪ್ರಕಟವಾಗಿಲ್ಲವೆಂದೂ ಯಾವುದೇ ಪದವಿಗಳಿಗಾಗಿ ಸಲ್ಲಿಸಿರುವುದಿಲ್ಲವೆಂದೂ ಧೃಡೀಕರಿಸುತ್ತೇನೆ.

ಸ್ಥಳ : ಹಾರೂಗೇರಿ
ದಿನಾಂಕ : ೧೦-೦೬-೨೦೧೧

10/6/11

ಡಾ. ಬಸವರಾಜ. ಎನ್. ಅಕ್ಕಿ.
ಮಾರ್ಗದರ್ಶಕರು
ಶ್ರೀ ಬಿ.ಆರ್.ದರೂರ ಸಂಶೋಧನ
ಕೇಂದ್ರ, ಹಾರೂಗೇರಿ, ಜಿ. ಬೆಳಗಾವಿ.

ಕೃತಜ್ಞತೆಗಳು

ವೃತ್ತಿಯಿಂದ ನಾನು ನ್ಯಾಯವಾದಿಯಾದರೂ ಅಧ್ಯಯನ ನನ್ನ ಹವ್ಯಾಸವಾಗಿದೆ. ಸ್ನಾತಕೋತ್ತರ ಪದವಿ ಪಡೆದ ನಂತರ ಸಂಶೋಧನೆಯಲ್ಲಿ ತೊಡಗಿ ಪಿ.ಎಚ್.ಡಿ. ಪದವಿಯನ್ನು ಪಡೆಯಬೇಕೆಂಬುದು ನನ್ನ ಹಿರಿಯಾಸೆ ಆಗಿತ್ತು. ನನ್ನ ಆಕಾಂಕ್ಷೆಯನ್ನು ಹಂಪಿ ಕನ್ನಡ ವಿಶ್ವವಿದ್ಯಾಲಯದ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರ, ಹಾರೂಗೇರಿಯ ನಿರ್ದೇಶಕರಾದ ಡಾ. ವ್ಹಿ. ಎಸ್. ಮಾಳಿಯವರಲ್ಲಿ ನಿವೇದಿಸಿಕೊಂಡೆ. ಪಿ.ಎಚ್.ಡಿ.ಗೆ ಮೊದಲು ಸಂಶೋಧನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಳ್ಳುವುದಕ್ಕೆ ಪೂರಕವಾಗಿ ಎಂ.ಫಿಲ್ ಪದವಿ ಪಡೆಯುವುದು ಸೂಕ್ತ ಎಂದು ಸೂಚಿಸಿದರು. ಅವರ ಈ ಪ್ರೇರಣೆ ನನ್ನನ್ನು ಸಂಶೋಧನೆಯಲ್ಲಿ ತೊಡಗುವಂತೆ ಮಾಡಿತು. ಅದರ ಫಲವೇ ಈ ನಿಬಂಧ.

ವಿಷಯದ ಆಯ್ಕೆ ಹಾಗೂ ಸಂಶೋಧನಾ ಕ್ಷೇತ್ರದ ವಿಚಾರ ಬಂದಾಗ ಶ್ರೀ ಬಿ. ಆರ್. ದರೂರ ಸಂಶೋಧನಾ ಕೇಂದ್ರದ ನಿರ್ದೇಶಕರು, ನಮ್ಮ ತಾಲೂಕಿನ ಪೂರ್ವೇತಿಹಾಸವನ್ನು ಪರಿಚಯಿಸುವ ಉದ್ಧೇಶದಿಂದ ಈ ವಿಷಯವನ್ನು ಆಯ್ಕೆ ಮಾಡಲು ಸೂಚಿಸಿದರು. ಅದರಂತೆ ಮಾರ್ಗದರ್ಶಕರಾದ ಡಾ. ಬಸವರಾಜ ಅಕ್ಕಿಯವರನ್ನು ಸಂಪರ್ಕಿಸಿದಾಗ ರಾಯಬಾಗ ತಾಲೂಕಿನ ಪೂರ್ವೇತಿಹಾಸಕ್ಕೆ ಸಂಬಂಧಿಸಿದ ವಿಷಯವಾದ “ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು” ಎಂಬ ವಿಷಯದ ಮೇಲೆ ಸಂಪ್ರಬಂಧ ರಚಿಸಲು ಸೂಚಿಸಿದರು. ಅವರ ಮಾರ್ಗದರ್ಶನದಲ್ಲಿ ನೆಲೆಗಳನ್ನು ಗುರುತಿಸುವುದಕ್ಕೆ ಹಾಗೂ ಈಗಾಗಲೇ ಗುರುತಿಸಿದ ನೆಲೆಗಳ ಬಗ್ಗೆ ಸಮಗ್ರ ಮಾಹಿತಿಯನ್ನು ಸಂಗ್ರಹಿಸಲು ಆರಂಭಿಸಿದೆ.

ಮಾರ್ಗದರ್ಶಕರಾದ ಡಾ. ಬಸವರಾಜ ಅಕ್ಕಿ ಅವರು ಸೂಕ್ತ ಸಲಹೆ ನೀಡಿ, ತಿದ್ದುಪಡಿ ಮಾಡಿ, ನಿಬಂಧ ರಚನೆಯ ಎಲ್ಲ ಹಂತಗಳಲ್ಲಿ ಸಹಕರಿಸಿದ್ದಾರೆ. ಅವರಿಗೆ ಮನಃಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ಸಂಶೋಧನೆ ಹಾಗೂ ಅಧ್ಯಯನಕ್ಕೆ ಪ್ರೇರಣೆ ನೀಡಿ ಪ್ರೋತ್ಸಾಹಿಸಿದ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಬಿ. ಆರ್. ದರೂರ ಹಾಗೂ ಉಪಾಧ್ಯಕ್ಷರಾದ ಗಿರೀಶ ದರೂರ ಮತ್ತು ಸಂಸ್ಥೆಯ ನಿರ್ದೇಶಕರು ಹಾಗೂ ನನ್ನ ತಂದೆ ಶ್ರೀ ರಾಮಕೃಷ್ಣ ಯಲಶೆಟ್ಟಿಯವರನ್ನು ತುಂಬು ಹೃದಯದಿಂದ ನೆನೆಯುತ್ತೇನೆ.

ನನ್ನ ಸಂಶೋಧನಾ ಅಧ್ಯಯನದುದ್ದಕ್ಕೂ ಸೂಕ್ತ ಸಲಹೆ ಸೂಚನೆಗಳನ್ನು ನೀಡಿ ಸಮರ್ಪಕವಾದ ಸಂಪ್ರಬಂಧದ ರಚನೆಗೆ ನನ್ನನ್ನು ಪ್ರೇರೇಪಿಸಿದ ಗುರುಗಳಾದ ಡಾ. ವ್ಹಿ. ಎಸ್. ಮಾಳಿಯವರಿಗೆ ನಾನು ಗೌರವಪೂರ್ವಕವಾಗಿ ವಂದನೆಗಳನ್ನು ಸಲ್ಲಿಸುತ್ತೇನೆ.

ಕ್ಷೇತ್ರ ಕಾರ್ಯಕ್ಕೂ ಹಾಗೂ ಇತರ ಹಂತದಲ್ಲಿ ಸಹಕರಿಸಿದ ಎಸ್. ವ್ಹಿ. ಇ. ಎಸ್. ಮಹಾವಿದ್ಯಾಲಯದ ಇತಿಹಾಸ ಉಪನ್ಯಾಸಕರಾದ ಪ್ರೊ. ಪಿ. ಬಿ. ಕಲಚಿಮ್ಮಡ ಅವರಿಗೂ ನನ್ನ ಸಹಪಾಠಿ ಮಧು ಬಿಳಗಿ ಹಾಗೂ ರಾಯಬಾಗ ವಕೀಲರ ಸಂಘದ ಸದಸ್ಯರನ್ನು ಮಾಹಿತಿ ಒದಗಿದ ಹಿರಿಯರಿಗೆ, ಗ್ರಾಮ ಪ್ರಮುಖರಿಗೆ ಕೃತಜ್ಞತೆಗಳು.

ಕಾಲದಿಂದ ಕಾಲಕ್ಕೆ ಪ್ರಬಂಧದ ರಚನೆಯಲ್ಲಿ ಪೂರ್ಣವಾಗಿ ನನ್ನನ್ನು ತಿದ್ದಿ ಸಹಕರಿಸಿದ ಡಾ. ವ್ಹಿ. ಎಸ್. ಮಾಳಿಯವರನ್ನು ಮನಃಪೂರ್ವಕವಾಗಿ ಮತ್ತೊಮ್ಮೆ ನೆನೆಯುತ್ತೇನೆ.

ನನ್ನ ಪ್ರಬಂಧ ರಚನೆಯಲ್ಲಿ ಆಸೆಗಣ್ಣಿನಿಂದ ನೋಡಿದ ನನ್ನ ಎರಡುವರೆ ವರ್ಷದ ಮುದ್ದು ಮಗ ವಿವೇಕ ಹಾಗೂ ಆರು ತಿಂಗಳ ಮಗಳಾದ ಮಹಾಲಕ್ಷ್ಮೀಗೆ ನೆನಪಿನ ಸಿಹಿಮುತ್ತುಗಳು. ಅಧ್ಯಯನದ ಸಂದರ್ಭದಲ್ಲಿ ಉತ್ಸಾಹ ತುಂಬುತ್ತಿದ್ದ ಪತ್ನಿ ಸವಿತಾ ಹಾಗೂ ತಾಯಿ, ಶಾಂತಾ ಅವರನ್ನು ನೆನೆಯದಿರಲಾರೆ. ನನ್ನ ಸಂಶೋಧನೆಗೆ ಅವಕಾಶ ನೀಡಿದ ಹಂಪಿ ವಿಶ್ವವಿದ್ಯಾಲಯಕ್ಕೆ ನನ್ನ ಹೃತ್ಪೂರ್ವಕ ವಂದನೆಗಳು.

ಸ್ಥಳ : ಹಾರೂಗೇರಿ

ದಿನಾಂಕ : ೧೦-೦೬-೨೦೧೧ ಬಸವರಾಜ. ರಾ. ಯಲಶೆಟ್ಟಿ

* ಪರಿವಿಡಿ *

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ವೈಧಾನಿಕತೆ

೧.೧ ಪ್ರವೇಶ

೧.೨ ಪುರಾತತ್ವ ಶಾಸ್ತ್ರದ ವ್ಯಾಪ್ತಿ

೧.೩ ಅಧ್ಯಯನದ ಪ್ರವೇಶ

೧.೪ ರಾಯಬಾಗ ತಾಲೂಕಿನ ಭೌಗೋಳಿಕ

೧.೫ ಅಧ್ಯಯನದ ಚರಿತ್ರೆ

೧.೬ ಅಧ್ಯಯನದ ಉದ್ದೇಶ

೧.೭ ಅಧ್ಯಯನದ ಸ್ವರೂಪ

೧.೮ ಅಧ್ಯಯನದ ವ್ಯಾಪ್ತಿ

೧.೯ ವೈಧಾನಿಕತೆ

ಅಧ್ಯಾಯ : ಒಂದು

ಅಧ್ಯಯನದ ಉದ್ದೇಶ, ಸ್ವರೂಪ ವ್ಯಾಪ್ತಿ ಹಾಗೂ ವೈಧಾನಿಕತೆ

ಒಂದು ಕಾಲದಲ್ಲಿ ಪಕ್ಷಿ ಪ್ರಾಣಿಗಳಂತೆ ಬದುಕುತಿದ್ದ ಮನುಷ್ಯ ನಾಗರಿಕತೆ ರೂಪಿಸಿಕೊಂಡಿದ್ದು ಒಂದು ರೋಚಕ ಚರಿತ್ರೆ. ಆದಿ ಕಾಲದಲ್ಲಿ ಕಾಡು ಪ್ರಾಣಿಗಳೊಂದಿಗೆ ಒಂದು ಪ್ರಾಣಿಗಳಂತೆಯೇ ಬದುಕುತಿದ್ದ ಆತ ಇಂದಿನ ವಿಕಾಸದ ಘಟ್ಟ ತಲುಪಲು ಹಲವು ಸಹಸ್ರ ವರ್ಷಗಳು ಬೇಕಾದವು. ಮಾನವವಿಕಾಸ ಕ್ರಮದ ಘಟ್ಟಗಳು ಹಲವು. ಅದು ಡಾರ್ವಿನನ ಜೀವವಿಕಾಸ ಸಿದ್ಧಾಂತದಷ್ಟೇ ಅಭ್ಯಸನೀಯ.

೧.೧ ಪ್ರವೇಶ :

ಮನುಷ್ಯನಲ್ಲಿ ಎಂದು ಸಹಬಾಳ್ವೆಯ ಬಯಕೆ ಹುಟ್ಟಿತು ಅಂದು ನಾಗರಿಕತೆಯ ಬೆಳವಣಿಗೆಯ ಕನಸು ಚಿಗುರಿತು. ಆ ಸಹಬಾಳ್ವೆಯ ಬಯಕೆ ಸಮಾಜ ಪರಿಕಲ್ಪನೆಯ ಬೀಜ. ಅಲ್ಲಿಂದಲೇ ನಾಗರಿಕತೆಯ ಚರಿತ್ರೆ ಆರಂಭಗೊಳ್ಳುವುದು. ಈ ಚರಿತ್ರೆ ಅದೆಷ್ಟೋ ವರ್ಷ ಗುಪ್ತ ಗಾಮಿನಿಯಾಗಿ ಪ್ರವಹಿಸಿದೆ. ಅದರ ಏಳು–ಬೀಳು, ಒಳ–ತಿರುಳು ಎಲ್ಲವೂ ಇಂದು ಊಹೆಗಳು. ಬೆಟ್ಟ–ಗುಡ್ಡ, ನದಿ–ಬಯಲು ಮೊದಲಾದೆಡೆಗಳಲ್ಲಿ ಆಹಾರವನ್ನು ಹುಡುಕುತ್ತಾ ಅಲೆಯುತ್ತಿದ್ದ ಮನುಷ್ಯನಿಗೆ ನೆಲೆಯ ಸೆಲೆ ಮೂಡಿದ್ದು ಒಂದು ಅದ್ಭುತ.

ಮಾನವ ವಿಕಾಸದ ಮೊದಲ ಘಟ್ಟ ಆರಂಭವಾಗುವುದೇ ಬೇಟೆ ಸಂಸ್ಕೃತಿಯಿಂದ. ಬೇಟೆಯಾಡುತ್ತಾ ಹಸಿಮಾಂಸ ತಿನ್ನುತ್ತಾ, ಗೆಡ್ಡೆ–ಗೆಣಸು ಹುಡುಕುತ್ತಾ ಅಲೆಮಾರಿ ಜೀವನ ಸಾಗಿಸುತ್ತಿದ್ದ. ಮನುಷ್ಯ ಗುಂಪು ಕಟ್ಟಿಕೊಂಡು ಒಂದು ನಿಶ್ಚಿತ ನೆಲೆಗಾಗಿ ಹಾತೊರೆಯತೊಡಗಿದ. ಮನುಷ್ಯನಿಗೆ ನೀರು ಅತ್ಯಂತ ಮುಖ್ಯವಾದದ್ದು. ಪ್ರಾಣವಾಯುವಿಗೆ ಮೊದಲ ಸ್ಥಾನ, ಪ್ರಾಣಜಲಕ್ಕೆ ಎರಡನೆಯ ಸ್ಥಾನ ಹಾಗೂ ಮೂರನೆಯ ಆದ್ಯತೆ ಆಹಾರ. ನೆಲೆ ಅಥವಾ ಆಶ್ರಯ ಅನಂತರದ ಆದ್ಯತೆ. ಪ್ರಾಚೀನ ಮಾನವರ ನೆಲೆಗಳು ಸಿಗುವುದೇ ಜಲ–ತಾಣಗಳ ಪಕ್ಕದಲ್ಲಿ. ನದಿ ಹಾಗೂ ನದಿ ಪಕ್ಕದ ಬಯಲು–ಬೆಟ್ಟಗಳಲ್ಲಿ ಪ್ರಾಚೀನ ಮಾನವರ ನೆಲೆಗಳ ಕುರುಹುಗಳನ್ನು ನಾವು ಇಂದಿಗೂ ಕಾಣಬಹುದು.

ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ಮಾನವರ ಅವಶೇಷಗಳು ಸಿಗುತ್ತವೆ. ಅವು ಚರಿತ್ರ ಪೂರ್ವಯುಗದ ಮಾನವ ಜೀವನದ ಅಧ್ಯಯನದ ಪ್ರಮುಖ ಆಕರಗಳು. ಅವುಗಳಿಂದಲೇ ಆದಿ ಮಾನವನ ಬದುಕಿನ ವಿವರಗಳನ್ನು ಹೆಕ್ಕಬೇಕು. ಈಗಾಗಲೇ ಚರಿತ್ರಾಕಾರರು ಜಗತ್ತಿನಾದ್ಯಂತ ಇಂತಹ ಅಧ್ಯಯನಗಳನ್ನು ಕೈಗೊಂಡು ಇತಿಹಾಸ ಪೂರ್ವದ ಇತಿಹಾಸ ರಚಿಸಲು ಪ್ರಯತ್ನಿಸುತ್ತಿದ್ದಾರೆ. ಈಜಿಪ್ತಿನ ನೈಲನದಿ, ಭಾರತದ ಸಿಂಧೂ-ಗಂಗಾ-ಬ್ರಹ್ಮಪುತ್ರಾ ನದಿಗಳ ದಡದಲ್ಲಿಯ ಆದಿಮಾನವನ ನೆಲೆಗಳನ್ನು ಶೋಧಿಸಿ, ಆ ನಾಗರಿಕತೆಯನ್ನು ಅನಾವರಣಗೊಳಿಸಿದ್ದುಂಟು.

ಸಧ್ಯದ ಸಂದರ್ಭದಲ್ಲಿ ಮಾನವ ನಾಗರಿಕತೆಯ ವಿಕಾಸವನ್ನು ಎರಡು ಪ್ರಮುಖ ಘಟ್ಟಗಳಲ್ಲಿ ಗುರುತಿಸುತ್ತೇವೆ. ಒಂದು ಇತಿಹಾಸ ಕಾಲ, ಮತ್ತೊಂದು ಇತಿಹಾಸ ಪೂರ್ವಕಾಲ. ಭಾರತದಲ್ಲಿ ಅಶೋಕನ ಶಾಸನಗಳೇ ಅತ್ಯಂತ ಪ್ರಾಚೀನ ಶಾಸನಗಳೆಂದು ತಿಳಿಯಲಾಗಿದೆ. ಅವು ಭಾರತದ ಚರಿತ್ರೆಯ ಪ್ರಾಚೀನ ಆಕಾರಗಳು. ಇಂತಹ ಲಿಖಿತ ದಾಖಲೆಗಳನ್ನು ಆಧಾರವಾಗಿಟ್ಟುಕೊಂಡು ಮಾನವ ಇತಿಹಾಸವನ್ನು ವಿಂಗಡಿಸಲಾಗಿದೆ.

೧.೨ ಪುರಾತತ್ವ ಶಾಸ್ತ್ರ :

"ಸುಮಾರು ೨೦ ಲಕ್ಷ ವರ್ಷಗಳಷ್ಟು ಹಿಂದಿನಿಂದಲಾದರೂ ಮಾನವನು ಪೃಥ್ವಿಯ ಮೇಲೆ ನೆಲೆಸಿದ್ದಾನೆಂಬುದು ಈಗ ಸಿದ್ಧವಾದ ಸಂಗತಿ. ಅಂದಿನಿಂದಲೂ ಮಾನವನು ಬೌದ್ಧಿಕವಾಗಿಯೂ, ಶಾರೀರಿಕವಾಗಿಯೂ ಪರಿವರ್ತನೆ ಹೊಂದುತ್ತಿದ್ದಾನಲ್ಲದೆ ತನ್ನ ಸುತ್ತಣ ಭೌತ ಜಗತ್ತಿನಲ್ಲಿ ಪರಿವರ್ತನೆಯನ್ನುಂಟು ಮಾಡುತ್ತಿದ್ದಾನೆ; ತನ್ನ ಇರುವಿನ ಕುರುಹುಗಳನ್ನು ಪ್ರಾಚ್ಯ ಅವಶೇಷಗಳ ರೂಪದಲ್ಲಿ ಉಳಿಸಿ ಹೋಗುತ್ತಿದ್ದಾನೆ. ಸುಮಾರು ೫೦೦೦ ವರ್ಷಗಳ ಹಿಂದಷ್ಟೇ ಈಜಿಪ್ತ, ಸುಮೇರ್ ಮತ್ತು ಹರಪ್ಪಾ ನಾಗರಿಕತೆಗಳ ನಿರ್ಮಾತೃಗಳಿಂದ ಲಿಪಿಯ ಸೃಷ್ಟಿಯಾಯಿತು. ಸಂಸ್ಕೃತಿಯ ವಿಕಾಸದಲ್ಲಿ ಲಿಪಿಯ ಸೃಷ್ಟಿಯು ಒಂದು ಮೈಲಿಗಲ್ಲಾಗಿದೆ. ಅಂದಿನಿಂದ ಕೇವಲ ಈ ೫೦೦೦ ವರ್ಷಗಳಲ್ಲಿ ಮಾನವನು ಏನನ್ನು ಸಾಧಿಸಿದ್ದಾನೋ ಅದನ್ನು ಲಿಪಿಯ ಸೃಷ್ಟಿಗಿಂತ ಮುಂಚಿನ ಅನಂತಕಾಲದ ಅವಧಿಯಲ್ಲಿ ಅವನಗೆ ಸಾಧಿಸುವುದಾಗಿರಲಿಲ್ಲ. ಆದ್ದರಿಂದ ಮಾನವ ವಿಕಾಸದ ಸಂಸ್ಕೃತಿಯ ವಿಕಾಸ ಲಿಪಿಯು ಒಂದು ಹೊಸ ಯುಗದ ಆರಂಭವೆನಿಸಿದೆ. ಈ ತಳಹದಿಯ ಮೇಲೆ ಮಾನವಕುಲದ ಚರಿತ್ರೆಯನ್ನು ಎರಡು ಭಾಗಗಳಾಗಿ ವಿಂಗಡಿಸಿದೆ. ಲೇಖನ ಕಲೆಯು ಚಲಾವಣೆಯಲ್ಲಿ ಬರುವುದಕ್ಕಿಂತ ಮುಂಚಿನ ಅವಧಿಯನ್ನು 'ಇತಿಹಾಸಪೂರ್ವಯುಗ' ವೆಂದು ಹಾಗೂ ಲಿಪಿಯು ಸಾಕಷ್ಟು ಬಳಕೆಯಾಗತೊಡಗಿ ಸಾಹಿತ್ಯ, ಐತಿಹಾಸಿಕ ಮತ್ತು ಧಾರ್ಮಿಕ ಬರವಣಿಗೆ, ಶಾಸನ ಮುಂತಾದವುಗಳು ನಿರ್ಮಾಣವಾಗತೊಡಗಿದ ನಂತರದ ಅವಧಿಯನ್ನು 'ಇತಿಹಾಸಯುಗ'ವೆಂದು ಅನುಕೂಲಕ್ಕಾಗಿ ಕರೆಯಲಾಗಿದೆ. ಈ ಎರಡು ಯುಗಗಳ ಪ್ರಾಚ್ಯ ಅವಶೇಷಗಳ ಅಧ್ಯಯನವು ಪುರಾತತ್ವಶಾಸ್ತ್ರದ ಪರಿಧಿಯಲ್ಲಿವೆ. ಹೀಗಾಗಿ ಇವೆರಡು ಅವಧಿಗಳಿಗನುಗುಣವಾಗಿ 'ಇತಿಹಾಸಪೂರ್ವ ಪುರಾತತ್ವಶಾಸ್ತ್ರ' ಹಾಗೂ 'ಐತಿಹಾಸ ಪುರಾತತ್ವಶಾಸ್ತ್ರ'ಗಳು ಅಸ್ತಿತ್ವದಲ್ಲಿವೆ."[೧]

೧) ಡಾ. ಶ್ರೀನಿವಾಸ ಪಾಡಿಗಾರ, "ಪುರಾತತ್ವ ಶಾಸ್ತ್ರ ಪರಿಚಯ" ಪುಟ ೬-೭ ಗಾಯಿತ್ರಿ ಪ್ರಕಾಶನ ಧಾರವಾಡ. ೧೯೮೭.

೧. ೩ ಅಧ್ಯಯನ ಪ್ರವೇಶ:

ಕರ್ನಾಟಕದ ಹೆಬ್ಬಾಗಿಲು ಎನಿಸಿದ ಬೆಳಗಾವಿ ಜಿಲ್ಲೆಯಲ್ಲಿ ೧೦ ತಾಲೂಕುಗಳಿದ್ದು, ಅವುಗಳಲ್ಲಿ ರಾಯಬಾಗ ಒಂದು. ಬೆಳಗಾವಿಯ ಇತಿಹಾಸ ಬಹು ಪ್ರಾಚೀನವಾದುದ್ದು. ವಡಗಾಂವ, ಮಾಧವಪುರ ಉತ್ಖನ್ನನದಿಂದ ಬೆಳಗಾವಿಯಲ್ಲಿ ಕ್ರಿ.ಶ. ಪೂರ್ವದ ಇತಿಹಾಸ ಬೆಳಕಿಗೆ ಬಂದಿದೆ. ಈ ಜಿಲ್ಲೆಯಲ್ಲಿ ಕೃಷ್ಣಾ, ಮಾರ್ಕಂಡೆಯ, ಹಿರಣ್ಯಕೇಶಿ, ಮಲಪ್ರಭಾ, ದೂಧಗಂಗಾ, ವೇಧಗಂಗಾ ಮೊದಲಾದ ನದಿಗಳು ಹರಿಯುತ್ತಿರುವುದರಿಂದ ಹಾಗೂ ಕೆಲವು ಭೂ–ಪ್ರದೇಶ, ಬೆಟ್ಟಗಳಿಂದ ಕೂಡಿರುವುದರಿಂದ ಈ ಜಿಲ್ಲೆಯಲ್ಲಿ ಇತಿಹಾಸ ಪೂರ್ವದ ಮಾನವನ ಅನೇಕ ನೆಲೆಗಳು ಪತ್ತೆಯಾಗಿವೆ. ಭೌಗೋಳಿಕವಾಗಿ ಈ ಜಿಲ್ಲೆಯ ವ್ಯಾಪ್ತಿ ಉತ್ತರ ಅಕ್ಷಾಂಶ ೧೫°–೨೩° ನಿಂದ ೫೮°ರ ವರೆಗೆ ಹಾಗೂ ಪೂರ್ವ ರೇಖಾಂಶ ೭೪°–೦೫° ನಿಂದ ೭೫°–೨೮°ರ ವರೆಗೆ ಇದೆ. ಕರ್ನಾಟಕ ರಾಜ್ಯದ ೩೧ ಜಿಲ್ಲೆಗಳಲ್ಲಿ ಈ ಜಿಲ್ಲೆಯ ವಿಸ್ತೀರ್ಣ ೧೩೪೬೩೮೨ ಹೇಕ್ಟರ್ ಇರುವುದು. ಜಿಲ್ಲೆಯ ಪೂರ್ವ–ಪಶ್ಚಿಮ ಅಗಲಳತೆಯ ಸುಮಾರು ೧೦೫ ಕಿ.ಮೀ. ಗಳಷ್ಟಿದ್ದರೆ, ದಕ್ಷಿಣೋತ್ತರವಾಗಿ ಸು. ೧೦೬ ಕಿ.ಮೀ. ಗಳಷ್ಟಿದೆ. ಈ ಜಿಲ್ಲೆ ಸಮುದ್ರ ಪಾತದಿಂದ ಸರಾಸರಿ ೨೧೪೦ ಅಡಿ ಎತ್ತರದಲ್ಲಿದೆ.

ಜಿಲ್ಲೆಯನ್ನು ಭೌಗೋಳಿಕವಾಗಿ ಮಲೆನಾಡು, ಅರೆಮಲೆನಾಡು ಹಾಗೂ ಬಯಲು ಪ್ರದೇಶವೆಂದು ಮೂರು ವಿಭಾಗಗಳಾಗಿ ವಿಂಗಡಿಸಬಹುದು. ರಾಯಬಾಗ, ಅಥಣಿ, ಚಿಕ್ಕೋಡಿ ಹಾಗೂ ಹುಕ್ಕೇರಿ ತಾಲೂಕಿನ ಉತ್ತರ ಭಾಗ ಬಯಲು ಪ್ರದೇಶಕ್ಕೆ ಸೇರುತ್ತವೆ. ಇಲ್ಲಿ ಮಳೆ ಪ್ರಮಾಣ ಕಡಿಮೆ. ಆದರೆ ರಾಯಬಾಗ, ಅಥಣಿ ಮತ್ತು ಚಿಕ್ಕೋಡಿ ತಾಲೂಕುಗಳನ್ನೊಳಗೊಂಡು ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ಕೃಷ್ಣಾ ನದಿ ಸಮೃದ್ಧಿ ಸೃಷ್ಟಿಸಿದೆ. ಘಟಪ್ರಭ ಎಡದಂಡೆ ಕಾಲುವೆ ರಾಯಬಾಗ ತಾಲೂಕಿಗೆ ವರದಾನವಾಗಿದೆ.

೧.೪ ರಾಯಬಾಗ ತಾಲೂಕಿನ ಭೂಗೋಳ :

ಇಂದು ಬೆಳಗಾವಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿರುವ ರಾಯಬಾಗ ಜಿಲ್ಲಾ ಕೇಂದ್ರದಿಂದ ೯೬ ಕಿ.ಮೀ. ಉತ್ತರದಲ್ಲಿದೆ. ಈ ತಾಲೂಕಿಗೆ ದಕ್ಷಿಣದಲ್ಲಿ ಗೋಕಾಕ, ಉತ್ತರಕ್ಕೆ ಅಥಣಿ, ಪಶ್ಚಿಮಕ್ಕೆ ಚಿಕ್ಕೋಡಿ ಹಾಗೂ ಪೂರ್ವಕ್ಕೆ ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕು ಹೊಂದಿಕೊಂಡಿವೆ. ಭೌಗೋಳಿಕವಾಗಿ ಈ ತಾಲೂಕಿನ ವ್ಯಾಪ್ತಿ ಉತ್ತರ ಅಕ್ಷಾಂಶ ೧೬°–೨೧° ನಿಂದ ೧೬°–೪೨°ರ ವರೆಗೆ ಹಾಗೂ ಪೂರ್ವ ರೇಖಾಂಶ ೭೪°–೭೪° ರ ವರೆಗೆ ಇದೆ.

ಉತ್ತರದಲ್ಲಿ ಹರಿಯುವ ಕೃಷ್ಣಾ ನದಿ ರಾಯಬಾಗ, ಅಥಣಿ ತಾಲೂಕನ್ನು ಬೇರ್ಪಡಿಸುವ ಮೇರೆಯಾಗಿದೆ. ಮಹಾರಾಷ್ಟ್ರದಿಂದ ಹರಿದು ಬರುವ ಕೃಷ್ಣೆ ಚಿಕ್ಕೋಡಿ ತಾಲೂಕಿನ ಮೂಲಕ ರಾಯಬಾಗ ತಾಲೂಕನ್ನು ಪ್ರವೇಶಿಸುವಳು.

ಈ ತಾಲೂಕು ಬೆಟ್ಟ ಕಣಿವೆಗಳಿಂದ ಕೂಡಿದ್ದು, ಒಂದು ಕಾಲದಲ್ಲಿ ಕುರುಚಲು ಕಾಡಾಗಿರಬಹುದು. ಸವದತ್ತಿ, ದಿಗ್ಗೇವಾಡಿ, ಜಲಾಲಪೂರ, ಚಿಂಚಲಿ, ಕುಡಚಿ, ಗುಂಡವಾಡ, ಶಿರಗೂರ, ಪರಮಾನಂದವಾಡಿ, ಖೇಮಲಾಪೂರ, ಸಿದ್ಧಾಪೂರ ಮೊದಲಾದವು ಕೃಷ್ಣಾ ತೀರದ ಗ್ರಾಮಗಳು. ಇವುಗಳನ್ನು ಹೊರತುಪಡಿಸಿ ಪಶ್ಚಿಮ ಹಾಗೂ ದಕ್ಷಿಣ ಭಾಗ ಸಂಪೂರ್ಣವಾಗಿ ಬೆಟ್ಟಗಳಿಂದ ಕೂಡಿದೆ. ಅಲ್ಲಿಯ ಮಣ್ಣಿನ ಬಣ್ಣ ನಸುಗೆಂಪು. ಗರುಸಿನಿಂದ ಕೂಡಿದ ಮಸಾರಿ. ಕೃಷ್ಣಾ ತೀರದಲ್ಲಿ ಮಾತ್ರ ಕಪ್ಪು ಮಣ್ಣಿದೆ. ಆದರೆ ನದಿಯಿಂದ ೨-೩ ಕಿ.ಮೀ. ದಕ್ಷಿಣಕ್ಕೆ ಬಂದರೆ ಎತ್ತರದ ಬೆಟ್ಟಗಳು, ನದಿ ತೀರ, ಬಯಲು ಪ್ರದೇಶ ಹಾಗೂ ಕುರುಚಲು ಬೆಟ್ಟಗಳಲ್ಲಿ ಆದಿ ಮಾನವನ ನೆಲೆಗಳಿದ್ದು, ಅವುಗಳನ್ನು ಅಧ್ಯಯನಕ್ಕೆ ಒಳಪಡಿಸಬಹುದಾದ ಅಗತ್ಯವಿದೆ.

೧.೫ ಅಧ್ಯಯನದ ಚರಿತ್ರೆ :

ಪುರಾತತ್ವ ಕ್ಷೇತ್ರದ ಅಧ್ಯಯನಕ್ಕೆ ಓಂಕಾರ ಹಾಕಿದವರು ರಾಬರ್ಟ್ ಬ್ರೂಸ್ ಪೂರ್ಟ್. ಈತನನ್ನು ಭಾರತದ ಪುರಾತತ್ವ ಚರಿತ್ರೆಯ ಪಿತಾಮಹನೆಂದು ಗುರುತಿಸಲಾಗುತ್ತದೆ. ಅನಂತರ ಕರ್ನಲ್ ಮೆಡೊಸ್ ಟೇಲರ್‌ನು ರಾಬರ್ಟ್‌ನ ಕಾರ್ಯವನ್ನು ಮುಂದುವರೆಸಿದನು. ಇವರಿರ್ವರು ಪುರಾತತ್ವ ಶಾಸ್ತ್ರಕ್ಕೆ ಭದ್ರ ನೆಲೆಗಟ್ಟು ನಿರ್ಮಿಸಿದರು.

ಉತ್ಖನದ ಮೂಲಕ ಕರ್ನಾಟಕದ ಪ್ರಾಚೀನ ನೆಲೆಗಳನ್ನು ಶೋಧಿಸುವ ಸಾಹಸಕ್ಕೆ ಕೈ ಹಾಕಿದವರು ಡಾ. ಎಮ್.ಎಚ್. ಕೃಷ್ಣಾ, "ಕರ್ನಾಟಕ ಪುರಾತತ್ವ ಅಧ್ಯಯನ ಪ್ರಾರಂಭಿಸಿ ಪ್ರಚುರಪಡಿಸಿದ ಡಾ. ಎಮ್. ಹೂಕ್ ಕೃಷ್ಣಾ ಹಾಗೂ ಸರ್ ಮಾರ್ಟಮ್ ವೀಲರ್ ಅವರಂತೆ ಇತರೆ ವಿದ್ವಾಂಸರು ಅದನ್ನು ಮುಂದುವರೆಸಿಕೊಂಡು ಅಧ್ಯಯನ ವಿಸ್ತರಿಸಿದ್ದಾರೆ. ಬಿ. ಶೇಷಾದ್ರಿ, ಬಿ. ಸುಬ್ಬರಾವ. ಅ. ಸುಂದರ, ಬಿ.ಕೆ. ಗುರುರಾಜ ರಾವ, ಸುಬ್ಬಯ್ಯ, ರವಿಕೋರಿ ಶೆಟ್ಟರ, ರಾಜಾರಾಮ ಹೆಗಡೆ, ಎಮ್.ಎಸ್. ಕೃಷ್ಣಮೂರ್ತಿ ಹಾಗೂ ಎನ್.ಎಸ್. ರಂಗರಾಜು ಮುಂತಾದ ವಿಧ್ವಾಂಸರು ಕರ್ನಾಟಕ ಪೂರ್ವ ಇತಿಹಾಸ (ಪುರಾತತ್ವ)ದ ಬೇರೆ ಬೇರೆ ಮಾದರಿಯ ಮಹತ್ವದ ನೆಲೆಗಳನ್ನು ಶೋಧಿಸುವ, ವಿಮರ್ಶಿಸುವ ಕಾರ್ಯವನ್ನು ಮಾಡುತ್ತಿದ್ದಾರೆ."[೨]

ಬೆಳಗಾವಿ ಜಿಲ್ಲೆಯಲ್ಲಿ ವಡಗಾಂವ, ಮಾಧವಪೂರ, ಉತ್ಖನನ ಮಹತ್ವದ್ದು. ಬೆಳಗಾವಿ ಜಿಲ್ಲೆಯಲ್ಲಿ ಅನೇಕ ನದಿಗಳ ಪಾತ್ರ ಬಯಲು ಪ್ರದೇಶ ಹಾಗೂ ಬೆಟ್ಟಗಳು ಪ್ರಾಚೀನ ಮಾನವರ ಹಲವು ನೆಲೆಗಳನ್ನು ಗುರುತಿಸಲಾಗಿದೆ. ಸುಮಾರು ೫ ಲಕ್ಷ ವರ್ಷಗಳಿಂದ ಕ್ರಿ.ಶ.ದ ಆರಂಭದವರೆಗೂ ಈ ಪ್ರಾಚೀನ ನೆಲೆಗಳು ಕಾಣಬರುತ್ತವೆ. ಆ ಕಾಲಮಾನವನ್ನು ಶೀಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿಯೆಂದು ಎರಡು ಭಾಗಗಳನ್ನಾಗಿ ಮಾಡಲಾಗಿದೆ.

---

೨) ರಮೇಶ ನಾಯಿಕ 'ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ. ಪುಟ -೩ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ - ೨೦೦೭.

"ಮಾನವನ ಇತಿಹಾಸವನ್ನು ಪ್ರಮುಖವಾಗಿ ಎರಡು ಮುಖ್ಯ ವಿಭಾಗಗಳನ್ನಾಗಿ ಮಾಡಲಾಗಿದೆ. ಮೊದಲನೆಯದು ಅಕ್ಷರಜ್ಞಾನವಿಲ್ಲದ ಹಂತ ಅಥವಾ ಪ್ರಾಗಿತಿಹಾಸ ಅಥವಾ ಪೂರ್ವೇತಿಹಾಸ. ಎರಡನೆಯದು ಅಕ್ಷರಜ್ಞಾನವಿದ್ದ ಹಂತ ಅಥವಾ ರಾಜಮಹಾರಾಜರ ಕಾಲ ಅಥವಾ ಇತಿಹಾಸಕಾಲವೆಂದು ಹೇಳಬಹುದು. ಇವುಗಳಲ್ಲಿ ಪ್ರಾಗಿತಿಹಾಸ ಕಾಲಮಾನ ಸುದೀರ್ಘವಾದುದಾಗಿದೆ. ಇಂದಿಗೆ ಸುಮಾರು ೫ ಲಕ್ಷ ವರ್ಷಗಳಿಂದ ಕ್ರಿಸ್ತ ಶಕೆಯ ಆರಂಭದವರೆಗೂ ಅದು ರೂಢಿಯಲ್ಲಿದ್ದಿತೆಂದು ತಿಳಿಯುತ್ತದೆ. ಈ ಕಾಲಮಾನವನ್ನು ಆಗ ನಿತ್ಯ ಬಳಕೆಯಲ್ಲಿದ್ದ ವಸ್ತುವಿನ ಆಧಾರದಿಂದ ಶಿಲಾಯುಗ ಸಂಸ್ಕೃತಿ ಮತ್ತು ಲೋಹಯುಗ ಸಂಸ್ಕೃತಿ ಎಂದು ಎರಡು ವಿಭಾಗಗಳನ್ನಾಗಿ ಮಾಡಲಾಗಿದೆ.

ಶಿಲಾಯುಗ ಸಂಸ್ಕೃತಿಯ ಹಂತವನ್ನು ಅವಶೇಷ ಹಾಗೂ ಅವುಗಳ ಬೆಳವಣಿಗೆ ಮತ್ತು ಕುಶಲತೆಯನ್ನನುಸರಿಸಿ ಹಳೆಯ ಶಿಲಾಯುಗ ಸಂಸ್ಕೃತಿ ಮತ್ತು ನೂತನ ಶಿಲಾಯುಗ ಸಂಸ್ಕೃತಿ ಎಂದು ವರ್ಗೀಕರಿಸಲಾಗಿದೆ. ಅಧ್ಯಯನದ ತೀವ್ರತೆ ಹಾಗೂ ಪ್ರತಿಯೊಂದು ಹಂತಗಳಲ್ಲಾದ ಬದಲಾವಣೆಗಳನ್ನು ಗುರುತಿಸಿ, ಹೊಸ ಹೊಸ ವಿಷಯಗಳ ಬಗೆಗೆ ತಿಳಿಯಲು ಸಾಧ್ಯವಾಗಿದೆ. ಹಾಗೆಯೇ ಹಳೆಯ ಶಿಲಾಯುಗವನ್ನು ಮೂರು ಉಪಗುಂಪುಗಳಾಗಿ ವಿಭಾಗಿಸಿ, ಆದಿ ಹಳೆಯ ಶಿಲಾಯುಗ ಸಂಸ್ಕೃತಿ, ಮಧ್ಯ ಹಳೆಯ ಶಿಲಾಯುಗ ಸಂಸ್ಕೃತಿ ಮತ್ತು ಅಂತ್ಯ ಹಳೆಯ ಶಿಲಾಯುಗ ಸಂಸ್ಕೃತಿ ಎಂದು ವಿಭಾಗಿಸಲಾಗಿದೆ."[೩]

ಮೇಲೆ ಸೂಚಿಸಲಾದ ಹಳೆಯ ಶಿಲಾಯುಗ ಆದಿ, ಮಧ್ಯ ಹಾಗೂ ಅಂತ್ಯ ಹಳೆಯ ಶಿಲಾಯುಗದ ಸಂಸ್ಕೃತಿಯ ಹಾಗೂ ಅನಂತರದ ಹೊಸ ಶಿಲಾಯುಗ, ಶಿಲಾ-ತಾಮ್ರಯುಗ-ಕಬ್ಬಿಣ ಮತ್ತು ಬೃಹತ ಶಿಲಾಗೋರಿ ಸಂಸ್ಕೃತಿ ನೆಲೆಗಳು ರಾಯಬಾಗ ತಾಲೂಕಿನಲ್ಲಿ ಶೋಧಿಸುವ ಜೊತೆಗೆ ಅಧ್ಯಯನಕ್ಕೆ ಒಳಪಡಿಸುವ ಪ್ರಯತ್ನವಿಲ್ಲಿದೆ.

೧.೬ ಅಧ್ಯಯನದ ಉದ್ದೇಶ :

ರಾಯಬಾಗ ತಾಲೂಕಿಗೆ ಪ್ರಾಚೀನ ಪರಂಪರೆ ಇದೆ. ಇತಿಹಾಸ ಪೂರ್ವದ ಇತಿಹಾಸವಿದೆ. ಈಗಾಗಲೇ ಇತಿಹಾಸಕಾರರು ರಾಯಬಾಗ ತಾಲೂಕಿನ ಕುಡುಚಿ, ಖೇಮಲಾಪೂರ, ಮುಗಳಖೋಡ, ಯಬರಟ್ಟಿ, ಶಿರಗೂರ, ಹಾರೂಗೇರಿ, ಭಿರಡಿ ಗ್ರಾಮಗಳಲ್ಲಿ ಸೂಕ್ಷ್ಮ ಶಿಲಾಯುಗ, ಶಿಲಾ-ತಾಮ್ರಯುಗ, ಇತಿಹಾಸ ಆರಂಭ ಯುಗದ ಮಾನವ ನೆಲೆಗಳನ್ನು ಗುರುತಿಸಿದ್ದಾರೆ. ಡಾ. ಅ. ಸುಂದರ ತಾಲೂಕಿನ ಪ್ರಾಚ್ಯ ನೆಲೆಗಳ ಕುರಿತು ವಿಶೇಷ ಸಂಶೋಧನೆ ಕೈಗೊಂಡು ಆ ನೆಲೆಗಳ ವಿವರ ನೀಡಿದ್ದಾರೆ. ಇತ್ತೀಚಿಗೆ ಡಾ. ಶ್ರೀನಿವಾಸನ ಪಾಡಿಗಾರವರ ನೇತೃತ್ವದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚ್ಯ ಸಂಶೋಧನಾ ವಿಭಾಗ ಕುಡಚಿ ಬೂದಿದಿಬ್ಬದ ಉತ್ಖನ್ನನ ಕೈಗೊಂಡಿತ್ತು. ಈ ಎಲ್ಲ ಅಧ್ಯಯನಗಳನ್ನು ಪುನರ್ ಪರಿಶೀಲನೆಗೆ ಒಳಪಡಿಸುವುದು ಈ ನಿಬಂಧದ ಉದ್ದೇಶವಾಗಿದೆ. ತಾಲೂಕಿನ ಎಲ್ಲ

೩) ಡಾ. ಕೆ. ಬಿ. ಶಿವತಾರಕ, ಕರ್ನಾಟಕ ಪುರಾತತ್ವ ನೆಲೆಗಳು ಪುಟ-೩ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ ಹಂಪಿ -೨೦೦೭,

ಗ್ರಾಮಗಳಿಗೆ ಭೆಟ್ಟಿ ನೀಡಿ, ಇತಿಹಾಸ ಪೂರ್ವದ ನೆಲೆಗಳನ್ನು ಶೋಧಿಸಿ, ಚರಿತ್ರೆಕಾರರಿಗೆ ನೆರವಾಗುವಂತೆ ತಾಲೂಕಿನ ಪ್ರಾಚ್ಯ ನೆಲೆಗಳ ಸ್ಥೂಲಸಮೀಕ್ಷೆಯೊಂದನ್ನು ಸಿದ್ಧಪಡಿಸುವುದು ಅಧ್ಯಯನದ ಗುರಿ.

ಈ ಹಿಂದಿನ ಹಲವು ಅಧ್ಯಯನಗಳನ್ನು ಗಮನಿಸಿ ಇತಿಹಾಸಕಾರರು ಗುರುತಿಸಿದ ಪ್ರಾಚ್ಯ ನೆಲೆಗಳಲ್ಲಿ ಇಂದಿನ ಸ್ಥಿತಿ-ಗತಿಗಳನ್ನು ವಿವರಿಸಲಾಗಿದೆ.

ಒಟ್ಟಿನಲ್ಲಿ ಸೀಮಿತ ಅವಧಿ ಹಾಗೂ ನಿಗಧಿತ ವ್ಯಾಪ್ತಿಯಲ್ಲಿ ತಾಲೂಕಿನ ಪ್ರಾಚ್ಯ ನೆಲೆಗಳ ವಿವರವಾದ ನಕ್ಷೆಯನ್ನು ಸಿದ್ಧಪಡಿಸುವ ಪ್ರಯತ್ನ ಇದಾಗಿದೆ.

೧.೭ ಅಧ್ಯಯನ ಸ್ವರೂಪ :

ಪ್ರಸ್ತುತ ಕಿರು ಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳನ್ನು ಸಂಯೋಜಿಸಲಾಗಿದೆ. ಮೊದಲನೆಯ ಅಧ್ಯಾಯ ನಿಬಂಧದ ಪ್ರವೇಶಿಕೆ. ಇದರಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವ್ಯಾಪ್ತಿ, ಅಗತ್ಯತೆ ಹಾಗೂ ಸಂಶೋಧನೆಯ ವಿಧಾನ ಮುಂತಾದ ವಿಷಯಗಳನ್ನು ವಿವರಿಸಲಾಗಿದೆ. ಜೊತೆಗೆ ಅಧ್ಯಯನಕ್ಕೆ ಪೀಠಿಕೆಯಾಗಿ ಕೆಲವು ಮಹತ್ವದ ವಿಷಯಗಳ ಮೇಲೆ ಬೆಳಕು ಚೆಲ್ಲಲಾಗಿದೆ.

ಎರಡನೆಯ ಅಧ್ಯಾಯ ನಿಬಂಧಕ್ಕೆ ನೆಲೆಗಟ್ಟು ನಿರ್ಮಿಸುತ್ತದೆ. ನಿಬಂಧದ ವಿಷಯ ಪ್ರಾಚ್ಯ ನೆಲೆಗಳ ಸಮೀಕ್ಷೆಯಾಗಿರುವುದುರಿಂದ ತಾಲೂಕಿನ ಇತಿಹಾಸದ ಕುರಿತು ವಿವರಗಳನ್ನು ನೀಡುವುದು ಅಗತ್ಯ. ಈ ಕಾರಣದಿಂದ ಬಾಗಿನಾಡು ಎಂದು ಖ್ಯಾತಿಗೊಂಡಿರುವ ರಾಯಬಾಗ ತಾಲೂಕಿನ ಚರಿತ್ರೆಯ ಮೇಲೆ ಬೆಳಕು ಚೆಲ್ಲಲಾಗಿದೆ.

ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳನ್ನು ಮುಂದಿನ ಮೂರು ಅಧ್ಯಾಯಗಳಲ್ಲಿ ಗುರುತಿಸಲಾಗಿದೆ. ಭೌಗೋಳಿಕ ಆಧಾರದ ಮೇಲೆ ಇವುಗಳನ್ನು ಮೂರು ವಿಭಾಗಗಳಲ್ಲಿ ವರ್ಗೀಕರಿಸಲಾಗಿದೆ.

೧. **ಕೃಷ್ಣಾ ನದಿ ತೀರದ ಪ್ರಾಚ್ಯ ನೆಲೆಗಳು**

೨. **ಬಯಲು ಪ್ರದೇಶದ ಪ್ರಾಚ್ಯ ನೆಲೆಗಳು**

೩. **ಬೆಟ್ಟಗಳಲ್ಲಿರುವ ಪ್ರಾಚ್ಯ ನೆಲೆಗಳು**

ಪ್ರಸ್ತುತ ನಿಬಂಧದ ಮೂರನೆಯ ಅಧ್ಯಾಯದಲ್ಲಿ ರಾಯಬಾಗ ತಾಲೂಕಿನ ಕೃಷ್ಣಾನದಿ ತೀರದ ಪ್ರಾಚ್ಯ ನೆಲೆಗಳನ್ನು ಗುರುತಿಸಲಾಗಿದೆ. ನಾಲ್ಕು ಹಾಗೂ ಐದನೆಯ ಅಧ್ಯಾಯಗಳು ಕ್ರಮವಾಗಿ ಬಯಲು ಪ್ರದೇಶದ ಪ್ರಾಚ್ಯ ನೆಲೆಗಳು ಹಾಗೂ ಬೆಟ್ಟ ಪ್ರದೇಶದ ಪ್ರಾಚ್ಯ ನೆಲೆಗಳನ್ನು ಸಮೀಕ್ಷಿಸುತ್ತೇವೆ.

ಆರನೆಯ ಅಧ್ಯಾಯ ಸಮಾರೋಪ, ಇದರಲ್ಲಿ ಅಧ್ಯಯನದ ಒಟ್ಟು ಫಲಿತಗಳನ್ನು ದಾಖಲಿಸಲಾಗಿದೆ. ಇದು ಈ ನಿಬಂಧದ ಸ್ಥೂಲ ವಿನ್ಯಾಸ.

೧.೮ ಅಧ್ಯಯನದ ವ್ಯಾಪ್ತಿ :

ಈ ಅಧ್ಯಯನ ರಾಯಬಾಗ ತಾಲೂಕಿನ ವ್ಯಾಪ್ತಿಗೆ ಮಾತ್ರ ಸೀಮಿತಗೊಂಡಿದೆ. ಏಕೆಂದರೆ ನಿಗದಿತ ಅವಧಿಯಲ್ಲಿ ಅಧ್ಯಯನವನ್ನು ಪೂರೈಸಬೇಕಾಗಿರುವುದರಿಂದ ಅಧ್ಯಯನದ ಭೌಗೋಳಿಕ ವ್ಯಾಪ್ತಿಯನ್ನು ಮಿತಗೊಳಿಸುವುದು ಅನಿವಾರ್ಯವಾಗುತ್ತದೆ. ಹೀಗಿದ್ದರೂ ತಾಲೂಕಿನಲ್ಲಿಯ ಒಟ್ಟು ೫೫ ಹಳ್ಳಿಗಳಿಗೆ ಪ್ರತ್ಯಕ್ಷ ಭೇಟ್ಟಿ ನೀಡಿ ಅಲ್ಲಿಯ ಪ್ರಾಚ್ಯ ಅವಶೇಷಗಳನ್ನು ಅವಲೋಕಿಸಿ, ಚರಿತ್ರೆಯನ್ನು ಕಟ್ಟಿಕೊಡಲು ಯತ್ನಿಸಲಾಗಿದೆ.

ಪ್ರಾಚ್ಯ ನೆಲೆಗಳ ಅಧ್ಯಯನ ಸುಲಭದ ಮಾತಲ್ಲ. ಅದೊಂದು ನಿರಂತರ ತಪ್ಪಸ್ಸು. ಅದಕ್ಕೆ ಉತ್ಖನ್ನನದ ನೆರವು ಪಡೆಯಬೇಕಾಗುತ್ತದೆ. ಆದರೆ ಉತ್ಖನನ ಮಾಡಿ ಅಲ್ಲಿಯ ಫಲಿತಗಳನ್ನು ದಾಖಲಿಸುವುದು ಈ ನಿಬಂಧದ ಮಿತಿಗೆ ಹೊರಲಾದ ವಿಷಯ, ಈಗಾಗಲೇ ಉತ್ಖನ್ನನಕ್ಕೆ ಒಳಪಟ್ಟ ನೆಲೆಗಳ ವಿವರಗಳನ್ನು ಪಡೆದುಕೊಂಡು ಉಳಿದ ಕೆಲವು ನೆಲೆಗಳನ್ನು ಉತ್ಖನ್ನನದ ಅಗತ್ಯವನ್ನು ಸೂಚಿಸಲಾಗಿದೆ. ತಾಲೂಕಿನಲ್ಲಿ ಉತ್ಖನ್ನನಕ್ಕೆ ಒಳಪಡಬೇಕಾದ ಬಹಳಷ್ಟು ನೆಲೆಗಳಿವೆ. ಅವುಗಳೆಡೆಗೆ ಸಂಶೋಧಕರ ಗಮನ ಸೆಳೆಯುವುದು ಮಾತ್ರ ಈ ನಿಬಂಧದ ಮೂಲೋದ್ದೇಶವಾಗಿದೆ.

೧.೯ ವೈಧಾನಿಕತೆ :

ಇದು ಕ್ಷೇತ್ರಕಾರ್ಯ ಆಧಾರಿತ ಸ್ಥಳೀಯ ಚರಿತ್ರೆಯ ಅಧ್ಯಯನ. ಕ್ಷೇತ್ರಕಾರ್ಯದಿಂದ ಶೋಧಿಸಲಾಗುವ ಪ್ರಾಚ್ಯ ಅವಶೇಷಗಳು ಅಧ್ಯಯನದ ಪ್ರಮುಖ ಆಕರಗಳು. ಭೌಗೋಳಿಕವಾಗಿ ತಾಲೂಕಿನ ವ್ಯಾಪ್ತಿಯನ್ನು ಮೂರು ವಿಭಾಗಗಳಲ್ಲಿ ವರ್ಗಿಕರಿಸಿಕೊಂಡು ತಾಲೂಕಿನ ಒಟ್ಟು ಪ್ರಾಚ್ಯ ನೆಲೆಗಳನ್ನು ಶೋಧಿಸುವುದು ಅಧ್ಯಯನದ ಪ್ರಾಥಮಿಕ ವಿಧಾನ. ಅನಂತರ ಪ್ರತಿಯೊಂದು ನೆಲೆಯನ್ನು ವಿಸ್ತೃತ ಅಧ್ಯಯನಕ್ಕೆ ಒಳಪಡಿಸಬೇಕು. ಆದರೆ ಇದು ಈ ನಬಂಧದ ವ್ಯಾಪ್ತಿಗೆ ಆಳವಡದ ವಿಷಯವಾಗುವುದರಿಂದ ಆ ಪ್ರಯತ್ನವನ್ನು ಕೈಬಿಡಲಾಗಿದೆ. ತಾಲೂಕಿನ ಒಟ್ಟು ನೆಲೆಗಳ ಸೂಚಿಯನ್ನು ಸಿದ್ಧಪಡಿಸುವುದು ಈ ಅಧ್ಯಯನ ವಿಧಾನದ ಮತ್ತೊಂದು ವೈಖರಿ. ಈ ಸ್ಥೂಲ ವಿನ್ಯಾಸವನ್ನು ಮುಂದಿಟ್ಟುಕೊಂಡು ಪ್ರಸ್ತುತ ಅಧ್ಯಯನವನ್ನು ಪೂರೈಸಲಾಗಿದೆ.

ಅಧ್ಯಾಯ : ಎರಡು

ರಾಯಬಾಗ ತಾಲೂಕಿನ ಚಾರಿತ್ರಿಕ ಹಿನ್ನೆಲೆ

ಅಧ್ಯಾಯ : ಎರಡು

ರಾಯಬಾಗ ತಾಲೂಕಿನ ಚಾರಿತ್ರಿಕ ಹಿನ್ನೆಲೆ

ಈಗ ಬೆಳಗಾವಿ ಜಿಲ್ಲೆಯ ಒಂದು ತಾಲೂಕು ಕೇಂದ್ರವಾಗಿರುವ ರಾಯಬಾಗದ ಪರಿಸರವನ್ನು ಪ್ರಾಚೀನ ಕಾಲದಲ್ಲಿ 'ಬಾಗೆ ನಾಡು' ಎಂದು ಕರೆಯುತ್ತಿದ್ದರು. ಶಾಸನಗಳು ಇದನ್ನು 'ಕುಂತಣ ಬಾಗೆ' ಎಂದು ಗುರುತಿಸುತ್ತವೆ. 'ಕುಂತಣ' ಎಂಬುದು ಕುಂತಳ ಪದದ ತದ್ಭವ; 'ಕುಂತಣ' ಎಂದರೆ ಕಂದಣ ಕರ್ನಾಟಕ. ಪ್ರಾಚೀನ ಕಾಲದಲ್ಲಿ ಕರ್ನಾಟಕವನ್ನು ಕುಂತಣ, ಕುಂತಳ, ಕುಂದಣ ಎಂದು ಕರೆಯಲಾಗುತ್ತಿತ್ತು. ರಾಯಬಾಗವನ್ನು ಶಾಸನಗಳು 'ಕುಂತಣ ಬಾಗೆ' ಎಂದು ಗುರುತಿಸುವುದು ವಿಶೇಷ ಗಮನೀಯ. ರಾಯಬಾಗ ತಾಲೂಕಿನಲ್ಲಿಯ ಒಂದು ಗ್ರಾಮವಾಗಿರುವ ಈಗಿನ ಕಂಕಣವಾಡಿ ಪ್ರಾಚೀನ ಕರ್ನಾಟಕದ ಕಂಕಣೂರು. ಇದು ರಟ್ಟರ ಉಪರಾಜಧಾನಿಯಾಗಿತ್ತು. ಬೆಳಗಾವಿ ಜಿಲ್ಲೆ ಅನೇಕ ಅರಸು ಮನೆತನಗಳ ಆಡಳಿತಕ್ಕೆ ಒಳಪಟ್ಟಿತ್ತು. ಶಾತವಾಹನರಿಂದ ಮೊದಲುಗೊಂಡು ಕದಂಬ, ಬಾದಾಮಿ, ಚಾಲುಕ್ಯ, ರಾಷ್ಟ್ರಕೂಟ, ಕಲ್ಯಾಣದ ಚಾಲುಕ್ಯ, ಯಾದವ, ಹೊಯ್ಸಳ, ದಿಲ್ಲಿಯ ಮೊಘಲ್, ವಿಜಯನಗರ, ಬಿಜಾಪೂರದ ಆದಿಲ್ ಷಾಹಿ, ಮರಾಠಾ, ಪೇಶ್ವೆಗಳವರೆಗಿನ ರಾಜಮನೆತನಗಳು ಆಡಳಿತ ಮಾಡಿದ ಮೇಲೆ ಬ್ರಿಟಿಷರ ವಶವಾಯಿತು. ಬೆಳಗಾವಿ ಜಿಲ್ಲೆಯಲ್ಲಿ ಈ ಎಲ್ಲ ರಾಜಮನೆತನಗಳ ಆಡಳಿತದ ಅವಶೇಷಗಳು, ದಾಖಲೆಗಳು, ಶಾಸನಗಳು ಸಿಗುತ್ತವೆ. ಆದರೆ ರಾಯಬಾಗ ತಾಲೂಕಿನ ಚರಿತ್ರೆ ಆರಂಭಗೊಳ್ಳುವುದು ೧೧ನೇ ಶತಮಾನದಿಂದ. ೧೧ನೇ ಶತಮಾನದ ಹಿಂದಿನ ಅಂದರೆ, ಇತಿಹಾಸಯುಗದ ಆರಂಭದಿಂದ ೧೧ನೇ ಶತಮಾನದವರೆಗಿನ ಇತಿಹಾಸದ ಯಾವ ದಾಖಲೆಗಳು ರಾಯಬಾಗ ತಾಲೂಕಿನಲ್ಲಿ ಸಿಗುವುದಿಲ್ಲ.

ರಾಯಬಾಗ ತಾಲೂಕನ್ನೊಳಗೊಂಡು ಇಂದಿನ ಬೆಳಗಾವಿ ಜಿಲ್ಲೆಯ ಬಹುಭಾಗ ಪ್ರಾಚೀನ ಕರ್ನಾಟಕದ ಕುಹೂಂಡಿ ಮೂಸಾಸಿರ ವಿಭಾಗಕ್ಕೊಳಪಟ್ಟಿತ್ತು. ಕ್ರಿ.ಶ. ೯೩೦ ರಿಂದ ೧೨೩೦ರ ವರೆಗಿನ ಸುಮಾರು ೩೦೦ ವರ್ಷಗಳ ಕಾಲ ಸವದತ್ತಿ ರಟ್ಟರು ಇದನ್ನು ಆಳಿದರು. ಅದಕ್ಕೆ ಮೊದಲು ಇದು ಕಲ್ಯಾಣದ ಚಾಲುಕ್ಯರ ಆಡಳಿತಕ್ಕೆ ಸೇರಿತ್ತು. ಈಗ ರಾಯಬಾಗ ತಾಲೂಕಿನ ಬಹಳಷ್ಟು ಪ್ರಾಚೀನ ದೇವಾಲಯಗಳು ಬಾದಾಮಿ ಚಾಲುಕ್ಯರ ವಾಸ್ತು ಮಾದರಿಯಲ್ಲಿರುವುದನ್ನು ಗಮನಿಸಿದರೆ

ಅವರು ಈ ಭಾಗದಲ್ಲಿ ಆಡಳಿತ ನಡೆಸಿರಬಹುದೆಂದು ಊಹಿಸಬಹುದಾಗಿದೆ. ಆದರೆ, ಶಾತವಾಹನರು, ಕದಂಬ, ಬಾದಾಮಿ, ಚಾಲುಕ್ಯರ ಆಡಳಿತದ ದಾಖಲೆಗಳಾಗಲೀ, ಚರಿತ್ರೆಯಲ್ಲಿ ಉಲ್ಲೇಖಗಳಾಗಲೀ ಸಿಗುತ್ತಿಲ್ಲ. ರಾಯಬಾಗ ತಾಲೂಕಿನ ಅತ್ಯಂತ ಪ್ರಾಚೀನ ಶಾಸನಗಳು ೧೧ನೇ ಶತಮಾನದವು. ಇದೇ ಕಾಲದಲ್ಲಿ ಇಲ್ಲಿಯ ರಾಜಾದಿತ್ಯನೆಂಬ ಕವಿ ರಾಯಬಾಗವನ್ನು ಪಂಪ ಬನವಾಸಿಯನ್ನು ವಿಶ್ಲೇಸಿದಂತೆ ವರ್ಣಿಸುತ್ತಾನೆ.

ಚಾಗದ ಚಲದ ನೆಗಳ್ತೆಯ
ಭೋಗದ ಮಾನ್ಯತೆಯ ಜೈನತನದ ಮಹತ್ವ
ಕ್ಕಾಗರಮೆನೆ ಗಾರ್ಹಸ್ಥ್ಯಂ
ಬಾಗೆ ನಿಜಾನ್ವಯದ ಜನ್ಮಭೂಮಿಯೆನಿಕ್ಕುಂ

ಇದು ಕವಿ ರಾಜಾದಿತ್ಯನ ಪೂವಿನಬಾಗೆಯ ವರ್ಣನೆ. ರಾಜಾದಿತ್ಯನ ಕಾಲ ಕ್ರಿ.ಶ. ಸು ೧೧೯೦. ಈತ ಕನ್ನಡದ ಮೊದಲ ಗಣಿತ ವಿಜ್ಞಾನ. ಆತನು ವ್ಯವಹಾರ ಗಣಿತದಲ್ಲಿ ಈ ನಾಡಿನ ವೈಭವವನ್ನು ಬಣ್ಣಿಸುವನು–

ವನತತಿಯಿಂದ ನದೀ ನದ ಕುಭೃತ್ಕುಲದಿಂ ಧನಧಾನ್ಯವರ್ಗದಿಂ
ಜನಪದರಾಜಿಯಿಂ ಬೆಳೆವ ಕಯ್ವೊಲದಿಂದೆಸೆವೊರ್ಗಳಿಂ ಜಗ.
ಜ್ಜನನುತಜೈನಧರ್ಮದ ನೆಗಳ್ತೆಯಿನೊಪ್ಪಿರೆ ಕೂಂಡಿಮಂಡಲ
ಕ್ಕನುಪಮರತ್ನ ಮಂಡನವೆನ್ನಿಪ್ಪಿದು ಹೂವಿನಬಾಗೆ ಸಂತತಂ ॥

ಪೊಸ ಪೊಂಗೇದಗೆ ಜಾಜಿ ಪಾಟಲಿ ಲಸತ್ಸೇವಂತಿ ನೀಲಾಬ್ಜಮು
ದ್ಧಸರೋಜಂ ಸೂರಹೊನ್ನೆ ಸಂಪಗೆ ನವೋದ್ಯನ್ಮಲ್ಲಿಕಾದಿಪ್ರಸೂ
ನ ಸಮೂಹಂ ತನಗಂಪನೆಣ್ದೆಸೆಗೆ ನಿಚ್ಚಂ ಬೀಸಲನ್ವರ್ಥಮಾ
ಗೆಸೆಗುಂ ಪೂವಿನಬಾಗೆಯೆಂಬ ಪೆಸರಿಂದಿಂಬಾಗಿ ಚೆಲ್ವಾಗಿರಲ್ ॥

ವಿನಿತರ್ ನೀತಿದರ್ ಕರ
ಮನುನಯದಿಂದ ದಾನಧರ್ಮ ವಿವಿಧಾಕಾರರ್
ಧನಕನಕ ಸಮೃದ್ಧರ್ ಪೂ
ವಿನಬಾಗೆಯ ವಿಪ್ರವರ್ಯ ಶೂದ್ರಾದಿಜಂ ॥

ಪ್ರಾಚೀನ ಕಾಲದಲ್ಲಿ 'ಪೂವಿನ ಬಾಗೆ' ಒಂದು ಘಟಕಾಸ್ಥಾನವಾಗಿತ್ತು. ಕ್ರಿ.ಶ. ೧೧೩೪ರ ೨ನೇ ಜಗದೇಕ ಮಲ್ಲನ ಶಾಸನ ಈ ವಿಷಯವನ್ನು ತಿಳಿಸುತ್ತದೆ. ಅದು ಪೂವಿನ ಬಾಗೆಯನ್ನು

ಮಹಾಘಟಕಾಸ್ಥಾನವೆಂದು ಬಣ್ಣಿಸುತ್ತದೆ. ಕ್ರಿ.ಶ. ೧೨೬೩ರ ಹಣ್ಣಿಕೇರಿ ಶಾಸನ ಹೂವಿನ ಬಾಗೆಯನ್ನು ತೆಂಕಲು ಬಾಗೆ ಎಂದು ಕರೆಯುತ್ತದೆ. ಆ ಶಾಸನ ರಾಯಬಾಗಕ್ಕೆ ತೀರ್ಥ ಕ್ಷೇತ್ರದ ಮಾನ್ಯತೆ ನೀಡಿದೆ. ಉತ್ತರದಲ್ಲಿ ಪ್ರಯಾಗ ಮಹಾಕ್ಷೇತ್ರ ಅದರಂತೆ ಪರ್ಷಿಯಾದಲ್ಲಿ ತೆಂಕಲು ಬಾಗೆ. ರಾಯಬಾಗ ಪರಿಸರದಲ್ಲಿ ಅನೇಕ ಪ್ರಾಚೀನ ದೇವಾಲಯಗಳಿದ್ದು, ಅವು ಐತಿಹಾಸಿಕ ಮಹತ್ವವನ್ನು ಪಡೆದುಕೊಂಡಿವೆ. ರಾಯಬಾಗ ಜೈನ ಕೇಂದ್ರವಾಗಿತ್ತು. ಬೆಳಗಾಂವಿ ಜಿಲ್ಲೆಯ ಗೆಜೆಟಿಯರ ಆಗಿನ ಜೀನಾಲಯಗಳನ್ನು ಸವಿವರವಾಗಿ

ರಾಯಬಾಗದ ಜೈನಗಲ್ಲಿಯಲ್ಲಿ ಪುರಾತನ ಬಸದಿಯಿದ್ದು ಅದು ಕಲ್ಯಾಣಿ ಚಾಲುಕ್ಯರ ನಂತರದ ಶೈಲಿಯಲ್ಲಿದೆ. ಚಿತ್ರಾಕಾರದ ಗರ್ಭಗೃಹದ, ಅರ್ಧಮಂಟಪ ಮತ್ತು ಮುಖ ಮಂಟಪಗಳಿವೆ. ಗರ್ಭಗೃಹದಲ್ಲಿ ಪ್ರಥಮ ತೀರ್ಥಂಕರ ಆದಿನಾಥನ ಶಿಲೆಯ ಸಿದ್ಧಾಸನದ ಮೂರ್ತಿ ಇದೆ. ಬದಿಯಲ್ಲಿ ಯಕ್ಷ-ಯಕ್ಷಿಯರ ಮೂರ್ತಿಗಳಿಲ್ಲ. ಗರ್ಭಗೃಹದ ಮೇಲಿನ ಶಿಖರವು ಕದಂಬ ನಾಗರ ಶೈಲಿಯಲ್ಲಿದ್ದು ಜೀರ್ಣೋದ್ಧಾರಗೊಂಡಿದೆ. ಗರ್ಭಗೃಹದ ಪ್ರವೇಶ ದ್ವಾರದ ಲಲಾಟದ ಮಧ್ಯ ಜೀನಬಿಂಬದ ಕೆತ್ತನೆಯಿದ್ದು ಬಾಗಿಲು ಸುಂದರ ಸುಳುವಿನಲ್ಲಿ ಕೆತ್ತಲ್ಪಟ್ಟಿದೆ.

ಅರ್ಧಮಂಟಪದ ಮೇಲ್ಛಾವಣಿಯಲ್ಲಿ ಕಮಲವಿದ್ದು, ಅದರ ಪ್ರವೇಶದ್ವಾರವು ಅಲಂಕೃತವಾಗಿದೆ. ಅಲ್ಲಿ ೨೩ನೇಯ ತೀರ್ಥಂಕರ ಪಾರ್ಶ್ವನಾಥನ ಖಡ್ಗಾಸನದ ಮೂರ್ತಿಯ ಕಪ್ಪು ಶಿಲೆಯಲ್ಲಿ ಸುಮಾರು ೨ ಅಡಿ ಎತ್ತರವಾಗಿದ್ದು, ಬಲ ಹಿಮ್ಮಡದಿಂದ ಸುರುಳಿಯಾಕಾರದ ಹಾವಿನ ಕೆತ್ತನೆಯಿದೆ. ತಲೆಯ ಮೇಲೆ ಮುಕ್ಕೊಡಿಯಿದ್ದು, ಅದರ ಮೇಲೆ ಏಳು ಹೆಡೆಗಳನ್ನು ಕೆತ್ತಲಾಗಿದೆ. ಬಲ ಬದಿ ಯಕ್ಷ-ಧರಣೇಂದ್ರ, ಎಡಬದಿ ಯಕ್ಷಿ ಪದ್ಮಾವತಿಯರ ಅಭಯ ಹಸ್ತದ, ಅಲಂಕೃತ ಲಲಿತಾಸನದ ಮೂರ್ತಿಗಳಿದ್ದು, ಮೇಲೆ ಒಂದೊಂದು ಹೆಡೆಯ ಹಾವಿನ ಕೆತ್ತನೆಯಿದೆ. ಪಾದಪೀಠದ ಶಾಸನ ಸವೆದು ಹೋಗಿದೆ.

ಈ ಪಾರ್ಶ್ವನಾಥ ಮೂರ್ತಿ ಪಕ್ಕದಲ್ಲಿ ಎಂಟನೇಯ ತೀರ್ಥಂಕರ ಚಂದ್ರಪ್ರಭನ ಸಿದ್ಧಾಸನದ ಕಪ್ಪು ಶಿಲೆಯ ಮೂರ್ತಿಯಿದ್ದು, ಪಕ್ಕದಲ್ಲಿ ಯಕ್ಷ-ಯಕ್ಷಿಯರ ಮೂರ್ತಿಗಳಿಲ್ಲ. ಅವೆರಡೂ ಮೂರ್ತಿಗಳು ಸುಮಾರು ೧೦ನೇಯ ಶತಮಾನದ್ದಾಗಿದೆ. ಮುಖಮಂಟಪದಲ್ಲಿ ಎರಡು ಬದಿಗಳಲ್ಲಿ ಯಕ್ಷ-ಯಕ್ಷಿಯರಿಗೆ ಕೋಷ್ಠಗಳನ್ನು ಕೆತ್ತಲಾಗಿದೆ. ಮುಖಮಂಟಪದ ಮಧ್ಯದ ನಾಲ್ಕು ಕಂಬಗಳು ಸುಂದರವಾದ ಕೆತ್ತನೆಯಿಂದ ಕೂಡಿದ್ದು, ಮಧ್ಯದಲ್ಲಿ ಎತ್ತರವಾದ ಜಗುಲಿಯಿದ್ದು ಸುತ್ತಲೂ ಕಕ್ಷಾಸನಗಳಿವೆ. ಇವುಗಳ ಮೇಲೆ ಸುಂದರ ಉಬ್ಬು ಶಿಲಾಕಲಾಕೃತಿಗಳನ್ನು ಕೆತ್ತಲಾಗಿದೆ.

ಪ್ರಸ್ತುತ ಬಸದಿಯು ಕ್ರಿ.ಶ. ೧೦೪೦ರ ಸುಮಾರಿನಲ್ಲಿ ಕಟ್ಟಿರಬಹುದಾಗಿದೆ. ಕ್ರಿ.ಶ. ೧೨೦೧ರ ರಾಯಬಾಗದ ಒಂದು ಜೈನ ಶಾಸನವನ್ನು ಸವದತ್ತಿ ರಟ್ಟರ ४ನೆಯ ಕಾರ್ತವೀರ್ಯನು ಹೇಳಿ ಬರೆಸಿದ್ದಾನೆ. ಈ ಶಾಸನದಲ್ಲಿ ಸವದತ್ತಿ ರಟ್ಟರ ಎರಗನು (ಕ್ರಿ.ಶ. ೧೦೪೦) ತನ್ನ ದಂಡಾಧಿಕಾರಿಯಾದ ಮಾದಿರಾಜನಿಗೆ ಯಾಪನೀಯ ಸಂಘದ ಮೂಲಬಸದಿಗಾಗಿ ಮತ್ತು ಮೂಲಸಂಘದ ಬಸದಿಗಾಗಿ ಭೂಮಿಯನ್ನು ಸರ್ವಬಾಧಾ ಪರಿಹಾರವಾಗಿ ದಾನ ಮಾಡಿದ್ದಾನೆ. ಈ ಶಾಸನದಲ್ಲಿ ರಾಯಬಾಗದಲ್ಲಿ

ಒಂದು ದಿಗಂಬರ ಮತ್ತು ಒಂದು ಯಾಪನೀಯ ಸಂಘದ ಬಸದಿಗಳಿರುವುದು ಸ್ಪಷ್ಟವಾಗುತ್ತದೆ. ರಟ್ಟರ ಅರಸು ಎರಗನ ಕಾಲ ಕ್ರಿ.ಶ. ೧೦೪೦. ಇವನು ಈ ಎರಡು ಬಸದಿಗಳಿಗೆ ದಾನವಾಗಿ ನೀಡಿದ ವಿವರಗಳನ್ನು ಹೇಳುವ ಶಾಸನ ಮುಂದುವರೆದು, ಪ್ರಭು ಪ್ರಧಾನವಾದ ಅವನು ಅವೆರಡೂ ಬಸದಿಗಳನ್ನು ಜೀರ್ಣೋದ್ಧಾರ ಮಾಡಿಸಿ ಪ್ರೀತಿಗೆ ಪಾತ್ರನಾದನು. ಎಂದಿದೆ. ಇದರಿಂದ ಈ ಬಸದಿಗಳನ್ನು ಕ್ರಿ.ಶ ೧೦೪೦ರ ಸುಮಾರಿಗಿಂತ ಮುಂಚಿತವಾಗಿ ಕಟ್ಟಲಾಗಿದೆ ಎಂದು ಊಹಿಸಲಾಗಿದೆ.

ಕ್ರಿ.ಶ. ೧೧೩೯ರ ಕೊಲ್ಲಾಪೂರದಲ್ಲಿ ದೊರೆತ ಒಂದು ಜೈನ ಶಾಸನ ೧೧ನೇ ಜಗದೇಕಮಲ್ಲನ ಕಾಲದ್ದಾಗಿದೆ. ಅದರಲ್ಲಿ ಮೂರ್ತಿಯಾಗಿದ್ದ ಶ್ರೀಮದ್ದಂಡನಾಯಕ ದಾಸಿಮರಸರು ಮತ್ತು ಅವನ ಪತ್ನಿ ಯಕ್ಕದೇವಿಯರು ಹೂವಿನ ಬಾಗೆ ಮಹಾ ಅಗ್ರಹಾರದಲ್ಲಿ ಮಾರಸಿಂಗಸೆಟ್ಟಿಯು ಕಟ್ಟಿಸಿದ ಬಸದಿಯ ಜನಪೂಜೋತ್ಸವ (ಪಂಚಕಲ್ಯಾಣ)ವನ್ನು ನೋಡಲು ಬಂದು ಕುವಾರ ಕೀರ್ತಿಪಂಡಿತದೇವರಿಗೆ ಭೂಮಿಯನ್ನು ದಾನ ಮಾಡಿದ್ದಾರೆ.

ಕ್ರಿ.ಶ ೧೧೩೯ರಲ್ಲಿ ಮಾರಸಿಂಗ ಸೆಟ್ಟಿಯು ಕಟ್ಟಿಸಿದ ಬಸದಿಯು ಯಾವ ತೀರ್ಥಂಕರನೆಂದು ಸ್ಪಷ್ಟವಾಗಿ ತಿಳಿದು ಬಂದಿಲ್ಲ. ಅದರ ಆಚಾರ್ಯರು ಯಾಪನೀಯ ಸಂಘದವರಿದ್ದುದರಿಂದ ಅದು ಬಹಶಃ ಯಾವಪನೀಯ ಸಂಘದ ಬಸದಿಯಾಗಿರುವ ಸಾಧ್ಯಗಳಿವೆ.

ರಾಯಬಾಗದಿಂದ ಸುಮಾರು ೨ ಕಿ.ಮೀ. ದೂರದ ಚಿಂಚಲಿಗೆ ಹೋಗುವ ಮಾರ್ಗದ ಬದಿಯಲ್ಲಿ ಒಂದು ಬಸದಿ ಇದೆ, ಅದನ್ನು ಗಡಬಸದಿಯೆಂದು ಕರೆಯುತ್ತಾರೆ. ಅದು ಕಲ್ಯಾಣಿ ಚಾಲುಕ್ಯರ ಶೈಲಿಯಲ್ಲಿದ್ದು ಗರ್ಭಗೃಹ, ನವರಂಗ ಮತ್ತು ಮುಖಮಂಟಪ ಹೊಂದಿದೆ. ಗರ್ಭಗೃಹದಲ್ಲಿ ೨೪ನೇ ತೀರ್ಥಂಕರ ಮಹಾವೀರನ ಕಪ್ಪು ಶಿಲೆಯ ಸುಮಾರು ೩ ಅಡಿ ಎತ್ತರದ ಖಡ್ಗಾಸನದ ಮೂರ್ತಿಯಿದ್ದು, ಅದರ ತಲೆಯ ಮೇಲೆ ಮುಕ್ಕೊಡೆಯ ಕೆತ್ತನೆಯಿದೆ. ಯಕ್ಷ-ಯಕ್ಷಿಯರ ಅಭಯ ಹಸ್ತದ, ಅಲಂಕೃತ, ಲಲಿತಾಸನದ ಮೂರ್ತಿಗಳಿವೆ. ಪಾದಪೀಠದಲ್ಲಿಯ ಶಾಸನ ಸೆದು ಹೋಗಿದೆ. ನವರಂಗದ ಮೇಲ್ಛಾವಣಿಯಲ್ಲಿ ಕಮಲದ ಕೆತ್ತನೆಯಿದ್ದು, ಬಾಗಿಲ ಲಲಾಟದ ಮಧ್ಯ ಜಿನಬಿಂಬದ ಕೆತ್ತನೆ ಇದೆ. ಮುಖಮಂಟಪದಲ್ಲಿ ಎರಡೂ ಬದಿಗಳಲ್ಲಿ ಯಕ್ಷ-ಯಕ್ಷಿಯರಿಗೆ ಎರಡು ಕೋಷ್ಠಗಳನ್ನು ಕೆತ್ತಲಾಗಿದೆ. ಗರ್ಭಗೃಹದ ಶಿಖರವು ಜೀರ್ಣೋದ್ದಾರಗೊಂಡಿದ್ದು ಮುಖಮಂಟಪದಲ್ಲಿ ಕೆತ್ತನೆಯಿಂದ ಕೂಡಿದ ಮಧ್ಯದ ನಾಲ್ಕು ಕಂಬಗಳ ನಡುವೆ ಎತ್ತರವಾದ ಜಗುಲಿಯಿದೆ. ಅದು ಸಾಧಾರಣ ಸ್ಥಿತಿಯಲ್ಲಿದೆ. ಪ್ರಸ್ತುತ ಈ ಗ್ರಾಮದ ಶೆಟ್ಟಿಗಲ್ಲಿಯಲ್ಲಿರುವ ಬ್ರಹ್ಮದೇವರ ಗುಡಿಯ ಹಿಂಬದಿಯಲ್ಲಿ ಕಪ್ಪುಶಿಲೆಯ ಸುಮಾರು ೪ ಅಡಿ ಎತ್ತರದ ಒಂದು ತೀರ್ಥಂಕರನ ಖಡ್ಗಾಸನದ ಮೂರ್ತಿಯಿದೆ. ಇದರ ಬಲ ಮತ್ತು ಎಡಬದಿಗಳಲ್ಲಿ ಯಕ್ಷ-ಯಕ್ಷಿಯರ ಮೂರ್ತಿಗಳಿವೆ. ಪಾದಪೀಠದಲ್ಲಿಯ ಶಾಸನ ಸಂಪೂರ್ಣವಾಗಿ ಸವೆದು ಹೋಗಿದೆ. ಇದು ಶಿಲ್ಪ ಶೈಲಿಯಿಂದ ೧೦ನೇ ಶತಮಾನದ್ದಾಗಿದೆ. ಇವೆಲ್ಲವುಗಳಿಂದ ರಾಯಬಾಗದಲ್ಲಿ ನಾಲ್ಕು ಬಸದಿಗಳಿರುವುದು ಸ್ಪಷ್ಟವಾಗುತ್ತದೆ."

ಡಾ. ಬಿ. ಆರ್. ಹಂದೂರ; ಜೈನ ಪರಂಪರೆ ಬೆಳಗಾವಿ ಪ್ರಾದೇಶಿಕ ಕೊಡುಗೆ ಪುಟ-೯೧ ರಿಂದ ೯೩ ಅಜೀತ ಕುಚನೂರೆ ಪ್ರಕಾಶನ, ಬಿಜಾಪೂರ-೨೦೦೩

ಗಣಿತ ಕೋವಿದ ಕವಿ ರಾಜಾದಿತ್ಯ ಕನ್ನಡದ ಮೊದಲ ಗಣಿತ ಶಾಸ್ತ್ರಜ್ಞ. ಕುಂತಲದ ಭಾಸ್ಕರ ಇತನೊಂದಿಗೆ ರಾಯಬಾಗ ತಾಲೂಕಿನ ಸಾಹಿತ್ಯ ಚಾರಿತ್ರೆಯ ಮೊದಲ ಸಂಪುಟದ ಮೊದಲ ಪುಟ ತೆರೆಯುತ್ತದೆ. ಕವಿ ಚರಿತೆಕಾರರು ಇತನ ಕಾಲವನ್ನು ಕ್ರಿ.ಶ. ೧೧೯೧ ಎಂದು ಊಹಿಸಿರುವರು. ಕೆಲವರು ಈತ ಊರು ಹೂವಿನ ಹಡಗಲಿ, ಬಾಗೆವಾಡಿ ಇತ್ಯಾದಿಯನ್ನು ಹೋಲುವಂತಿದೆ ಎಂದು ಸಂದೇಹ ಸೂಚಿಸಿದ್ದರು. ಆದರೆ ಇವನು ಹೂವಿನ ಬಾಗೆಯೆಂದು ಪ್ರಸಿದ್ಧವಾದ ರಾಯಬಾಗದವನು ಎಂಬುದರಲ್ಲಿ ಎರಡು ಮಾತಿಲ್ಲ. ರಾಜ-ರಾಜವರ್ಮ, ಭಾಸ್ಕರ, ಬಾಚೆಯ ಮುಂತಾದ ಹೆಸರುಗಳಿಂದ ಪ್ರಸಿದ್ಧವಾಗಿದ್ದ ರಾಜಾದಿತ್ಯ ಆರು ಗಣಿತ ಕೃತಿಗಳನ್ನು ಕನ್ನಡಕ್ಕೆ ನೀಡಿದ್ದಾನೆ.

ಈತನ ತಂದೆ ಶ್ರೀಪತಿ, ತಾಯಿ ವಸಂತಾ, ಹೆಂಡತಿ ಕನಕಮಾತಿ. ದೈವ ನೇಮಿನಾಥ ಶುಭ ಚಂದ್ರ ಮುನಿಗಳು ಗುರುಗಳು ಇತನ ಆಶ್ರಯದಾತರು ಬಾಹುಬಲಿ, ಭರತರು. ಈ ಬಾಹುಬಲಿ ಭರತರು ಹೊಯ್ಸಳ ಎರಡನೇಯ ಬಲ್ಲಾಳ (ಕ್ರಿ.ಶ. ೧೧೭೩-೧೨೨೦)ನ ದಂಡನಾಯಕರು 'ವ್ಯವಹಾರ ಗಣಿತದ ಹಸ್ತಪ್ರತಿಯಲ್ಲಿ ವಿಷ್ಣುಪಾಲನ ಹೆಸರಿದೆ. ಇತ ಹೊಯ್ಸಳ ವಿಷ್ಣುವರ್ಧನನೇ ಆಗಿರಬೇಕು. ವಿಷ್ಣುವರ್ಧನನ ಆಸ್ಥಾನ ಪಂಡಿತನಾಗಿರಬಹುದು. ಈ ಆಧಾರದ ಎಳೆಯನ್ನು ಹಿಡಿದುಕೊಂಡು 'ಬಾಗೆನಾಡು' ಹೊಯ್ಸಳರ ಆಡಳಿತಕ್ಕೆ ಸೇರಿರಬಹುದೆಂದು ಊಹಿಸಬಹುದೆಂದು ಊಹಿಸಬಹುದು. ಈ ಊಹೆಗೆ ಪೂರಕವೆಂಬಂತೆ ಕಂಕಣವಾಡಿಯಲ್ಲಿ ಹೊಯ್ಸಳ ಲಾಂಛನದ ಒಂದು ಶಿಲ್ಪವಿದೆ. ಅಲ್ಲಿಯ ಲಕ್ಷ್ಮೀ ದೇವಾಲಯದ ಬೆನ್ನು ಗೋಡೆಯಲ್ಲಿ ಈ ಶಿಲ್ಪವಿದೆ.

ಪುಲಿಗೆರೆಯ ತಿರುಳ್ಗನ್ನಡಂತೆ ಕುಂತಣ ಬಾಗೆಯ ಕನ್ನಡ ಒಂದು ಪರಿಭಾಷೆಯಾಗಿತ್ತು. ಕವಿ ರಾಜಾದಿತ್ಯ ತಾನು ಬಾಗೆಯ ಪರಿಭಾಷೆಯಲ್ಲಿ ಬರೆದಿರುವುದಾಗಿ ಹೆಮ್ಮೆಯಿಂದ ಹೇಳಿಕೊಳ್ಳುವನು. ಬಾಗೆಯ ಬಂಕನಾಥ ಈ ಭಾಗದಲ್ಲಿ ಸುಪ್ರಸಿದ್ಧ. ಈಗಲೂ ರಾಯಬಾಗದಲ್ಲಿ ಬಂಕನಾಥ ದೇವಾಲಯವನ್ನು ಕಾಣಬಹುದು.

ಬಾಗೆಯ ಬಂಕನಾಥ, ಸಂಕೇಶ್ವರದ ಸಂಕನಾಥ, ಕೊಪ್ಪದ ಕೊಪ್ಪನಾಥ ಇವು ಕುಂತಲನಾಡಿನ ಪ್ರಾಚೀನ ದೇವಾಲಯಗಳು. ಆದರೆ ಈಗ ಕೊಪ್ಪದ ಕೊಪ್ಪನಾಥ ದೇವಾಲಯವನ್ನು ಹೊರತುಪಡಿಸಿದರೆ ಉಳಿದೆಡೆಗಳಲ್ಲಿ ಪ್ರಾಚೀನ ಶಿಲ್ಪ ವೈಭವ ಕಾಣಸಿಗುವುದಿಲ್ಲ.

ಪ್ರಾಚೀನ ಕರ್ನಾಟಕದ ಒಂದು ಭಾಗವಾಗಿದ್ದ ಕುಹೂಂತಿ ಮಂಡಲದಲ್ಲಿ ೧೪ ವಿಭಾಗಗಳಿದ್ದವು. ಅವುಗಳೆಂದರೆ:

೧. ತೇರದಾಳ ೧೨

೨. ಕುರುಂಬೆಟ್ಟ ಕಂಪಣ

೩. ಸೊಗಲು ೩೦ (ಸೊಗಲ)

೪. ಸುಗಂಧವರ್ತಿ ೧೨

೫. ಹೊರಗಟ್ಟಿ ಸಪ್ತಪದಿ (ಯರಗಟ್ಟಿ)

೬. ಹುಬ್ಬಳ್ಳಿ ೧೨ (ಎಮ್.ಕೆ. ಹುಬ್ಬಳ್ಳ)

೭. ವೇಳುಗ್ರಾಮ (ವೇಣುಗ್ರಾಮ)

೮. ವಸ್ತುಗಾಂವ (ಉಚಗಾಂವ)

೯. ಕೊರವಲ್ಲಿ ಕಂಪಣ ೧೫೦ (ಇಂದಿನ ಜೋಡ ಕುರುಳಿ)

೧೦. ನೂಲೆನಾಡು

೧೧. ಕುಂದರಗಿ ಕಂಪಣ

೧೨. ನೇಸರಗಿ ೬

೧೩. ಪೂವಿನಬಾಗಿ (ಇಂದಿನ ರಾಯಬಾಗ)

೧೪. ಕುಹೂಂಡಿ ಪಟ್ಟಣ

ಮಳಖೇಡದ ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ಹಾಗೂ ಕಲಚೂರ್ಯರಿಗೆ ಮಾಂಡಲಿಕರಾಗಿ ಮತ್ತು ಕೆಲಕಾಲ ಸ್ವತಂತ್ರರಾಗಿ ಮುನ್ನೂರು ವರ್ಷಗಳವರೆಗೆ 'ಕುಹೂಂಡಿ' ಮಂಡಲವನ್ನು ಆಳಿದ ಶ್ರೇಯಸ್ಸು ಸವದತ್ತಿಯ ರಟ್ಟರದು, ತೇರದಾಳ, ರಾಯಬಾಗ, ಯಕ್ಸಂಬಾ, ಕಲ್ಲೋಳಿ, ಕೊಣ್ಣೂರು, ಸಂಕೇಶ್ವರ ಮುಂತಾದವು ಇವರ ಆಡಳಿತದ ಪ್ರಮುಖ ಕೇಂದ್ರಗಳು.

ಬಾಗೆನಾಡಿನಲ್ಲಿ ಚಾಲುಕ್ಯ ಹಾಗೂ ರಾಷ್ಟ್ರಕೂಟರ ಶಾಸನಗಳು ಸಿಗುವುದಿಲ್ಲ. ಆದರೆ ಕಲ್ಯಾಣ ಚಾಲುಕ್ಯರ ಪ್ರಸಿದ್ಧ ದೊರೆ ೬ನೇ ವಿಕ್ರಮಾದಿತ್ಯನ ಆಡಳಿತವನ್ನು ಸಾಕ್ಷೀಕರಿಸುವ ಶಾಸನಗಳು ಪೂವಿನಬಾಗೆಯಲ್ಲಿವೆ. ಆ ಕಾಲದಲ್ಲಿ ಪೂವಿನಬಾಗೆಯನ್ನು ಆಳುತ್ತಿದ್ದ ಮಹಾಮಂಡಳೇಶ್ವರ ಕೋಂಗಜರಸರು ೬ನೇ ವಿಕ್ರಮಾದಿತ್ಯನ ಅಳಿಯ. ವಿಕ್ರಮಾದಿತ್ಯನ ಅರಸಿ ಪದ್ಮಲದೇವಿಯ ಸಹೋದರನಾಗಿರಬೇಕು. ಕೂಂಗಜರಸರು ವಿಕ್ರಮಾದಿತ್ಯನ ಅಳಿಯನೆಂದು ರಾಯಬಾಗದ ಶಾಸನದಿಂದಲೇ ಗೊತ್ತಾಗುತ್ತದೆ.

ಚಕ್ರವರ್ತಿ ವಿಕ್ರಮನು ಪರಮಾರರ ರಾಜಧಾನಿಯಾದ ಧಾರಾನಗರಕ್ಕೆ ದಂಡೆತ್ತಿ ಹೋಗುವಾಗ ಮಹಾಮಂಡಳೇಶ್ವರ ಕೂಂಗಜರಸನು ತನ್ನ ಸೈನ್ಯದ ತುಕುಡಿಯೊಂದಿಗೆ ಹೋಗುತ್ತಾನೆ. ಯುದ್ಧದಲ್ಲಿ ಜಯ ಚಾಲುಕ್ಯ ಚಕ್ರವರ್ತಿಗೆ ಲಭಿಸುತ್ತದೆ. ಮರಳಿ ಬರುವಾಗ ಮಾಂಡಳಿಕನಾಗಿದ್ದ ಶಿಲಾಹಾರ ಭೋಜನು ಚಕ್ರವರ್ತಿಯ ವಿರುದ್ಧ ಯುದ್ಧ ಸಾರುತ್ತಾನೆ. ಈ ಯುದ್ಧದಲ್ಲಿ ಮಹಾಮಂಡಳೇಶ್ವರ ಕೂಂಗಜರಸನೂ ಭೋಜನೂ ಮುಖಾಮುಖಿಯಾಗಿ ಕಾದಾಡುತ್ತಾರೆ. ಆ ಸಮಯದಲ್ಲಿ ಕೂಂಗಜರಸನ ನಾಯಕನಾದ ಚಂಡರಸನು ಭೋಜನು ಕುಳಿತಿದ್ದ ಆನೆಯ ಕಡೆಗೆ ನುಗ್ಗಿ ಆ ಆನೆಯ ಪಾಳಿಯ ಮೊಗಮ (ರಕ್ಷಾ ಕವಚ) ಕಿತ್ತು ನಾಯಕರನ್ನು ಕೊಂದು ಮಡಿಯುತ್ತಾನೆ. ಈ ಯುದ್ಧ ಕ್ರಿ.ಶ. ೧೦೭೭ ಮಾರ್ಚ್ ೧೯ಕ್ಕೆ ಕೆಲವು ದಿನಗಳ ಹಿಂದೆಯೇ ನಡೆದಿದೆ. ಏಕೆಂದರೆ ಚಂಡರಸನ ಸ್ಮರಣೆಗಾಗಿ ವಿರಗಲ್ಲು ನೆಟ್ಟ ಉಲ್ಲೇಖ ಕ್ರಿ.ಶ. ೧೦೭೭ ಮಾರ್ಚ್ ೧೯ರ ರಾಯಬಾಗ ಶಾಸನದಲ್ಲಿದೆ. ಭೋಜನ ವಿರುದ್ಧದ ಯುದ್ಧವು ರಾಯಬಾಗದಲ್ಲಿಯೇ ನಡೆದಿರಬೇಕೆಂಬ ಡಾ. ನಾಗಯ್ಯನವರ ಅಭಿಪ್ರಾಯ

ಒಪ್ಪಲಾಗದು. ಪ್ರಾಯಶ; ಈ ಚಂಡರಸನು ರಾಯಬಾಗದವನಾಗಿರಬಹುದು. ಆದ್ದರಿಂದ ಆ ವೀರಗಲ್ಲು ರಾಯಬಾಗದಲ್ಲಿದೆ.

ರಾಯಬಾಗದಲ್ಲಿರುವ ನರಸಿಂಹ ದೇವಾಲಯವು ಇಡಿ ದೇಶದಲ್ಲಿ ಏಕಮೇವ ಎನಿಸುವ ಗುಹಾಂತರ ದೇವಾಲಯವಾಗಿದೆ. ಈ ಮೂರ್ತಿಯನ್ನು ಮರುಳು ಕಲ್ಲಿನಲ್ಲಿ ಕೆತ್ತಲಾಗಿದ್ದು, ಸುಮಾರು ಎರಡುವರೆ ಅಡಿಗಳಷ್ಟು ಎತ್ತರ ಹಾಗೂ ಒಂದುವರೆ ಅಡಿಗಳಷ್ಟು ಅಗಲವಾಗಿದೆ. ಒಂದು ಕೈ ಮುರಿದಿದ್ದು, ಅದು ಜೀರ್ಣೋದ್ಧಾರಗೊಂಡಿದೆ.

ಕೆತ್ತನೆಯ ಕೆಲಸವು ಸೂಕ್ಷ್ಮವೂ ಸುಂದರವೂ ಆಗಿದ್ದು ಅದರ ಉಗ್ರತೆಯ ಜ್ವಾಲೆಯನ್ನು ಹೊರ ಚೆಲ್ಲುವಂತೆ ಇರುವದರಿಂದ ಅದನ್ನು "ಜ್ವಾಲಾನರಸಿಂಹ" ಎಂದು ಕರೆಯುತ್ತಾರೆ.

ಪೂವಿನಬಾಗೆ ಸಮೀಪದಲ್ಲಿರುವ ಬಾಗಡನಾಡಿನ ಇಂದಿನ ಕಂಕಣವಾಡಿಯನ್ನು ೪ನೇ ಕಾರ್ತವೀರ್ಯನ ಆಧೀನದಲ್ಲಿದ್ದ ವೈಜರಸನು ಇದನ್ನು ಆಳುತ್ತಿದ್ದ. ವೈಜರಸಿನಗೆ ನಾಲ್ವರು ಮಕ್ಕಳು. ಹೆಮ್ಮಣಯ್ಯ, ಚಿದ್ಧಣಯ್ಯ, ಚಾವುಂಡರಾಯ ಮತ್ತು ಕಾಳಿಮಯ್ಯ. ಹೆಮ್ಮಣಯ್ಯನನ್ನು ಕನ್ನಡದ ವಂಶಜನೆಂದು ಬಣ್ಣಿಸಲಾಗಿದೆ. ಈತ ಅಲ್ಲಿಯ ಕಲಿದೇವರು ಹಾಗೂ ಎರಡು ಬಸದಿಗಳ ಜೀರ್ಣೋದ್ಧಾರ ಮಾಡಿದ ವಿಷಯ ಕಂಕನೂರಿನ ಶಾಸನದಿಂದ ತಿಳಿದು ಬರುವುದು.

ರಟ್ಟರ ತರುವಾಯ ಈ ಪ್ರದೇಶ ಕೊಲ್ಲಾಪೂರದ ಶಿಲಾಹಾರ ಆಡಳಿತಕ್ಕೆ ಒಳಪಟ್ಟಿತ್ತು. ಶಿಲಾಹಾರ ಗಂಡರಾದಿತ್ಯನ ಸಾಮಂತ ನಿಂಬಣಯ್ಯ ಈ ಭಾಗವನ್ನು ಆಳುತ್ತಿದ್ದನು. ಆತನಿಂದಲೇ ಈ ಭಾಗದಲ್ಲಿ ಜೈನಧರ್ಮ ಇಷ್ಟೊಂದು ಪ್ರಮಾಣದಲ್ಲಿ ಬೆಳೆಯಲು ಕಾರಣವಾಯಿತು. ಆತನ ಕಾಲದಲ್ಲಿ ಚಕ್ರವರ್ತಿ ವಿಕ್ರಮಾದಿತ್ಯನ ಮಾಂಡಳಿಕರಾಗಿದ್ದ ಕೊಲ್ಲಾಪೂರದ ಶಿಲಾಹಾರರ ಸಾಮಂತನಾದ ಈ ನಿಂಬದೇವನ ಸಹೋದರಿ ಕರ್ಣಾದೇವಿ ಮಹಮಂಡಳೇಶ್ವರ ಗಂಡರಾದಿತ್ಯನ ಪತ್ನಿ. ಈತನಗೂ ಬಿಜ್ಜಳನಗೂ ಯುದ್ಧ ನಡೆದು ಕೊನೆಯಲ್ಲಿ ಸಲ್ಲೇಖನ ವ್ರತ ಪಾಲಿಸಿ ಆತ ಮಡಿದನೆಂದು 'ನಿಂಬಾಸಾಮಂತ ಚರಿತೆ'ಯಿಂದ ತಿಳಿಯುತ್ತದೆ. ಅನಂತರ ಕೆಲಕಾಲ ಈ ಭಾಗ ಮುಸ್ಲಿಂರ ಆಡಳಿತಕ್ಕೆ ಒಳಪಟ್ಟಂತಿದೆ. ಏಕೆಂದರೆ ಕುಡಚಿ ಮುಸ್ಲಿಂರ ಆಡಳಿತವನ್ನು ಸಾಕ್ಷಿಕರಿಸುತ್ತದೆ. ವಿಜಾಪೂರದ ಆದಿಲ್‌ಶಾಹಿ ಮನೆತನಕ್ಕೂ ಕುಡಚಿಗೂ ಸಂಬಂಧವನ್ನು ಹೊಸೆಯಲಾಗುತ್ತದೆ. ಆದರೆ ಕುಡಚಿಯನ್ನು ಹೊರತುಪಡಿಸಿ ಉಳಿದೆಡೆಗಳಲ್ಲಿ ಮುಸ್ಲಿಂ ಪ್ರಾಬಲ್ಯ ಕಡಿಮೆ. ವಿಜಾಪೂರದ ಅಧಿಕಾರಿ ಅಸಫ್‌ಖಾನ್‌ನ ಮಗ ಮಹಮ್ಮದ ಕಿಶೋರಖಾನ (ಕ್ರಿ.ಶ. ೧೫೪೯) ಹುಕ್ಕೇರಿ, ಬೆಳಗಾವಿ ಹಾಗೂ ರಾಯಬಾಗ ಆಡಳಿತ ಅಧಿಕಾರಿಯಾಗಿದ್ದನು.

ವಿಜಯನಗರದ ಅರಸ ಕೃಷ್ಣದೇವರಾಯನ ಸಾಮ್ರಾಜ್ಯ ಉತ್ತರದಲ್ಲಿ ರಾಯಬಾಗದವರೆಗೂ ವಿಸ್ತರಿಸಿತ್ತು. ಕೃಷ್ಣದೇವರಾಯನ ಸೈನ್ಯಾಧಿಕಾರಿ ಬಾಗೆಯ ಬೊಮ್ಮಣ್ಣನಾಯಕ, ಈ ಭಾಗವನ್ನು ಆಳುತ್ತಿದ್ದನ್ನು. ಬೆಳಗಾವಿ ಹಾಗೂ ಹುಕ್ಕೇರಿ ವಿಜಾಪೂರದ ಆದಿಲ್‌ಶಾಹಿ ಆಡಳಿತಕ್ಕೆ ಒಳಪಟ್ಟಿದ್ದವು. " A Kanarese Inscription dated 1514-15 (S. 1436) at ugargol three miles south-

east of Saundatti mentions the name of Bommappa, of Bagi that is Rayabag as one Krishna Ray's military officer or Naik"

ಆದಿಲ್‌ಶಾಹಿ ಕೊಲೆಯ ನಂತರ ಅರಾಜಕತೆಯ ಲಾಭ ಪಡೆದು ನಿಜಾಮರು ವಿಜಾಪೂರವನ್ನು ಕಬಳಿಸಲು ಯೋಚಿಸಿದರು. ಆದರೆ ವಿಜಾಪೂರದ ದಿಲ್‌ವರಖಾನ್‌ನ ಬಲಕ್ಕೆ ಮಣಿದು ಹಿಮ್ಮೆಟ್ಟುವಾಗ ಹುಕ್ಕೇರಿ, ರಾಯಬಾಗ ಹಾಗೂ ಮಿರಜ್‌ಗಳನ್ನು ಲೂಟಿ ಮಾಡಿದರು. ಅಂದರೆ ಈ ನಾಡು ನಿಜಾಮಶಾಹಿಗಳ ಲೂಟಿಗೆ ಒಳಗಾಗಿದ್ದುಂಟು. ಇದು ಕೆಲಕಾಲ ಮೊಗಲರ ಆಡಳಿತಕ್ಕೆ ಒಳಪಟ್ಟಿತ್ತು.

ಕ್ರಿ.ಶ. ೧೬೩೫ರಲ್ಲಿ ಮೊಗಲರ ಸೈನ್ಯಾಧಿಕಾರಿ ಅಸಫ್‌ಖಾನ್ ಮಿರಜ್ ಮತ್ತು ರಾಯಬಾಗಗಳನ್ನು ಆದಿಲ್‌ಶಾಹಿಗಳಿಂದ ವಶಪಡಿಸಿಕೊಂಡಿದ್ದನು. ರಾಯಬಾಗದಲ್ಲಿ ರಣದಲ್ಲಾಖಾನನ ಜಾಮೀಯಾ ಮಸೀದೆ ಇದೆ. ಈ ಮಸೀದಿಯಲ್ಲಿ ಕ್ರಿ.ಶ. ೧೬೭೯ರ ಅರೆಬಿಕ್ ಶಾಸನವಿದ್ದು, ಅದನ್ನು ವಿಜಾಪೂರದ ಸರದಾರ ಅಮೀನ್‌ಮುಸ್ತಫ್‌ಖಾನ್ ಕಟ್ಟಿಸಿರುವುದಾಗಿ ತಿಳಿಯುತ್ತದೆ. ಆ ಕಾಲದಲ್ಲಿ ಮೊಗಲರು ರಾಯಬಾಗಕ್ಕೆ ಮುಸ್ತಫ್‌ಬಾದ ಎಂದು ಕರೆಯುತ್ತಿದ್ದರು.

ಅನಂತರ ರಾಯಬಾಗ ಮರಾಠರ ವಶಕ್ಕೆ ಬಂತು. ಇನ್ನೂರು ವರ್ಷಗಳಿಂಗಿಂತಲೂ ಹೆಚ್ಚು ಅವರ ಆಧಿನಲ್ಲಿಯೇ ಉಳಿಯಿತು. ಮರಾಠಾ ಸಾಮ್ರಾಜ್ಯದ ಒಂದು ಭಾಗವಾದ ಕೊಲ್ಲಾಪೂರ ಸಂಸ್ಥಾನಿಕರು ಬ್ರಿಟಿಷರು ಬ್ರಿಟಿಷ ಆಡಳಿತವಿದ್ಧಾಗಲೂ ರಾಯಬಾಗದ ಮೇಲೆ ಹಿಡಿತ ಸಾಧಿಸಿದ್ದರು. ಅವರ ಅರಮನೆ ಹಾಗೂ ಇತರ ಆಡಳಿತ ಕುರುಹುಗಳು ಇಂದಿಗೂ ಅಲ್ಲಿ ಕಾಣಬಹುದು. ೫೦-೬೦ ವರುಷಗಳ ಹಿಂದೆ ಕೊಲ್ಲಾಪೂರದ ಮರಾಠಾ ಅರಸರು ಬೇಟೆ ಆಡಲು ಈ ಬಯಲು ಪ್ರದೇಶಕ್ಕೆ ಬರುತ್ತಿದ್ದರು. ಆಗ ತಂಗಲು ಬೇಸಿಗೆ ಅರಮನೆಯನ್ನು ನಿರ್ಮಿಸಿರುವರು.

ಕ್ರಿ.ಶ. ೧೭೯೨ ಪೇಬ್ರುವರಿಯಲ್ಲಿ ೩ನೇ ಮೈಸೂರು ಯುದ್ಧ ಮುಕ್ತಾಯವಾಯಿತು. ಮರಾಠರು ಬ್ರಿಟಿಷರ ಸಹಾಯದಿಂದ ಟಿಪ್ಪು ಸುಲ್ತಾನನ ಆಡಳಿತಕ್ಕೆ ಈ ವಿಭಾಗಗಳ ಮೇಲೆ ಹಿಡಿತಸಾಧಿಸಿ, ಮರಳಿ ಬರುಬಾಗ ಗೋಕಾಕ, ಚಿಕ್ಕೋಡಿ ಮಾರ್ಗವಾಗಿ ಆ ಸೈನ್ಯ ರಾಯಬಾಗ ತಾಲೂಕಿನ ಬೆಂಡವಾಡದಲ್ಲಿ ಒಂದು ದಿನ ತಂಗುತ್ತದೆ. ಆಗ ಮರಾಠರ ಸೇನಾಪತಿ ಪರಶುರಾಮಬಾಹು ಆ ಸೇನೆಯ ನೇತೃತ್ವ ವಹಿಸಿಕೊಂಡಿದ್ದನು. ಬೆಂಡವಾಡದಿಂದ ರಾಯಬಾಗಕ್ಕೆ ಬಂದ ಸೈನ್ಯ ಅಲ್ಲಿಂದ ಹಾಲುಹಳ್ಳ ದಾಟಿ ಬಿರಡಿ-ಚಿಂಚಲಿ ಮೂಲಕ ಕುಡಚಿಗೆ ಬಂದು ತಂಗಿತು. ಕುಡಚಿ ಮುಸ್ಲಿಂರ ಪಟ್ಟಣವಾಗಿತ್ತು. ಪರಶುರಾಮಬಾಹು ಅಲ್ಲಿ ಬ್ರಾಹ್ಮಣ ಕುಟುಂಬಗಳನ್ನು ತಂದಿಟ್ಟನು. ಆಗ ಅದೆಷ್ಟೋ ಮುಸ್ಲಿಂ ಕುಟುಂಬಗಳು ಅಲ್ಲಿಂದ ಬಿಟ್ಟು ಹೋದವು.

ಬಹುಮನಿ ಸಾಮ್ರಾಜ್ಯದ ಸ್ಥಾಪಕ ಹಸನ್ ಗಂಗು (ಕ್ರಿ.ಶ. ೧೩೪೭-೫೮) ಮಹಮ್ಮದ್ ತುಘಲಕ್‌ನಿಂದ ಕುಡಚಿಯನ್ನು ಜಹಗೀರು ಪಡೆದುಕೊಂಡನು. ಇದು ಅವನ ಮೊದಲ ಜಹಗೀರು ಆಗಿತ್ತು.

ಪರಶುರಾಮಬಾಹುನನ್ನು ಯುದ್ಧದಲ್ಲಿ ಸೋಲಿಸಿದ ಕೊಲ್ಲಾಪೂರ ಸಂಸ್ಥಾನ ಅನಂತರ ಪ್ರಬಲವಾಯಿತು. ರಾಯಬಾಗ ಪ್ರಾಂತವನ್ನು ತನ್ನದಾಗಿಸಿಕೊಂಡಿತು. ಕ್ರಿ.ಶ. ೧೯೪೮ರ ವರೆಗೆ

ಕೊಲ್ಲಾಪೂರ ಸಂಸ್ಥಾನಕ್ಕೆ ಒಳಪಟ್ಟಿತ್ತು. ಶಿರೋಳ ಮಹಲಿನ ಉಪಮಹಲಾಗಿ ಇದನ್ನು ಗುರುತಿಸಲಾಗುತ್ತಿತ್ತು. ಹೀಗಿದ್ದರೂ ಈಗಿನ ರಾಯಬಾಗ ತಾಲೂಕಿನ ಅನೇಕ ಹಳ್ಳಿಗಳು ಅಥಣಿ ತಾಲೂಕಿಗೆ ಒಳಪಟ್ಟಿದ್ದವು. ಹೀಗಾಗಿ ಮರಾಠರ ಆಡಳಿತಕ್ಕೆ ಒಟಪಟ್ಟ ಭಾಗಗಳಲ್ಲಿ ಇಂದಿಗೂ ಮರಾಠಿ ಉಳಿದುಕೊಂಡಿದೆ. ಆದ್ದರಿಂದ ಜಲಾಲಪುರದ ರಾಚೋಟಿಯಂಥ ಲಾವಣಿ ಕವಿಗಳು ಮರಾಠಿಯಲ್ಲಿ ಲಾವಣಿ ರಚಿಸಿದರು.

ಬಾಗೆನಾಡು ಈಗಲೂ ಮಹಾರಾಷ್ಟ್ರದ ಗಡಿಗೆ ತುಂಬಾ ಸಮೀಪ. ಇಲ್ಲಿಯ ಜನರಿಗೆ ಮರಾಠಿ ಪರಿಚಿತ. ಚಿಂಚಲಿ, ಜಲಾಲಪೂರ, ದಿಗ್ಗೆವಾಡಿ, ಮೊರಬ, ರಾಯಬಾಗ ಮೊದಲಾದ ಗ್ರಾಮಗಳಲ್ಲಿ ಮರಾಠಿ ಹೆಚ್ಚು ಬಳಕೆಯಾಗುತ್ತದೆ. ಬಾಗೇನಾಡಿನ ಕೆಲವು ಲಾವಣಿಕಾರರು ಈ ಕಾರಣದಿಂದಾಗಿಯೇ ಎರಡೂ ಭಾಷೆಗಳಲ್ಲಿ ಲಾವಣಿಗಳನ್ನು ರಚಿಸಿರುವರು.

ಕ್ರಿ.ಶ. ೧೮೦೦ರಲ್ಲಿ ರಾಯಬಾಗ ತನ್ನ ಪ್ರಾಚೀನ ವೈಭವವನ್ನೆಲ್ಲ ಕಳೆದುಕೊಂಡು ಬರಡು ಹಳ್ಳಿಯಾದ ಬಗ್ಗೆ ಉಲ್ಲೇಖವಿದೆ. ಅಲ್ಲಿ ಉತ್ತಮ ಮನೆಗಳಾಗಲಿ ಸಮೃದ್ಧ ತೋಟಗಳಾಗಲಿ ಇರಲಿಲ್ಲವಾದರೂ ಗ್ರಾಮದ ಸಮೀಪ ಇರುವ ಹೂದೋಟ ಮಾತ್ರ ಆಕರ್ಷನೀಯವಾಗಿತ್ತು.

ಇತಿಹಾಸದ ಪುಟಗಳಲ್ಲಿ ರಾಯಬಾಗ ತಾಲೂಕಿನ ಚರಿತ್ರೆ ಸ್ಪಷ್ಟವಾಗಿಲ್ಲ. ಅದನ್ನು ಕಟ್ಟಿಕೊಡುವ ಕೆಲವು ಪ್ರಯತ್ನಗಳು ನಡೆದಿವೆ. ಅವುಗಳಲ್ಲಿ ಇದೂ ಒಂದು. ಪ್ರಸ್ತುತ ಪ್ರಯತ್ನ ತಾಲೂಕಿನ ಇತಿಹಾಸ ಪೂರ್ವದ ಇತಿಹಾಸಕ್ಕೆ ಹಿನ್ನಲೆ ಒದಗಿಸುತ್ತದೆ.

****

ಅಧ್ಯಾಯ : ಮೂರು

ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು

ಅಧ್ಯಾಯ : ಮೂರು

ರಾಯಬಾಗ ತಾಲೂಕಿನ ಪ್ರಾಚ್ಯ ನೆಲೆಗಳು

ರಾಯಬಾಗ ತಾಲೂಕಿಗೆ ಕೃಷ್ಣಾ ನದಿ ಮತ್ತು ಘಟಪ್ರಭಾ ಎಡದಂಡೆ ಕಾಲುವೆಗಳು ಜೀವಾಳವಾಗಿವೆ. ಇಲ್ಲಿಯ ಕೆರೆಗಳು, ಹಳ್ಳಗಳು, ಹೊಂಡಗಳು ಪ್ರಾಮುಖ್ಯತೆ ಪಡೆದುಕೊಂಡಿವೆ. ಒಟ್ಟು ೯೫೮.೮ ಚ.ಕಿಮೀ ವಿಸ್ತೀರ್ಣ ಹೊಂದಿದ್ದು, ೨೬೪೨ ಹೆಕ್ಟೇರದಷ್ಟು ಭೂಮಿ ಅರಣ್ಯ ಪ್ರದೇಶ, ಸುಮಾರು ೮೩,೧೫೬ ಹೆಕ್ಟೇರುಗಳಿಗಿಂತ ಹೆಚ್ಚು ಹಿಡುವಳಿ ಕ್ಷೇತ್ರ, ಇಲ್ಲಿಯ ಸರಾಸರಿ ವರ್ಷದ ಮಳೆಯ ಪ್ರಮಾಣ ೫೦೬.೫ ಮಿ.ಮಿ. ಹೀಗಾಗಿ ಸಾಕಷ್ಟು ನೀರಾವರಿ ಸೌಲಭ್ಯದಿಂದ ಹೆಚ್ಚಾಗಿ ವಾಣಿಜ್ಯ ಬೆಳೆಗಳನ್ನು ಬೆಳೆಯುತ್ತಿದ್ದು, ಕಬ್ಬು, ಹತ್ತಿ, ಮೆಣಸು, ಅರಿಸಿಣ, ದ್ರಾಕ್ಷಿ, ಕಡಲೆ, ಶೇಂಗಾ, ಗೋಧಿ, ಹುರುಳಿ, ಬಾಳೆ ಮುಂತಾದ ಬೆಳೆಗಳು ಪ್ರಮುಖವಾಗಿವೆ.

೩.೧ ಪ್ರವೇಶ :

ಈ ತಾಲೂಕು ಸಮಶೀತೋಷ್ಣ ವಲಯ ಹವಾಗುಣವನ್ನು ಹೊಂದಿದ್ದರಿಂದ ಒಣ ಬೇಸಾಯವು ಕೂಡಾ ಜಾರಿಯಲ್ಲಿದ್ದು, ಒಣ ಬೇಸಾಯದ ಬೆಳೆಗಳಾದ ತೊಗರಿ, ಅವರೆ, ಜೋಳ, ಸಜ್ಜೆ, ಹುರುಳಿ, ಹೆಸರು ಹಾಗೂ ಇನ್ನು ಅನೇಕ ದ್ವಿದಳ ಧಾನ್ಯಗಳನ್ನು ಬೆಳೆಯುತ್ತಾರೆ.

ಹಿಂದಿನಿಂದಲೂ ಈ ತಾಲೂಕವು ಒಂದು ಪ್ರಮುಖ ವ್ಯಾಪಾರಿ ಕೇಂದ್ರವಾಗಿ ಬೆಳೆದು ಇಂದಿಗೂ ಆ ಸ್ಥಾನವನ್ನು ಹಾರೂಗೇರಿ, ರಾಯಬಾಗ, ಕುಡಚಿ ಉಳಿಸಿಕೊಂಡು ಬಂದಿವೆ. ಹಾರೂಗೇರಿ, ರಾಯಬಾಗ, ಕುಡಚಿ ವ್ಯಾಪಾರಿ ಕೇಂದ್ರ ಹಾಗೂ ದೊಡ್ಡ ಪಟ್ಟಣಗಳಾಗಿವೆ. ಈ ತಾಲ್ಲೂಕು ೫೫ ಹಳ್ಳಿಗಳನ್ನು ಹೊಂದಿದೆ. ಅವು ಈ ಕೆಳಗಿನಂತಿವೆ.

೧)	ರಾಯಬಾಗ	೨)	ಕುಡಚಿ
೩)	ಗುಂಡವಾಡ	೪)	ಶಿರಗೂರ
೫)	ಸಿದ್ಧಾಪೂರ	೬)	ಖೇಮಲಾಪೂರ
೭)	ಪರಮಾನಂದವಾಡಿ	೮)	ಸುಟ್ಟಟ್ಟಿ
೯)	ಬಾವಾನ ಸವದತ್ತಿ	೧೦)	ಚಿಂಚಲಿ

೧೧) ಭಿರಡಿ
೧೨) ಹಳೆ ದಿಗ್ಗೇವಾಡಿ/ಹೊಸ ದಿಗ್ಗೇವಾಡಿ
೧೩) ಬೊಮ್ಮನಾಳ
೧೪) ಜಲಾಲಪೂರ
೧೫) ಸೌಂದತ್ತಿ
೧೬) ನಸಲಾಪೂರ
೧೭) ಕಂಚಗಾರವಾಡಿ
೧೮) ಯಡ್ರಾಂವ
೧೯) ಬೆಕ್ಕೇರಿ
೨೦) ನಂದಿಕುರಳಿ
೨೧) ಯಬರಟ್ಟಿ
೨೨) ಹುಬ್ಬರವಾಡಿ
೨೩) ಕೋಳಿಗುಡ್ಡ
೨೪) ಮೇಖಳಿ
೨೫) ಬಾವಚಿ
೨೬) ಬೂದಿಹಾಳ
೨೭) ದೇವನಕಟ್ಟಿ
೨೮) ಮಾರಡಿ/ಮಾಡಲಗಿ
೨೯) ಮಂಟೂರ
೩೦) ಬೆಂಡವಾಡ
೩೧) ಕಟಕಬಾವಿ
೩೨) ಮಾವಿನಹೊಂಡ
೩೩) ಬಡಬ್ಯಾಕೂಡ
೩೪) ಬ್ಯಾಕೂಡ (ಗುಡ್ಡದ)
೩೫) ಬಿರನಾಳ
೩೬) ನಾಗರಾಳ
೩೭) ನಿಲಜಿ
೩೮) ಮೊರಬ
೩೯) ನಿಡಗುಂದಿ
೪೦) ಬಸ್ತವಾಡ
೪೧) ಸವಸುದ್ದಿ
೪೨) ಯಲ್ಪಾರಟ್ಟಿ
೪೩) ಕಂಕಣವಾಡಿ
೪೪) ಇಟ್ನಾಳ
೪೫) ಖಣದಾಳ
೪೬) ಹಿಡಕಲ
೪೭) ಅಳಗವಾಡಿ
೪೮) ಪಾಲಬಾಂವಿ
೪೯) ಮುಗಳಖೋಡ
೫೦) ಮರಾಕುಡಿ
೫೧) ಹಂದಿಗುಂದ
೫೨) ಸುಲ್ತಾನಪೂರ
೫೩) ಹಾರೂಗೇರಿ
೫೪) ಅಲಖನೂರ
೫೫) ಕಪ್ಪಲಗುದ್ದಿ

ಈ ೫೫ ಹಳ್ಳಿಗಳನ್ನು ಭೌಗೋಳಿಕವಾಗಿ ಹೀಗೆ ವರ್ಗೀಕರಿಸಬಹುದು.

೧) ಕೃಷ್ಣಾ ನದಿ ತೀರದ ಗ್ರಾಮಗಳು
೨) ಬಯಲು ಪ್ರದೇಶದ ಗ್ರಾಮಗಳು
೩) ಬೆಟ್ಟ ಪ್ರದೇಶದ ಗ್ರಾಮಗಳು

೩.೨ ಕೃಷ್ಣ ನದಿ ತೀರದ ಗ್ರಾಮಗಳು :

ನಸಲಾಪೂರ, ಹೊಸ ದಿಗ್ಗೇವಾಡಿ ಮತ್ತು ಹಳೆ ದಿಗ್ಗೇವಾಡಿ, ಜಲಾಲಪೂರ, ಭಿರಡಿ,

ಚಿಂಚಲಿ, ಕುಡಚಿ, ಗುಂಡವಾಡ, ಶಿರಗೂರ, ಸಿದ್ದಾಪೂರ, ಖೆಮಲಾಪೂರ, ಪರಮಾನಂದವಾಡಿ, ಬಾವಾನ ಸವದತ್ತಿ ಗ್ರಾಮಗಳು ಕೃಷ್ಣಾನದಿ ತೀರದ ಗ್ರಾಮಗಳಾಗಿವೆ. ಇವುಗಳಲ್ಲಿ ಭಿರಡಿ, ಚಿಂಚಲಿ, ಕುಡಚಿ, ಶಿರಗೂರ, ಖೆಮಲಾಪೂರ, ಸವದತ್ತಿ, ದಿಗ್ಗೇವಾಡಿ, ಜಲಾಲಪೂರ ಪ್ರಾಚ್ಯ ನೆಲೆಗಳು.

೩.೩ ಬಯಲು ಪ್ರದೇಶದ ಗ್ರಾಮಗಳು :

ರಾಯಬಾಗ, ಕೋಳಿಗುಡ್ಡ, ಸುಟ್ಟಟ್ಟಿ, ಯಲ್ಪಾರಟ್ಟಿ, ಅಲಕನೂರ, ಬಡಬ್ಯಾಕೂಡ, ಯಬರಟ್ಟಿ, ಹಾರೂಗೇರಿ, ಮುಗಳಖೊಡ, ಪಾಲಬಾಂವಿ, ಮರಾಕುಡಿ, ಕಪ್ಪಲಗುದ್ದಿ, ಹಂದಿಗುಂದ, ಸುಲ್ತಾನಪೂರ, ಹಿಡಕಲ್ಲ, ಅಳಗವಾಡಿ, ಮೊರಬ, ನಿಲಜಿ, ಬೆಕ್ಕೇರಿ, ಬೊಮ್ಮನಾಳ, ನಾಗರಾಳ ಗ್ರಾಮಗಳು ಬಯಲು ಪ್ರದೇಶದ ಗ್ರಾಮಗಳಾಗಿವೆ. ಇವುಗಳಲ್ಲಿ ರಾಯಬಾಗ, ಯಬರಟ್ಟಿ, ಹಾರೂಗೇರಿ, ಮುಗಳಖೋಡ, ಕಪ್ಪಲಗುದ್ದಿ, ಹಂದಿಗುಂದ, ಖಣದಾಳ, ಅಳಗವಾಡಿ, ನಿಲಜಿ, ಬೊಮ್ಮನಾಳ ಇವು ಪ್ರಾಚ್ಯ ನೆಲೆಗಳು.

೩.೪ ಬೆಟ್ಟ ಪ್ರದೇಶದ ಗ್ರಾಮಗಳು :

ನಿಡಗುಂದಿ, ಕಂಚಗಾರವಾಡಿ, ಯಡ್ರಾಂವ, ನಂದಿಕುರಳಿ, ಹುಬ್ಬರವಾಡಿ, ಮೇಖಳಿ, ಬಾಂವಚಿ, ಮಾಡಲಗಿ, ಮಂಟೂರ, ಕಟಕಬಾವಿ, ಗುಡ್ಡದ ಬ್ಯಾಕೂಡ, ಬೀರನಾಳ, ಬಸ್ತವಾಡ, ಸೌಸುದ್ದಿ, ಬೆಂಡವಾಡ, ಕಂಕಣವಾಡಿ, ಇಟ್ನಾಳ, ಖಣದಾಳ, ನಿಡಗುಂದಿ, ಬೂದಿಹಾಳ, ದೇವನಕಟ್ಟಿ, ಮಾಯಿನಕಟ್ಟಿ, ಮಾವಿನಹೊಂಡಾ, ಬೆಂಡವಾಡ, ಇವು ಬೆಟ್ಟ ಪ್ರದೇಶದ ಗ್ರಾಮಗಳಾಗಿವೆ. ನಿಡಗುಂದಿ, ಖಣದಾಳ, ಇಟ್ನಾಳ, ಬೂದಿಹಾಳ, ಹುಬ್ಬರವಾಡಿ, ಮಾವಿನಹೊಂಡಾ, ಮತ್ತು ದೇವನಕಟ್ಟೆ ಇವು ಪ್ರಾಚ್ಯ ನೆಲೆಗಳು.

೩.೫ ಕೃಷ್ಣಾ ನದಿ ತೀರದ ಪ್ರಾಚ್ಯ ನೆಲೆಗಳು :

ಕೃಷ್ಣಾ ನದಿ ದಕ್ಷಿಣ ಭಾರತದ ಎರಡನೆಯ ಅತಿ ದೊಡ್ಡ ನದಿಯಾಗಿದೆ. ಈ ನದಿಯು ಮಹಾರಾಷ್ಟ್ರದ ಪಶ್ಚಿಮ ಘಟ್ಟದ ಮಹಾದೇವ ಪರ್ವತ ಶ್ರೇಣಿಯಲ್ಲಿ ಮಹಾಬಳೇಶ್ವರದ ಹತ್ತಿರ ಸಮುದ್ರ ಮಟ್ಟಕ್ಕಿಂತ ೧೩೩೮ ಮೀ ಎತ್ತರದಲ್ಲಿ ಉಗಮವಾಗಿ ಸುಮಾರು ೧೪೦೨ ಕಿ.ಮೀಗಳಷ್ಟು ಹರಿದು ಆಂಧ್ರ ಪ್ರದೇಶದ ಹಂಸಲಾದೀವಿಯಲ್ಲಿ ಬಂಗಾಳಕೊಲ್ಲಿಯನ್ನು ಸೇರುತ್ತದೆ. ಕೃಷ್ಣಾ ನದಿ ಮಹಾರಾಷ್ಟ್ರ ಕರ್ನಾಟಕ ಮತ್ತು ಆಂಧ್ರ ಪ್ರದೇಶಗಳನ್ನು ಪ್ರವಹಿಸುತ್ತದೆ. ಕರ್ನಾಟಕ ರಾಜ್ಯದಲ್ಲಿ ಇದು ಸುಮಾರು ೪೮೩ ಕಿ.ಮೀ ಹರಿಯುತ್ತದೆ. ಕರ್ನಾಟಕದ ಎಡ ಮತ್ತು ಬಲದಂಡೆಯಲ್ಲಿ ಅನೇಕ ಪ್ರಾಚ್ಯ ನೆಲೆಗಳನ್ನು ಹೊಂದಿದ್ದು ಬೆಳಗಾವಿಯ ಜಿಲ್ಲೆಯ ರಾಯಬಾಗ ತಾಲೂಕವು ಒಂದು.

೩.೫.೧ ಕುಡಚಿ :

ಇದು ರಾಯಬಾಗದಿಂದ ೧೫ ಕಿ.ಮೀ. ದೂರದಲ್ಲಿದೆ. ಇಲ್ಲಿಯ ಜನಸಂಖ್ಯೆ ಸುಮಾರು ೩೫,೦೦೦. ಇದರಲ್ಲಿ ಮುಕ್ಕಾಲು ಪಾಲು ಇಸ್ಲಾಂ ಧರ್ಮಿಯರು. ಉತ್ತರ ಕರ್ನಾಟಕದಲ್ಲಿಯೇ ಕುಡಚಿ ಇಸ್ಲಾಂ ಧರ್ಮೀಯರ ಪ್ರಾಬಲ್ಯ ಹೊಂದಿದ ದೊಡ್ಡ ಗ್ರಾಮ.

ಕುಡಚಿ ಗ್ರಾಮಕ್ಕೆ ಪ್ರಾಚೀನ ಪರಂಪರೆ ಇದೆ. ಅಲ್ಲಿಯ ಮುಸ್ಲಿಂ ಜನಸಂಖ್ಯೆಯನ್ನು ಗಮನಿಸಿದರೆ ಅದರ ಪ್ರಾಚೀನ ಚರಿತ್ರೆ ಬಿಚ್ಚಿಕೊಳ್ಳುತ್ತದೆ. ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಇದು ದಿಲ್ಲಿ ಸುಲ್ತಾನರ ಆಡಳಿತಕ್ಕೆ ಒಳಪಟ್ಟಿತ್ತು. ೧೩ನೇ ಶತಮಾನದ ಮಹಮ್ಮದ್-ಬಿನ್-ತುಘಲಕ್ ಇದನ್ನು ಬಹುಮನಿ ಸಾಮ್ರಾಜ್ಯದ ಸ್ಥಾಪಕ ಹಸನ್ ಗಂಗೂಗೆ ಮೊತ್ತ ಮೊದಲು ಜಹಗೀರು ಹಾಕಿ ಕೊಟ್ಟಿದ್ದನು. ಹಸನ್ ಗಂಗೂ ಸಾಮ್ರಾಜ್ಯದ ಬೇಟೆ ಇಲ್ಲಿಂದಲೇ ಆರಂಭವಾದುದು. ಕುಡಚಿಯಲ್ಲಿ ಸಿರಾಜ್ ಸಾಹೇಬ ಎಂಬ ಸೂಫಿ ಸಂತ ಬಹುಕಾಲ ವಾಸವಾಗಿದ್ದನು. ಅವನು ಕೊನೆಯುಸಿರೆಳೆದದ್ದು ಗುಲಬರ್ಗಾ ಇಲ್ಲಿ ಸಿರಾಜ್‌ಸಾಬ್ ದರ್ಗಾಯಿದೆ. ಪ್ರತಿವರ್ಷ ಉರುಸು ನೆರೆಯುತ್ತದೆ. ಗುಲಬರ್ಗಾದಿಂದ ಗಂಧ ಬರುವುದು. ಈ ದರ್ಗಾಯಿರುವ ಪ್ರದೇಶದಲ್ಲಿ ಕೃಷ್ಣಾನದಿ ಎರಡು ಹೋಳಾಗುತ್ತದೆ. ಒಂದು ಕಿ.ಮೀ. ಕ್ರಮಿಸಿ ಮತ್ತೆ ಕೂಡುತ್ತದೆ. ಈ ಪ್ರದೇಶವನ್ನು ಸಿರಾಜ್‌ಸಾಬ್‌ನ ಗಡ್ಡೆ ಎಂದು ಕರೆಯುವರು. ಮರಾಠರು ಕುಡಚಿಯ ಮೇಲೆ ಹಿಡಿತ ಸಾಧಿಸಲು ಹಲವು ಸಲ ಯುದ್ಧ ಸಾರಿದರು. ಪರಶುರಾಮ ಬಾಹು ಕುಡಚಿಯ ಮೇಲೆ ದಂಡೆತ್ತಿ ಬಂದು ಅಲ್ಲಿಯ ಇಸ್ಲಾಂ ಧರ್ಮೀಯರನ್ನು ಹೊರದಬ್ಬಲಾರಂಭಿಸಿದನು. ಆ ಕಾಲಕ್ಕೆ ಬಹಳಷ್ಟು ಮುಸ್ಲಿಂರು ಹೊರಹೋದರೆಂದು ಚರಿತ್ರೆಯಿಂದ ತಿಳಿಯುತ್ತದೆ. ಬಿಜಾಪೂರ ಸುಲ್ತಾನರ ಆಡಳಿತ ನೇರವಾಗಿ ಕುಡಚಿಯೊಂದಿಗೆ ತಳಕುಗೊಂಡಿತ್ತು. ಹೀಗೆ ಕುಡಚಿ ಮಧ್ಯಕಾಲೀನ ಭಾರತದ ಇತಿಹಾಸದಲ್ಲಿ ಪ್ರಮುಖ ಪಟ್ಟಣವಾಗಿ ಇಸ್ಲಾಂ ಸಾಮ್ರಾಜ್ಯ ನಿರ್ಮಾಣಕ್ಕೆ ಕಾರಣವಾಯಿತು. ಇಲ್ಲಿಯ ಪ್ರಾಚೀನ ಚರಿತ್ರೆ ತಿಳಿಯದು. ಪ್ರಾಚೀನ ಶಾಸನಗಳು ಸಿಗುವುದಿಲ್ಲ. ಆದರೆ ಕೆಲವು ಪರ್ಷಿಯನ್ ಶಾಸನಗಳು ಸಿಗುತ್ತವೆ. ಈ ಗ್ರಾಮದ ವಿಶೇಷವೆಂದರೆ ಪಶ್ಚಿಮೋತ್ತರ ದಿಕ್ಕುಗಳಲ್ಲಿ ಕೃಷ್ಣಾ ನದಿ ಸುತ್ತುವರಿದುದು. ಹೀಗಾಗಿ ತುಂಬಾ ಫಲವತ್ತಾದ ಕಪ್ಪು ಮಣ್ಣಿನ ನೆಲೆ ಇಲ್ಲಿಯದು. ಪ್ರಾಚೀನ ಕಾಲದಿಂದಲೂ ಪ್ರಾಕೃತಿಕ ಶ್ರೀಮಂತಿಕೆಗೆ ಹೆಸರಾಗಿತ್ತು.

ಕುಡಚಿ ಗ್ರಾಮವು ಅಧ್ಯಯನಕಾರರ ಗಮನ ಸೆಳೆದ ರಾಯಬಾಗ ತಾಲೂಕಿನ ಮೊದಲ ಗ್ರಾಮ. ಕೃಷ್ಣಾ ನದಿ ತೀರದ ಪ್ರಾಚ್ಯ ನೆಲೆಗಳನ್ನು ಗುರುತಿಸುವ ಸಂಶೋಧನೆ ಕೈಗೊಂಡಿದ್ದ ಡಾ. ಅ. ಸುಂದರ ಅವರು 'ಕುಡಚಿಯಲ್ಲಿ ಐದು ಪ್ರಾಚ್ಯ ನೆಲೆಗಳನ್ನು ಗುರುತಿಸುತ್ತಾರೆ.'[೧] ೫೦ ವರ್ಷಗಳ

೧. ಪಿ. ಬಿ. ದೇಸಾಯಿ, ಸ್ಟಡೀಸ್ ಇನ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರಲ್ (ಫೆಲಿಟೇಶನ್) ೧೯೭೧ ಪುಟ : ೧೩-೧೪ ಮತ್ತು ೨೪ ರಿಂದ ೨೮.

ಹಿಂದೆ ಉತ್ಖನನ ಕೈಗೊಂಡಿದ್ದರು. ಹಲವು ಗ್ರಾಮಗಳಲ್ಲಿ ಪ್ರಾಚ್ಯ ನೆಲೆಯ ಎರಡು-ಮೂರು ಪರಿಸರಗಳು ಪತ್ತೆಯಾದರೆ ಕುಡಚಿಯಲ್ಲಿ ಐದು ನೆಲೆಗಳನ್ನು ಗುರುತಿಸಿ ಗಮನ ಸೆಳೆದಿದ್ದರು. ಅಲ್ಲಿಯ ಬೂದಿ ದಿಬ್ಬವನ್ನು ಅಧ್ಯಯನಕ್ಕೆ ಒಳಪಡಿಸಿ ರೋಚಕ ಮಾಹಿತಿಗಳನ್ನು ಹೊರಗೆಡವಿದ್ದರು. ಡಾ. ಅ. ಸುಂದರ ಅವರ ಅಧ್ಯಯನವನ್ನು ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಚ್ಯಶಾಸ್ತ್ರ ಹಾಗೂ ಶಾಸನ ಸಂಶೋಧನಾ ವಿಭಾಗ ಮುಂದುವರೆಸಿತು. ಡಾ. ಶ್ರೀನಿವಾಸ ಪಾಡಿಗಾರ ಅವರ ನೇತೃತ್ವದಲ್ಲಿ ೨೦೦೫ರ ಎಪ್ರೀಲ್ ಮೇ ತಿಂಗಳಲ್ಲಿ ಮತ್ತೊಮ್ಮೆ ಉತ್ಖನನ ಕಾರ್ಯ ನಡೆಯಿತು. ಆ ಸಂದರ್ಭದಲ್ಲಿ ಡಾ. ಶ್ರೀನಿವಾಸ ಪಾಡಿಗಾರರ ಲೇಖನ ಹೊಸದಿಲ್ಲಿಯ ಭಾರತೀಯ ಪುರಾತತ್ವ ಸಂಸ್ಥೆ ಪ್ರಕಟಿಸುವ 'ಪುರಾತತ್ವ' ನಿಯತಕಾಲಿಕೆಯಲ್ಲಿ ೨೦೦೫ರಲ್ಲಿ ಪ್ರಕಟಗೊಂಡಿತು. ಅದು ಈ ಅಧ್ಯಯನಕ್ಕೆ ಪ್ರೇರಣೆ ನೀಡಿತು. ಆದ್ದರಿಂದ ಪ್ರಸ್ತುತ ಅಧ್ಯಯನ ಕುಡಚಿಯಿಂದಲೇ ಆರಂಭಗೊಳ್ಳುವುದು ಅನಿವಾರ್ಯವಾಯಿತು. ಡಾ. ಶ್ರೀನಿವಾಸ ಪಾಡಿಗಾರ, ಅ. ಸುಂದರ ಅವರಿಗಿಂತ ಎರಡು ಹೆಚ್ಚು ನೆಲೆಗಳನ್ನು ಗುರುತಿಸಿದ್ದರು. ಅಂದರೆ ಡಾ. ಪಾಡಿಗಾರ ಏಳು ಪ್ರಾಚ್ಯ ನೆಲೆಗಳನ್ನು ಗುರುತಿಸಿರುತ್ತಾರೆ. ಆದರೆ ಅವುಗಳ ಹೆಸರು ಉಲ್ಲೇಖಿಸುವುದಿಲ್ಲ. ನೆಲೆಗಳ ಸಂಖ್ಯೆಯನ್ನು ಗುರುತಿಸುವುದರ ಮಟ್ಟಿಗೆ ಮಾತ್ರ ಆ ಲೇಖನ ಸೀಮಿತಗೊಂಡಿತ್ತು. ಈ ಅಧ್ಯಯನದ ಕ್ಷೇತ್ರ ಕಾರ್ಯದಲ್ಲಿ ಆ ಏಳು ನೆಲೆಗಳನ್ನು ಹುಡುಕಿ ಹೆಸರಿಸಲಾಗಿದ್ದು ಅವು ಇಂತಿವೆ-

೧) ಶಿಕನಾಳ

೨) ಬಕಾಲಾಬಾಗ

೩) ಗೋವೆ ಖೇತ

೪) ಬೇನಾಗೀರಾ

೬) ರೌವಡುಹಾಳ (ಒಂದು) (ಪೂರ್ವ ಕರಲಹಾಳ)

೭) ರೌವಡುಹಾಳ ಎರಡು (ಪಶ್ಚಿಮ)

ಕುಡಚಿಯಲ್ಲಿ ಮುಸ್ಲಿಂ ಪ್ರಾಬಲ್ಯ ಇರುವುದರಿಂದ ಸ್ಥಳೀಯರು ಅವರ ಪರಿಭಾಷೆಯಲ್ಲಿಯೇ ಈ ನೆಲೆಗಳನ್ನು ಹೆಸರಿಸಿದ್ದಾರೆ.

೩.೫.೧.೧ ಶಿಕನಾಳ :

ಇದು ಕುಡಚಿಯಿಂದ ಚಿಂಚಲಿಗೆ ಹೋಗುವ ಹಳೆಯ ರಸ್ತೆಯ ಮೇಲಿದೆ. ಕುಡಚಿಯಿಂದ ಚಿಂಚಲಿಗೆ ಹೋಗಲು ಎರಡು ರಸ್ತೆಗಳಿದ್ದು, ಸರಕಾರ ಅಭಿವೃದ್ಧಿಪಡಿಸಿದ ರಸ್ತೆ ಒಂದು, ಮತ್ತೊಂದು ಶಿಕನಾಳದ ಮೇಲಿಂದ ಹಾಯ್ದು ಹೋಗುವ ಹಳೆಯ ದಾರಿ. ಈಗ ಶಿಕನಾಳದಲ್ಲಿ ನೂರಕ್ಕೂ ಹೆಚ್ಚು ಕುಟುಂಬಗಳಿವೆ. ಅಲ್ಲಿ ಸರಕಾರಿ ಶಾಲೆಯೂ ಇದೆ. ಶಿಕನಾಳ ಕುಡಚಿಯಿಂದ ೨ ಕಿ.ಮೀ ನೈಋತ್ಯ ದಿಕ್ಕಿನಲ್ಲಿದೆ. ಅಲ್ಲಿ ಈ ಮೊದಲು ೭೦-೮೦ ಅಡಿಗಳಷ್ಟು ಎತ್ತರದ ಬೂದಿ ದಿಬ್ಬವಿತ್ತು. ಈಗ ಆ ದಿಬ್ಬ ಕರಗಿ ಹೋಗಿದೆ. ಅದರ ಸುತ್ತಲಿನ ಕ್ಷೇತ್ರ ಕೃಷಿ ಭೂಮಿಯಾಗಿ ಪರಿವರ್ತಿತಗೊಂಡಿದೆ. ಈಗಲೂ

ಬೂದಿ ದಿಬ್ಬದ ಅವಶೇಷಗಳು ಉಳಿದುಕೊಂಡಿವೆ. ಚಿತ್ರದಲ್ಲಿಯ ವಿದ್ಯುತ್ ಪರಿವರ್ತಕ ಸ್ಥಳದಲ್ಲಿಯೂ ಬೂದಿ ದಿಬ್ಬವಿತ್ತು. ವಿದ್ಯುತ್ ಕಂಬಗಳಿಗಿಂತಲೂ ಆ ದಿಬ್ಬ ಎತ್ತರವಿತ್ತಂತೆ. ಈಗ ಅದು ಬರಿ ಅವಶೇಷ.



ಟಿಕನಾಳ ಪ್ರಾಚ್ಯ ನೆಲೆ

ಸ್ಥಳ ನಾಮ ನಿಷ್ಪತ್ತಿ :

ಟಿಕನಾಳ ಪದ 'ಟೆಕ್+ಹಾಳ'ದಿಂದ ನಿಷ್ಪನ್ನಗೊಂಡಿರಬೇಕು. ಟೆಕ್ ಎಂದರೆ ದಿಬ್ಬ. ಟೆಕಹಾಳ ಎಂದರೆ ಹಾಳುದಿಬ್ಬ. ಟೆಕಹಾಳ> ಟಿಕನಾಳ ಆಗಿರಬೇಕು. ಸ್ಥಳೀಯರ ಬಾಯಲ್ಲಿ ಟಿಕಾನಾಹಾಳ ಎಂದಾಗಿರಬಹುದು. ಅಲ್ಲಿ ಹಾಳು ಮಣ್ಣಿನ ವಿಶಾಲ ಪ್ರದೇಶವಿದ್ದುದೇ ಈ ಹೆಸರು ಬರಲು ಕಾರಣ. 'ಹಾಳ' ಎಂಬ ಪದ ಪ್ರಾಚ್ಯ ನೆಲೆಯನ್ನು ಸಂಕೇತಿಸುತ್ತದೆ.

ನೆಲೆಯ ವ್ಯಾಪ್ತಿ :

ಪಶ್ಚಿಮದಲ್ಲಿರುವ ಕೃಷ್ಣಾನದಿಯಿಂದ ಎರಡು ಕಿ.ಮೀ ಪೂರ್ವದಲ್ಲಿರುವ ಟಿಕನಾಳದ ಪ್ರಾಚ್ಯನೆಲೆ ೬ ರಿಂದ ೧೦ ಎಕರೆಗಳಷ್ಟು ವಿಸ್ತಾರವಾದುದು. ಈ ವಿಸ್ತಾರವಾದ ಪ್ರದೇಶದಲ್ಲಿ ಚಮನ್ ಮಲಿಕ್ ಅವರ ತೋಟದಲ್ಲಿ ಬೂದಿ ದಿಬ್ಬವಿತ್ತು. ಈಗ ಬೂದಿದಿಬ್ಬವಿದ್ದಲ್ಲಿ ಒಂದರಿಂದ ಒಂದೂವರೆ ಗುಂಟೆಯಷ್ಟು ಹಾಳು ಕ್ಷೇತ್ರವಿದೆ. ಇಲ್ಲಿ "ಹಾಳನಾನಾ" ಎಂಬ ದೇವರಿದ್ದು ಅದಕ್ಕೆ ಸಣ್ಣದಾದ ಒಂದು ಗುಡಿಯನ್ನು



ನಿರ್ಮಿಸಲಾಗಿದೆ. ಅದರ ಸುತ್ತಲೂ 10 x 10 ವಿಸ್ತೀರ್ಣದ ಕಂಪೌಂಡ ಗೋಡೆ ಕಟ್ಟಲಾಗಿದೆ. ಕಂಪೌಂಡಿನೊಳಗಡೆ ಗೊಂವಿನ ಗಿಡವಿದ್ದು ಆ ಗಿಡದ ಕೆಳಗೆ "ಹಾಳನಾನಾ" ಎಂದು ಕರೆಯಲ್ಪಡುವ ಒಂದು ಕಾಡುಗಲ್ಲಿದೆ. ಅದನ್ನು ಹಿಂದು ಮುಸ್ಲಿಂರು ಭೇದವಿಲ್ಲದೆ, ಅಮವಾಸ್ಯೆ ಮತ್ತು ಹುಣ್ಣಿಮೆಗಳಂದು ಪೂಜಿಸುವರು. ಈ ದೇವರು ಯಾವಾಗ ನಿರ್ಮಾಣಗೊಂಡಿತೋ ತಿಳಿಯದು. ಆದರೆ ಈ ದೇವರಿಂದಾಗಿ ಹಾಳು ದಿಬ್ಬದ ನೆಲೆ ಹಾಗೆಯೇ ಉಳಿಯಲು ಸಾಧ್ಯವಾಗಿದೆ. ಇಲ್ಲದಿದ್ದಲ್ಲಿ ಅದು ಕೃಷಿ ಕ್ಷೇತ್ರವಾಗಿ ಪರಿವರ್ತಿತಗೊಳ್ಳುತ್ತಿತ್ತು. ಈ ಪ್ರದೇಶದಲ್ಲಿ ಬೂದಿಯ ಹೆಂಟೆಗಳು (ಉಂಡೆ) ಸುತ್ತೆಲ್ಲ ಹರಡಿಕೊಂಡಿವೆ. ಆ ತೋಟದ ಮಾಲಿಕ ಚಮನ್ ಮಲಿಕ್ ಹೇಳುವಂತೆ ದೊಡ್ಡ ದಿಬ್ಬವಿದ್ದುದು ಕರಗಿ ಒಂದೆರಡು ಅಡಿಗಳಷ್ಟು ಎತ್ತರವಾದ ನೆಲೆಮಾತ್ರ ಉಳಿದಿದೆ. ಅದರ ಸುತ್ತಲಿನ ೮–೧೦ ಎಕರೆ ಪ್ರದೇಶಗಳಲ್ಲಿ ಹಾಳು ಮಣ್ಣು ಹರಡಿದೆ.

ಅವಶೇಷಗಳು :

ಬೂದಿಯ ಉಂಡೆಗಳನ್ನು ಹೊರತುಪಡಿಸಿ ಮಹತ್ವದ ಅವಶೇಷಗಳು ಸಿಗುವುದಿಲ್ಲ. ಇಲ್ಲಿ ಎರಡು ಸಲ ಉತ್ಖನನ ನಡೆದಿದೆ. ಮೊದಲ ಉತ್ಖನನ ೧೯೬೫ರಲ್ಲಿ ಡಾ. ಅ. ಸುಂದರ ಕೈಗೊಂಡಿದ್ದರು. 'ಸೂಕ್ಷ್ಮ ಶಿಲಾಯುಗ ಇತಿಹಾಸ ಆರಂಭಯುಗ – ಶಿಲಾ ತಾಮ್ರಯುಗವೆಂದು ಗುರುತಿಸಿದ್ದರು'[೨] ಎರಡನೆಯ ಸಲ ೨೦೦೫ರಲ್ಲಿ ಉತ್ಖನನ ನಡೆಯಿತು. ಆ ಉತ್ಖನನದಲ್ಲಿ ಒಟ್ಟು ಆರು ಪದರುಗಳಿದ್ದವು. ಹಳೆಯ ಮಡಕೆ ಚೂರುಗಳು, ಪ್ರಾಣಿ ಮತ್ತು ಮನುಷ್ಯರ ಎಲುವುಗಳು ಹಾಗೂ ಶಿಲಾಯುಗದ ಕೆಲವು ಸಾಧನಗಳು ಸಿಕ್ಕವು. ಏಳನೆಯ ಪದರು ನೈಸರ್ಗಿಕ ಮಣ್ಣು ಹಾಗೂ ಕಲ್ಲಿನಿಂದ ಕೂಡಿತ್ತು. "It is therefore probable that originally the people the chalcolithic stage had settled down and lived here fore some time. There was no such human activity which could have produced scoriaceous as has aby product. The site was deserted at some point of time perhaps owing to frequent river floods. The people moved to a safer place hearby. It is in this new settlement area that, as a by product of some major activity scoriaceans ash on a large sclae was produced. The ash was carried and dumped in the prevoius settlement site".[3]

---

೨. ಇಂಡಿಯನ್ ಅರ್ಕಿಯಾಲಜಿ ಎ– ರಿವ್ಯೂ ೧೯೬೫–೬೬ ಮತ್ತು ೧೯೬೭–೬೮.

೩. ಡಾ. ಶ್ರೀನಿವಾಸ ಪಾಡಿಗಾರ, "ಪುರಾತತ್ವ" (ಜರ್ನಲ್) ಹೊಸದೆಹಲಿ ಪ್ರಕಾಶನ, ಪುಟ ಸಂಖ್ಯೆ – ೩೫

"ಮಸ್ಕಿ ಹಾಗೂ ಸಾವಳ್ಗಿ ಮಾದರಿಯ ಮಡಕೆ ಚೂರುಗಳು ಈ ಉತ್ಖನನದಲ್ಲಿ ಸಿಕ್ಕಿವೆ. ಈಗಲೂ ಇಲ್ಲಿಯ ಕ್ಷೇತ್ರದಲ್ಲಿ ಮಡಿಕೆ ಚೂರುಗಳು, ಎಲುವಿನ ತುಂಡುಗಳು, ಶಿಲಾಯುಗದ ಜನರು



ಕಲ್ಲುಗಳು, ಕಪ್ಪು ಮತ್ತು ಕೆಂಪು ಬೂದಿ ಬಣ್ಣದ ಮಡಿಕೆ ಚೂರುಗಳು

ಉಪಯೋಗಿಸುತ್ತಿದ್ದ ಮೊಣಚು ಹಾಗೂ ಬೆಣಚು ಕಲ್ಲುಗಳು ಅಪಾರ ಪ್ರಮಾಣದಲ್ಲಿ ಸಿಗುತ್ತವೆ. ಇಂದು ಉತ್ಖನನ ಮಾಡಲಾಗದಷ್ಟು ಈ ನೆಲೆ ಹಾಳಾಗಿದೆ.

ಈ ನೆಲೆಯ ಪಶ್ಚಿಮ ದಿಕ್ಕಿನಲ್ಲಿ ಒಂದು ಫರ್ಲಾಂಗು ಅಂತರದಲ್ಲಿಯೇ ಕೃಷ್ಣಾನದಿಯ ಒಂದು ದೊಡ್ಡ ಒತ್ತು ಇದೆ. ಪ್ರಾಯಶಃ ಕೃಷ್ಣೆಯ ಪ್ರವಾಹದಿಂದಾಗಿ ಈ ನೆಲೆ ಹಾಳಾಗಿರಬಹುದಾಗಿದೆ ಎಂಬ ಡಾ. ಪಾಡಿಗಾರ ಅವರ ಊಹೆ ಸರಿಯೆನಿಸುತ್ತದೆ. ಅಥವಾ ನೈಸರ್ಗಿಕ ಪ್ರಕೋಪ ಇಲ್ಲವೇ ರೋಗ-ರುಜೀನಗಳ ಹಾವಳಿಯಿಂದಾಗಿ ಇಲ್ಲಿನ ಜನ ಬೇರೆಡೆಗೆ ಸ್ಥಳಾಂತರಗೊಂಡಿರಬಹುದು.

೩.೫.೧.೨ ಬಕಾಲಾಬಾಗ :

ಇದು ಠಿಕನಾಳಾದಿಂದ ಒಂದು ಕಿ.ಮೀ ಉತ್ತರದಲ್ಲಿದೆ. ಅಲ್ಲಿ ಕೃಷ್ಣಾ ನದಿ ದಕ್ಷಿಣೋತ್ತರವಾಗಿ ಹರಿಯುತ್ತಿದ್ದು ಒಮ್ಮೇಲೆ ಪೂರ್ವದೆಡೆಗೆ ಹೊರಳುತ್ತದೆ. ಕಪ್ಪು ಮಣ್ಣಿನ ಫಲವತ್ತಾದ ಪ್ರದೇಶದಲ್ಲಿ ಹಾಳುಮಣ್ಣಿನ ದಿಬ್ಬ ಇತ್ತೆಂದು ಸ್ಥಳೀಕರು ಹೇಳುತ್ತಾರೆ. ಈಗ ಆ ಯಾವ ಕುರುಹುಗಳು ಸಿಗುವುದಿಲ್ಲ. ಅಲ್ಲಿಯ ಜನರು ಇದನ್ನು 'ಜನ್ನು ತೋಟ'ವೆಂದೂ ಕರೆಯುತ್ತಾರೆ. ಇಲ್ಲಿಯ ಹಾಳು ಮಣ್ಣು ಬೇರೆಡೆಗೆ ಸಾಗಿಸಲಾಗಿದೆ. ಈಗ ಯಾವ ಅವಶೇಷಗಳು ಸಿಗುವುದಿಲ್ಲ. ಡಾ. ಅ. ಸುಂದರ, ಡಾ.



ಶ್ರೀನಿವಾಸ ಪಾಡಿಗಾರ ಇಲ್ಲಿಯೂ ಕೂಡ ಬೂದಿಯ ದಿಬ್ಬವಿತ್ತೆಂದು ಹೇಳಿರುವರು. ಇಂದು ಬಕಾಲಾಬಾಗ ಎಂದು ಕರೆಯಲ್ಪಡುವ ಈ ಪ್ರದೇಶ ಐದಾರು ಎಕರೆ ವಿಸ್ತಾರವಾಗಿದೆ. ಜನ ಇದನ್ನು 'ಹಸುಗಲ್ಲು' ಎಂದು ಹೇಳುವರು. ಅವರ ಅಭಿಪ್ರಾಯದಂತೆ ಇದನ್ನು ಹಸುಗಳನ್ನು ಮೇಯಿಸಲು ಮೀಸಲಾಗಿಡಲಾಗಿತ್ತಂತೆ. ಅಂದರೆ ಇದು ಗೋಮಾಳವಾಗಿರಬೇಕು. ಆದರೆ 'ಹಸುಗಲ್ಲು' ಅದು ಗೋವುಗಳಿಗೆ ಸಂಬಂಧಿಸಿರಬಹುದೆಂದೆನಿಸುವುದಿಲ್ಲ. ಇನ್ನಾವುದೇ ಅದರ ಪ್ರಾಚೀನ ವೈಶಿಷ್ಟ್ಯವನ್ನು ಸಂಕೇತಿಸುತ್ತಿರಬಹುದು. ಆ ನಿಟ್ಟಿನಲ್ಲಿ ಯೋಚಿಸಬೇಕು.

೩.೫.೧.೩ ಗೋವೆ ಖೇತ :

ಇದು ಕುಡಚಿಯಿಂದ ದಕ್ಷಿಣ ದಿಕ್ಕಿನಲ್ಲಿ ಒಂದೂವರೆ ಕಿ.ಮೀ ಅಂತರದಲ್ಲಿದೆ. ಸುಟ್ಟಟ್ಟಿ ಸೀಮೆಯಲ್ಲಿದೆ. ಕುಡಚಿಯಿಂದ ಜಮಖಂಡಿಗೆ ಹೋಗುವ ರಾಜ್ಯ ಹೆದ್ದಾರಿಯಿಂದ ದಕ್ಷಿಣದಲ್ಲಿ ಗೋವೆ ಖೇತ ಇದ್ದು ಅದೊಂದು ಪ್ರಾಚೀನ ಮಾನವನ ನೆಲೆಯಾಗಿತ್ತೆಂಬುದಕ್ಕೆ ಅಲ್ಲಿಯ ಅನೇಕ ಅವಶೇಷಗಳು ಪುಷ್ಠಿ ನೀಡುತ್ತವೆ.



ಗೋವೆ ಖೇತದ ಪ್ರಾಚ್ಯ ನೆಲೆ

ಇದಕ್ಕೆ ಗೋವೆ ಖೇತ ಎಂದು ಏಕೆ ಕರೆದರು ಎಂಬುದು ತಿಳಿಯುವುದಿಲ್ಲ. ದಕ್ಷಿಣದಿಂದ ಉತ್ತರಕ್ಕೆ ಒಂದು ಹಳ್ಳ ಹರಿಯುತ್ತಿದ್ದು, ಅದರ ದಡದಲ್ಲಿ ಲಕ್ಕವ್ವನ ಗುಡಿಯಿದೆ. ಈ ನೆಲೆಯ ವಿಸ್ತಾರ ಸು. ೩ ಎಕರೆ. ಗೋವೆ ಖೇತದಲ್ಲಿಯ ಹಾಳು ಮಣ್ಣನ್ನು ಕುಡಚಿ ಹಾಗೂ ಸುಟ್ಟಟ್ಟಿ ಜನ ಮನೆ ಕಟ್ಟಲು ಹಾಗೂ ಕೃಷಿ ಚಟುವಟಿಕೆಗಳಿಗೆ ಉಪಯೋಗಿಸುವರು. ಸದ್ಯ ಇದು ಕೃಷಿ ಕ್ಷೇತ್ರವಾಗಿ



ಪರಿವರ್ತಿತಗೊಂಡಿದ್ದು ಪಾರ್ವತಿ ಅವರಾದಿಯವರ ಅಧೀನದಲ್ಲಿದೆ.

ಇದು ಎತ್ತರ ಪ್ರದೇಶವಾಗಿದ್ದು ಸುತ್ತೆಲ್ಲ ಇಳಿಜಾರಾದ ಭೂಮಿಯಿದೆ. ಹಿಂದೆ ಇಲ್ಲಿ ೧೦ ಅಡಿ ಎತ್ತರದ ಹಾಳು ಮಣ್ಣಿನ ದಿಬ್ಬವಿತ್ತು. ಈಗ ಶಿಲಾಯುಗದ ಯಾವುದೇ ಕುರುಹು ಸಿಹುವುದಿಲ್ಲ.

೩.೫.೧.೪ ಹಾಳಖೇತ :

ಇದು ಕುಡಚಿ ಪಟ್ಟಣಕ್ಕೆ ಹೊಂದಿಕೊಂಡಿರುವ ಕೃಷ್ಣಾನದಿಯ ಅಂಚಿನಲ್ಲಿದೆ. ಮಸಾಹೇಬತಿ ದರ್ಗಾದ ಎದುರಿಗಿರುವ ಈ ಪ್ರದೇಶವನ್ನು ಹಾಳಖೇತ ಎಂದು ಕರೆಯುತ್ತಾರೆ. "ಸುಮಾರು ೮೦೦ ವರ್ಷಗಳ ಹಿಂದೆ ಬಲುಚಿಸ್ತಾನದ ಹಜರತ್ ಮಸಹೇಬಾ ಆಶ್ರಪೇ ಧೋಜಾಹನ ಎಂಬ ಮಹಿಳೆ



ಮಾಸಾಹೇಬತಿ ದರ್ಗಾ ಎದುರಿಗಿನ ಪ್ರಾಚ್ಯ ನೆಲೆ

ಇಲ್ಲಿರುವ ಮಗನಾದ ದುರ್ಗಶೇಖ ಮಹಮ್ಮದ ಶಿರಾಜುದ್ದೀನ ಜೈನುದ್ದಿನರವರನ್ನು ಕಾಣಲು ಬಂದಳು".[೪] ನಂತರ ಒಂದು ದಿನ ಸಿಟ್ಟಿಗೆದ್ದು ಪವಾಡದಿಂದ ಈ ಪ್ರದೇಶವನ್ನು ಸುಟ್ಟು ಹಾಕಿದಳೆಂಬ ಪ್ರತೀತಿ ಇದೆ. ಅಂದಿನಿಂದ ಇದು 'ಹಾಳಖೇತ' ಎಂದು ಕರೆಯಲ್ಪಡುತ್ತಿದೆ ಎಂಬುದನ್ನು ಮೌಲ್ವಿಗಳು ಹಾಗೂ ಸ್ಥಳೀಯರು ಹೇಳುತ್ತಾರೆ. ಈ ನೆಲೆಯ ವಿಸ್ತಾರವು ಸು. ೨ ರಿಂದ ೪ ಎಕರೆಯಷ್ಟಿದೆ. ಈ ನೆಲೆಯು ನದಿ ಪಾತ್ರದಿಂದ ಸು. ೩೦೦ ಮೀಟರ ಎತ್ತರದ್ದಾಗಿದೆ. ಸುಮಾರು ೫೦ ವರ್ಷಗಳ

---

೪. ಅಪ್ಪಣ್ಣ. ನ. ಹಂಜೆ 'ರಾಯಬಾಗ ಪ್ರದೇಶದ ದೇವಾಲಯಗಳು ಶಿಲ್ಪ ಮತ್ತು ಶಾಸನಗಳು' ಪ್ರಾ. ಭಾ. ಇ ಮತ್ತು ಶಾ. ವಿ ಕ.ವಿ.ವಿ.ಧಾರವಾಡ-೨೦೦೦



ಹಿಂದೆ ಇಲ್ಲಿಯ ಹಾಳು ಮಣ್ಣನ್ನು ಕೃಷಿ ಚಟುವಟಿಕೆಗಾಗಿ ಬೇರೆಡೆ ವರ್ಗಾಯಿಸಿದರು. ಸಧ್ಯ ಈ ಪ್ರದೇಶವು ಕೃಷಿ ಭೂಮಿಯಾಗಿ ಪರಿವರ್ತನೆಗೊಂಡಿದೆ.

೩.೫.೧.೫ ಬೀನಾಗೀರಾ :



ಬೀನಾಗೀರಾ ಪ್ರಾಚ್ಯ ನೆಲೆ

ಇದು ಕುಡಚಿಯಿಂದ ಪೂರ್ವ ದಿಕ್ಕಿನಲ್ಲಿದೆ. ಸು. ಅರ್ಧ ಕಿ.ಮೀ ದೂರದಲ್ಲಿದೆ. ಕುಡಚಿಯಿಂದ ಜಮಖಂಡಿಗೆ ಹೋಗುವ ರಾಜ್ಯ ಹೆದ್ದಾರಿಯ ಪಕ್ಕದಲ್ಲಿದೆ. ಇದು ಚಿಕ್ಕ ಕಲ್ಲುಗಳಿಂದ ಕೂಡಿದ (ಕೆಂಪು ಮಿಶ್ರಿತ) ಮರಡಿಭೂಮಿಯಾಗಿದೆ. ಇಲ್ಲಿ ಸಧ್ಯ ಜನವಸತಿ ಇರುವುದಿಲ್ಲ. ಈ ಪ್ರದೇಶವು ಕೃಷಿ ಚಟುವಟಿಕೆಗೆ ಯೋಗ್ಯವಿಲ್ಲದ್ದರಿಂದ, ಕೃಷಿ ಚಟುವಟಿಕೆ ಕಂಡು ಬರುವುದಿಲ್ಲ. ಇಲ್ಲಿ ನೀರಿನ ಕೊರತೆಯಿದ್ದು, ಬರಡು ಭೂಮಿಯನ್ನು ಹೊಂದಿದೆ. ಸ್ಥಳೀಯ ಜನರ ಹೇಳಿಕೆಯ ಪ್ರಕಾರ ಬೀನಾಗೀರಾ ಎಂದರೆ ತೆಗ್ಗು ಪ್ರದೇಶ. ಇಲ್ಲಿ ನಿರಂತರ ನೀರು ನಿಲ್ಲುತ್ತಿದ್ದುದರಿಂದ ಈ ಹೆಸರು ಪಡೆದುಕೊಂಡಿತು. ಕ್ಷೇತ್ರ ಅಧ್ಯಯನದ ಸಮಯದಲ್ಲಿ ಪ್ರಾಚೀನ ಮಾನವ ನೆಲೆಯ ಯಾವ ಅವಶೇಷಗಳು ದೊರೆಯುವುದಿಲ್ಲ. ಆದರೆ ನೆಲೆಯ ಲಕ್ಷಣಗಳು ಕಂಡು ಬರುತ್ತವೆ.

೩.೫.೧.೬ ರೌವಡು ಹಾಳ (ಒಂದು) (ಕರಲಹಾಳ ಪೂರ್ವ ದಿಕ್ಕು) :

ಈ ನೆಲೆಯು ಕುಡಚಿಯಿಂದ ಪೂರ್ವ ದಿಕ್ಕಿನಲ್ಲಿ ಸು. ೩ ಕಿ.ಮೀ ದೂರದಲ್ಲಿದೆ. ಗುಂಡವಾಡ ಗ್ರಾಮಕ್ಕೆ ಹೋಗುವ ರಸ್ತೆಯ ದಕ್ಷಿಣಕ್ಕಿದೆ. ಈ ಪ್ರದೇಶದಲ್ಲಿ ಸು. ೩೦ ರಿಂದ ೪೦ ಅಡಿಗಳಷ್ಟು ಎತ್ತರದ ಹಾಳು ಮಣ್ಣಿನ ದಿಬ್ಬವಿತ್ತೆಂದು ಸ್ಥಳೀಕರು ಹೇಳುತ್ತಾರೆ. ಈ ನೆಲೆಯ ವಿಸ್ತಾರ ಸು. ೪

[illegible]



[illegible]

[illegible]

[illegible]

ರಿಂದ ೬ ಎಕರೆ. ೪ ಎಕರೆ ವಿಸ್ತೀರ್ಣದ ಎತ್ತರದ ಜಮೀನ ಸುತ್ತಲೂ ಇಳಿಜಾರು ಪ್ರದೇಶವನ್ನು ಹೊಂದಿದೆ. ಈ ನೆಲೆಯ ಪಕ್ಕದಲ್ಲಿ ಒಂದು ಹಳ್ಳವಿದ್ದು ಅದನ್ನು ಕರಲಹಳ್ಳ ಎಂದು ಕರೆಯುತ್ತಾರೆ. ಪ್ರಾಚೀನ ಕಾಲದಲ್ಲಿ ಹಳ್ಳದ ಹರುವು ವಿಸ್ತಾರವಿತ್ತು. ಇಂದು ಕೃಷಿಯಿಂದಾಗಿ ಒತ್ತುವರಿಯಾಗಿ ಚಿಕ್ಕದಾಗಿದ್ದರೂ ಕೂಡ ವರ್ಷದಲ್ಲಿ ೧೦ ತಿಂಗಳು ಸತತವಾಗಿ ಹರಿಯುತ್ತಿದೆ. ದಕ್ಷಿಣೋತ್ತರವಾಗಿ



ರೌವಡು ಹಾಳ ಪ್ರಾಚ್ಯ ನೆಲೆ (ಪೂರ್ವ ದಿಕ್ಕು)

ಹರಿಯುವ ಈ ಹಳ್ಳವು ಕೃಷ್ಣಾ ನದಿಯನ್ನು ಸೇರುತ್ತದೆ. ಸು. ೪ ಎಕರೆ ವಿಸ್ತೀರ್ಣವಿದ್ದ ಪ್ರಾಚೀನ ನೆಲೆಯು ಇಂದು ಕೇವಲ ೧ ಎಕರೆ ೨೦ ಗುಂಟೆ ಜಮೀನದಲ್ಲಿ ಮಾತ್ರ ಪ್ರಾಚ್ಯ ನೆಲೆ ಲಕ್ಷಣಗಳು ಕಾಣುತ್ತವೆ. ಉಳಿದ ಭಾಗ ಕೃಷಿ ಭೂಮಿಯಾಗಿ ಮಾರ್ಪಟ್ಟಿದೆ. ಇಲ್ಲಿರುವ ಹಾಳುಮಣ್ಣನ್ನು ಸಂಪೂರ್ಣವಾಗಿ ವಿವಿಧ ಚಟುವಟಿಕೆಗಳಿಗಾಗಿ ಬೇರೆಡೆಗೆ ಸಾಗಿಸಲಾಗಿದ್ದರೂ ಕೂಡ ಕೆಲವು ಅವಶೇಷಗಳು ದೊರೆಯುತ್ತವೆ. ಹಾಳು ಮಣ್ಣಿನಡಿಯಲ್ಲಿ ಅನೇಕ ಕಪ್ಪು ಮತ್ತು ಕೆಂಪು ಬಣ್ಣದ ಮಡಿಕೆಯ ಚೂರುಗಳು ದೊರೆಯುತ್ತವೆ. ಮಡಿಕೆ ಚೂರುಗಳ ಮೇಲೆ ರೇಖಾಚಿತ್ರಗಳಿವೆ. ಕ್ಷೇತ್ರ ಅಧ್ಯಯನದಲ್ಲಿ ತೊಡಗಿರುವಾಗ ಕಲ್ಲು, ಮಡಿಕೆ ಚೂರುಗಳು, ಮುಂತಾದ ಅವಶೇಷಗಳು ದೊರೆತಿವೆ.

೩.೫.೧.೭ ರೌವಡು ಹಾಳ ಎರಡು (ಪಶ್ಚಿಮ ದಿಕ್ಕು) :

ಈ ಪ್ರಾಚ್ಯ ನೆಲೆಯು ಕುಡಚಿಯಿಂದ ಪೂರ್ವ ದಿಕ್ಕಿನಲ್ಲಿ ಸು. ೧$\frac{೧}{೨}$ ಕಿ.ಮೀ ಅಂತದಲ್ಲಿದೆ. ಗುಂಡವಾಡ ರಸ್ತೆಗೆ ಹೊಂದಿಕೊಂಡು ಇದೆ. ಈ ಪ್ರದೇಶದಲ್ಲಿ ರವುಡು ಎನ್ನುವ ವ್ಯಕ್ತಿ ವಾಸಿಸುತ್ತಿದ್ದನೆಂಬ ಕಾರಣಕ್ಕೆ ಈ ಸ್ಥಳವನ್ನು ರವುಡು ತೋಟವೆಂದು ಕರೆಯುತ್ತಾರೆ. ಈ ಪ್ರದೇಶದಲ್ಲಿ ದೊರೆಯುವ



ಹಾಳು ಮಣ್ಣು ಹೆಚ್ಚು ಫಲವತ್ತತೆಯಿಂದ ಕೂಡಿರುತ್ತದೆ. ಇದು ಸು. ೨೦ ರಿಂದ ೩೦ ಅಡಿ ಎತ್ತರದ ಪ್ರದೇಶವಾಗಿದ್ದು ಸುತ್ತಲೂ ಇಳಿಜಾರು ಕಂಡು ಬರುತ್ತದೆ. ಸಧ್ಯ ಈ ಪ್ರದೇಶವು ಕೃಷಿ ಭೂಮಿಯಾಗಿ ಪರಿವರ್ತಿತವಾಗಿದೆ.



ರೌವಡು ಹಾಳ ಪ್ರಾಚ್ಯ ನೆಲೆ (ಪಶ್ಚಿಮ ದಿಕ್ಕು)

೩.೫.೨ ಶಿರಗೂರ :

ಇದು ಕುಡಚಿ ಪಟ್ಟಣದಿಂದ ಪೂರ್ವಕ್ಕೆ ೫ ಕಿ.ಮೀ ಅಂತರದಲ್ಲಿದೆ. ಶಿರಗೂರ ಎಂಬ ಹೆಸರಿನ ಎರಡು ಊರುಗಳು ಅಕ್ಕ-ಪಕ್ಕದಲ್ಲಿದ್ದು ಒಂದನ್ನು 'ಹೊಸ ಶಿರಗೂರ' ಎಂದು ಮತ್ತೊಂದನ್ನು 'ಹಾಳ ಶಿರಗೂರ' ಎಂದೂ ಕರೆಯುವರು. ಹೊಸ ಶಿರಗೂರು ನದಿಯಿಂದ ಒಂದು ಕಿ.ಮೀ ದಕ್ಷಿಣದಲ್ಲಿದೆ. ಈ ಮೊದಲು ಕೃಷ್ಣಾ ನದಿ ಶಿರಗೂರನ ಪಕ್ಕದಲ್ಲಿಯೇ ಹರಿಯುತ್ತಿತ್ತಂತೆ, ಕಾಲಕ್ರಮೇಣ ನದಿಯ ಪಾತ್ರವು ಬದಲಾಗಿ ಅದು ಒಂದು ಕಿ.ಮೀ ಉತ್ತರಕ್ಕೆ ಸರಿಯಿತು ಎಂದು ಜನರು ಹೇಳುತ್ತಾರೆ.

ಪ್ರಾಚೀನ ಕಾಲದಲ್ಲಿ ಹೊಸ ಶಿರಗೂರದಲ್ಲಿ ಜನವಸತಿ ಇರಲಿಲ್ಲವಂತೆ. ಅದು ಶೃಂಗಋಷಿಯ ತಪೋವನ. ಶೃಂಗಋಷಿಯಿಂದಾಗಿಯೇ ಅದಕ್ಕೆ ಶೃಂಗಪುರವೆಂದು ಹೆಸರು ಬಂತು. ಶೃಂಗಪುರವೇ ಶಿರಗೂರ ಆಯಿತು. ಹಾಳಶಿರಗೂರನಲ್ಲಿದ್ದ ಜನ ಸುರಕ್ಷಿತತೆಯ ದೃಷ್ಟಿಯಿಂದ ಹೊಸ ನೆಲೆಗೆ ವಲಸೆ ಬಂದು ನೆಲೆಸಿದರು. ತಪೋವನದಲ್ಲಿ ಭೂತ ಪ್ರೇತಗಳ ಹಾವಳಿ ಇರುವುದಿಲ್ಲ ಎಂಬ ನಂಬಿಕೆ. ಆದ್ದರಿಂದ ಶಿರಗೂರ ಬೆಳೆಯಿತೆಂದು ಸ್ಥಳೀಯರು ಹೇಳುವ ಐತಿಹ್ಯ. ಇಲ್ಲಿ ಪ್ರಾಚೀನ ಅವಶೇಷಗಳು ಸಿಗುತ್ತವೆ. ಭಗ್ನಗೊಂಡ ಗಣೇಶ, ಭೈರವ ಮೂರ್ತಿಗಳು, ವೀರಗಲ್ಲು, ಮಾಸ್ತಿಕಲ್ಲು, ಗಜಲಕ್ಷ್ಮೀ ಶಿಲ್ಪಗಳು ಕಾಣಸಿಗುತ್ತವೆ. ಇಲ್ಲಿಯ ಸುಂದರವಾದ ಗಣಪತಿ ವಿಗ್ರಹವೊಂದನ್ನು ಶಿರಗೂರಿನ ದೇಸಾಯಿ ಪೂಣಾ ಪಟ್ಟಣಕ್ಕೆ ಸಾಗಿಸಿದನೆಂದು ಅಲ್ಲಿಯ ಹಿರಿಯರು ಹೇಳುವರು. ಈ ಶಿರಗೂರದಿಂದ ೩



ಕಿ.ಮೀ ದಕ್ಷಿಣದಲ್ಲಿ ಹಾಳ ಶಿರಗೂರ ಎಂಬ ಗ್ರಾಮವಿದೆ. ಅದಕ್ಕೆ ಗ್ರಾಮದ ಸ್ವರೂಪವಿಲ್ಲ. ತೋಟಗಳಲ್ಲಿ ಜನರು ಮನೆಕಟ್ಟಿಕೊಂಡು ವಾಸಿಸುತ್ತಿದ್ದಾರೆ. ಅದು ಸಂಪೂರ್ಣ ಕೃಷಿ ಪ್ರದೇಶ. ಆ ಪ್ರದೇಶವನ್ನೇ ಜನ ಹಾಳ ಶಿರಗೂರ ಎಂದು ಕರೆಯುತ್ತಾರೆ. 'ಹಾಳ' ಎಂಬ ಪದ ಪ್ರಾಚೀನ ಮಾನವ ನೆಲೆಯನ್ನು ಸಂಕೇತಿಸುತ್ತದೆ. ದಾದೇಪೀರ್ ಅಬ್ದುಲಸಾಬ ಖತೀಬ, ಭೀಮಪ್ಪ ರಾಮಪ್ಪ ಕೋಣೆ, ನಾಗಪ್ಪ ಬಸಪ್ಪ ಶಿರಗಾಂವಿ, ಬಾಳಕೃಷ್ಣ ಗಂಗಾರಾಮ ಬೋವಿ, ಕುಮಾರ ಶಿವಪ್ಪ ಖಿದ್ರಾಪೂರ ಇವರ ಜಮೀನುಗಳನ್ನೊಳಗೊಂಡ ೩೦ ಎಕರೆಗಳಷ್ಟು ವಿಸ್ತಾರವಾದ ಪ್ರದೇಶದಲ್ಲಿ ಹಾಳು ಹರಡಿತ್ತು. ೩೦ ರಿಂದ ೪೦ ಅಡಿಗಳಷ್ಟು ಎತ್ತರವಾದ ಹಾಳು ಮಣ್ಣಿನ ದಿಬ್ಬ ಅಲ್ಲಿತ್ತು. ಅದರ ಪಕ್ಕದಲ್ಲಿ ಪಶ್ಚಿಮದಿಂದ ಉತ್ತರಕ್ಕೆ ಒಂದು ಹಳ್ಳ ಹರಿಯುತ್ತಿತ್ತು. ಹಳ್ಳದ ದಂಡೆಯ ಮೇಲೆ ಲಗಮವ್ವನ ಕಾಡುಗಲ್ಲಿನ ವಿಗ್ರಹವಿತ್ತು. ಈಗ ಅದರ ಮೇಲೆ ಗುಡಿ ಕಟ್ಟಲಾಗಿದೆ. ಹಾಳು ಮಣ್ಣಿನ ದಿಬ್ಬ ಈಗ ಕಾಣುವುದಿಲ್ಲ. ಎಲ್ಲೋ ಕೆಲವು ಕಡೆ ಹಾಳು ಮಣ್ಣಿನ ಒಂದೆರಡು ಕುರುಹುಗಳು ಕಾಣುತ್ತವೆ.



ಸ್ಥಳೀಯರು ತೋರಿಸುವ ಹಾಳು ಮಣ್ಣಿನ ಅವಶೇಷ

ಅಲ್ಲಿಯ ಹಾಳು ಮಣ್ಣನ್ನು ಸುತ್ತಲಿನ ನಾಗರಿಕರು ತೆಗೆದುಕೊಂಡು ಹೋಗಿದ್ದಾರೆ. ಆ ಮಣ್ಣಿನಲ್ಲಿ ಮಡಿಕೆಯ ಚೂರುಗಳು, ಶಿಲಾ ಆಯುಧಗಳು ಸಿಕ್ಕಿದ್ದವು. ಇತಿಹಾಸಕಾರರು ಈ ಸ್ಥಳವನ್ನು ಪ್ರಾಚ್ಯ ನೆಲೆಯೆಂದು ಈಗಾಗಲೇ ಗುರುತಿಸಿದ್ದಾರೆ. "ಇದು ಸೂಕ್ಷ್ಮ ಶಿಲಾಯುಗ ಹಾಗೂ ಮಧ್ಯಶಿಲಾಯುಗದ ಮಾನವರ ನೆಲೆಯಾಗಿತ್ತು."[೫] ಈ ವಿಷಯ ಭಾರತೀಯ ಪುರಾತತ್ವ ಇಲಾಖೆಯ ೧೯೬೦-೬೧ ರಲ್ಲಿ ಪ್ರಕಟಗೊಂಡ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

೫. ಇಂಡಿಯನ್ ಆರ್ಕಿಯಾಲಜಿ ಎ-ರಿವ್ಯೂ ೧೯೬೦-೬೧



೩.೫.೩ ಭಿರಡಿ :

ಈ ಗ್ರಾಮ ಕುಡಚಿ–ಚಿಂಚಲಿ ರಸ್ತೆಯ ಮೇಲೆ ರಾಯಬಾಗದಿಂದ ೮ ಕಿ.ಮೀ ಉತ್ತರದಲ್ಲಿದೆ. ಇಲ್ಲಿಂದ ೩ ಕಿ.ಮೀ ಉತ್ತರದಲ್ಲಿ ಚಿಂಚಲಿ ಗ್ರಾಮವಿದೆ. ಭಿರಡಿಯ ಪಶ್ಚಿಮದಲ್ಲಿ ಸು. ೨ ಕಿ.ಮೀದಲ್ಲಿ ಕೃಷ್ಣಾ ನದಿ ಇದೆ. ಈಗ ಗ್ರಾಮದಲ್ಲಿ ಪ್ರಾಚೀನತೆಯ ಅನೇಕ ಅವಶೇಷಗಳು ಸಿಗುತ್ತವೆ. ಸಧ್ಯ ಒಂದು ದೊಡ್ಡ ಪ್ರಾಚೀನ ಕೋಟೆ ಇದ್ದು ಹಾಳು ಮಣ್ಣಿನ ದೊಡ್ಡ ಹುಡೆಗಳು ಮತ್ತು ದಿನ್ನೆಗಳ ಅವಶೇಷಗಳಿವೆ.



ಭಿರಡಿಯ ಹಾಳು ಮಣ್ಣಿನ ದಿನ್ನೆ

ಇಲ್ಲಿಯ ರಾಮದೇವಾಲಯದ ವಾಸ್ತು ಹಾಗೂ ಮೂರ್ತಿಗಳು ತೀವ್ರ ಗಮನ ಸೆಳೆಯುತ್ತವೆ.

ಭೃಗು ಋಷಿಯಿಂದ ತಮ್ಮ ಗ್ರಾಮಕ್ಕೆ ಭಿರಡಿ ಎಂದು ಬಂದಿದೆಯೆಂದು ಸ್ಥಳೀಯರ ಹೇಳಿಕೆ. 16-33·5º ಅಕ್ಷಾಂಶ ಹಾಗೂ 74-46·5º ಪೂರ್ವ ರೇಖಾಂಶಗಳ ಮಧ್ಯದಲ್ಲಿರುವ ಭಿರಡಿ ಪ್ರಾಚೀನ ಕಾಲದಲ್ಲಿ ಬೃಹದಾಕಾರವಾಗಿತ್ತು. ಅಲ್ಲಿ ಭೃಗುಮುನಿಗಳು ಘೋರ ತಪಸ್ಸು ಮಾಡಿದರು. ಆ ಋಷಿಗಳು ಐಕ್ಯವಾದ ನಂತರ ಆ ಸ್ಥಳ ಜನರ ವಾಸಕ್ಕೆ ತೆರೆದುಕೊಂಡಿತು ಎಂದು ಹಿರಿಯರು ಭಿರಡಿಯ ಕತೆ ಹೇಳುವರು. ಇಲ್ಲಿಯ ಶ್ರೀರಾಮ ದೇವಾಲಯದ ರಾಮ, ಸೀತೆ, ಭರತ, ಹನುಮ ಲಕ್ಷ್ಮಣ, ಶತ್ರುಘ್ನ, ಗಣಪತಿ, ಅನಂತಶಯನ ಬ್ರಹ್ಮ, ಭೂದೇವಿ, ಶ್ರೀದೇವಿ ವಿಗ್ರಹಗಳು ಪ್ರಾಚೀನವಾಗಿದ್ದು ಬಹುಸುಂದರವಾಗಿವೆ. ರಾಮ ದೇವಾಲಯದ ಗರ್ಭಗೃಹದಲ್ಲಿರುವ ಲಿಂಗ ಉತ್ತರಾಭಿಮುಖವಾಗಿದ್ದು ಕಪ್ಪು ಶಿಲೆಯಿಂದ ನಿರ್ಮಾಣಗೊಂಡಿದೆ. ಆ ಎಲ್ಲಾ ಪ್ರಾಚೀನ ಅವಶೇಷಗಳನ್ನು ಗಮನಿಸಿದಾಗ



ಇದು ನಿಶ್ಚಿತವಾಗಿ ಪ್ರಾಚ್ಯ ನೆಲೆಯಾಗಿ ಊರು ಒಳಗೆ ೨ ಎಕರೆ ವಿಸ್ತೀರ್ಣವಾದ ಪ್ರದೇಶದಲ್ಲಿ ಹಾಳು ಮಣ್ಣಿದೆ. ಇಲ್ಲಿ ಉತ್ಖನನ ನಡೆಸಿದರೆ ಅವಶೇಷಗಳು ಸಿಗಬಹುದು. "ಇತಿಹಾಸ ಆರಂಭಯುಗ ಹಂತದ ನೆಲೆ ಎಂದು ಗುರುತಿಸಿದ್ದಾರೆ."[೭]

೩.೫.೪ ಚಿಂಚಲಿ :



ಉಣ್ಣಿ ಮಟ್ಟೆಪ್ಪನ ನೆಲೆ

ಚಿಂಚಲಿ ಗ್ರಾಮವು ರಾಯಬಾಗ ತಾಲೂಕಿನ ಪ್ರಾಚೀನ ನೆಲೆಗಳಲ್ಲಿ ಒಂದು. ಇದು ರಾಯಬಾಗದಿಂದ ಉತ್ತರ ದಿಕ್ಕಿನಲ್ಲಿ ೭ ಕಿ.ಮೀ ಅಂತರದಲ್ಲಿದೆ. ಕೃಷ್ಣಾ ನದಿ ತೀರದಲ್ಲಿರುವ ಚಿಂಚಲಿ ಗ್ರಾಮ ಅಲ್ಲಿಯ ಮಾಯಕ್ಕಾ ದೇವಿಯಿಂದಾಗಿ ಕರ್ನಾಟಕ, ಮಹಾರಾಷ್ಟ್ರ, ಆಂಧ್ರ ಮೊದಲಾದ ಅಂದರೆ ದಕ್ಷಿಣ ಭಾರತದಲ್ಲಿಯೇ ಶಕ್ತಿ ಸ್ಥಳವೆಂದು ಪ್ರಸಿದ್ಧಿಯನ್ನು ಪಡೆದಿದೆ. ಈ ಮಾಯಕ್ಕನ ಕುರಿತು ಜನಪದ ಹಾಲುಮತ ಮಹಾಕಾವ್ಯ ಸುಂದರವಾಗಿ ಚರ್ಚಿಸುತ್ತದೆ. ಅವೆಲ್ಲ ಆಕರಗಳನ್ನು ಕಟ್ಟಿಕೊಂಡು ಅಧ್ಯಯನ ಮಾಡಿದಾಗ ಚಿಂಚಲಿ ಗ್ರಾಮದ ರೋಚಕ ಇತಿಹಾಸ ನಮಗೆ ತಿಳಿದು ಬರುತ್ತದೆ. ಚಿಂಚಲಿ ಗ್ರಾಮ ಪ್ರಾಚ್ಯ ನೆಲೆಯಾಗಿತ್ತೆಂಬುದಕ್ಕೆ ಅಲ್ಲಿ ಇಂದಿಗೂ ಅನೇಕ ಅವಶೇಷಗಳು ಸಿಗುತ್ತವೆ. ಮಾಯವ್ವನ ಕುರಿತು ಹೇಳುವ ಐತಿಹ್ಯಗಳು ಹಾಗೂ ಅಲ್ಲಿಯ ಹಿರಿಯರು ಹೇಳುವ ಕಥೆಗಳನ್ನು ಗಮನಿಸಿದಾಗ ಪ್ರಾಚೀನ ನೆಲೆಗಳನ್ನು ಗುರುತಿಸಬಹುದು. ಈಗ ಹಾಲುಹಳ್ಳ ಎಂದು ಕರೆಯಲಾಗುವ ಹಳ್ಳದ ದಡದಲ್ಲಿ ಪ್ರಾಚ್ಯ ನೆಲೆಯೊಂದಿತ್ತು. ಅದಕ್ಕೆ ಕುರುಹು ಆಗಿ ಅಲ್ಲಿ ಜಂಬಿಟ್ಟಿಗೆಗಳು

೭. ಇಂಡಿಯನ್ ಆರ್ಕಿಯಾಲಜಿ ಎ-ರಿವ್ಯೂ ೧೯೯೦-೯೧





ಜಂಬಿಟ್ಟಿಗೆಯ ಕಲ್ಲುಗಳು

ನಮಗೆ ಸಿಗುತ್ತವೆ ಅವುಗಳನ್ನೇ ಸ್ಥಳೀಯರು ಮಾಯಕ್ಕನ ಶಾಪದಿಂದ ಕುರಿಗಳು ಕಲ್ಲಾಗಿ ಬಿಟ್ಟವೆ ಎಂದು ಹೇಳುತ್ತಾರೆ. ಆ ಕುರಿತು ಒಂದು ಕಥೆಯನ್ನು ಕಟ್ಟುತ್ತಾರೆ. ಅದನ್ನು ಉಣ್ಣಿ ಮಟ್ಟೆಪ್ಪನ ಕಲ್ಲು ಎಂದು ಕರೆಯುತ್ತಾರೆ. ಒಮ್ಮೆ ಮಾಯವ್ವ ಹಾಲು ಹಳ್ಳಕ್ಕೆ ಹೋದಾಗ ಅವಳಿಗೆ ಕುರಿಯ ಹಾಲು ಮತ್ತು ಕಂಕಣಕ್ಕೆ ಉಣ್ಣೆ ಬೇಕಾಯಿತಂತೆ. ಅವಳು ಅಲ್ಲಿ ಕುರಿ ಕಾಯುತ್ತಿದ್ದ ಮಟ್ಟೆಪ್ಪನಿಗೆ ಹಾಲು ಹಾಗೂ ಉಣ್ಣೆಯನ್ನು ಕೇಳುತ್ತಾಳೆ. ಆತನು ಕೊಡಲು ನಿರಾಕರಿಸಿದಾಗ ನಿನ್ನ ಕುರಿಗಳು ಎಲ್ಲಾ ಕಲ್ಲಾಗಿ ಹೋಗಲೆಂದು ಶಾಪ ಕೊಟ್ಟಳಂತೆ. ಅವಳ ಶಾಪದ ಫಲವಾಗಿ ಅವನ ಕುರಿಗಳೆಲ್ಲಾ ಕಲ್ಲಾಗಿ ಹೋಗಿ ಬಿದ್ದವು ಎಂದು ಇಲ್ಲಿಯ ಜನರ ನಂಬಿಕೆ. ಆ ಕಲ್ಲುಗಳು ಜಂಬಿಟ್ಟಿಗೆಗಳು. ಜಂಬಿಟ್ಟಿಗೆಗಳಿಗೆ ಪ್ರಾಚೀನ ಚರಿತ್ರೆ ಇದೆ. ಪ್ರಾಯಶಃ ಬೂದಿ ಉಂಡೆಗಳಂತೆ ಕಾಣುವ ಜಂಬಿಟ್ಟಿಗೆಗಳನ್ನು ವೈಜ್ಞಾನಿಕವಾಗಿ ಪರೀಕ್ಷಿಸುವ ಅಗತ್ಯವಿದೆ. ಆ ಜಂಬಿಟ್ಟಿಗೆಗಳು ಇತಿಹಾಸ ಪೂರ್ವ ಕಾಲಕ್ಕೆ ಸಂಬಂಧಿಸಿರಬಹುದು. ಅಲ್ಲಿ ೨ ಜಂಬಿಟ್ಟಿಗೆಗಳನ್ನು ಹೊಂದಿರುವ ಪ್ರದೇಶಗಳು. ಆ ಎರಡು ಪ್ರದೇಶಗಳನ್ನು ಬೃಹತ್ ಮಡಿಕೆಯ ಚೂರುಗಳು ಹಾಗೂ ಎಲುಬುಗಳು ಕೆಲವು ಶಿಲಾಯುಧಗಳು ನಮಗೆ ಸಿಗುತ್ತವೆ. ಈಗ ಚಿಂಚಲಿಯ ಹಾಲುಹಳ್ಳ ಎಂದು ಕರೆಯುವ ತೊರೆ 'ಹಾಳು ಹಳ್ಳ'ವಾಗಿರಬಹುದು.

೩.೫.೫ ಖೇಮಲಾಪೂರ :

ರಾಯಬಾಗ ತಾಲೂಕಿನ ಪ್ರಾಚೀನ ಗ್ರಾಮಗಳಲ್ಲಿ ಖೇಮಲಾಪೂರವು ಒಂದು ಇದರ ಮೂಲ ಹೆಸರು ಕ್ಷೇಮಲಾಪೂರ ಎಂದಾಗಿರಬಹುದು. ಕ್ಷೇಮಲಾಪೂರ ಎಂದರೆ ಸುರಕ್ಷಿತಪುರ.





ಖೇಮಲಾಪುರದ ಬೂದಿಹಾಳ ಪ್ರದೇಶ

ನದಿ ದಡದಲ್ಲಿರುವ ಈ ಗ್ರಾಮಕ್ಕೆ ಯಾವ ಪ್ರವಾಹ ಭೀತಿ ಇರಲಿಕ್ಕಿಲ್ಲ. ೨೦೦೫ ಹಾಗೂ ೨೦೦೬ರಲ್ಲಿ ಕೃಷ್ಣಾ ನದಿಗೆ ಭೀಕರ ಪ್ರವಾಹ ಬಂದಾಗ ನದಿ ತೀರದ ಹಲವು ಗ್ರಾಮಗಳು ಮುಳಗಡೆಯಾಗಿದ್ದರೂ ಕೂಡಾ ದಿಬ್ಬದ ಮೇಲಿರುವ ಗ್ರಾಮ ಖೇಮಲಾಪೂರ ಸುರಕ್ಷಿತವಾಗಿತ್ತು. ಬಹುಶಃ ಅದರಿಂದಲೇ ಈ ಗ್ರಾಮಕ್ಕೆ ಕ್ಷೇಮಲಾಪೂರವೆಂದು ಕರೆದಿರಬಹುದು. ಈಗಿರುವ ಗ್ರಾಮ ಎತ್ತರದ ದಿಬ್ಬದ ಮೇಲಿದ್ದು ಸುತ್ತೆಲ್ಲ ಇಳಿಜಾರು ಪ್ರದೇಶವಿದೆ. ಅಲ್ಲಿ ಈಗಲೂ ನದಿಯ ಒತ್ತುಗಳು ಬಂದು ಮಳೆಗಾಲದಲ್ಲಿ ಗ್ರಾಮದ ಸುತ್ತಲೂ ಕೃಷ್ಣೆಯ ನೀರು ಸುತ್ತುವರೆಯುತ್ತದೆ. ಅಲ್ಲಿ ಪ್ರಾಚೀನ ಜಿನಾಲಯವಿದ್ದು ಅಲ್ಲಿಯ ಜಿನಾಲಯ ಕ್ರಿ.ಶ. ೧೧-೧೨ನೇ ಶತಮಾನಕ್ಕೆ ಸಂಬಂಧಿಸಿರಬಹುದು. ಅದರ ವಾಸ್ತು ಹಾಗೂ ಶಿಲ್ಪವನ್ನು ಗಮನಿಸಿದಾಗ ಕಲ್ಯಾಣದ ಚಾಲುಕ್ಯರ ಕಾಲದ ದೇವಾಲಯ ಅದಾಗಿರಬಹುದೆಂದು ತಿಳಿಯುತ್ತದೆ. ಒಟ್ಟಿನಲ್ಲಿ ಪ್ರಾಚೀನತೆಯ ಅನೇಕ ಕುರುಹು ನಮಗೆ ಅಲ್ಲಿ ಖೇಮಲಾಪೂರದಲ್ಲಿ ಸಿಗುತ್ತವೆ. ಅಲ್ಲಿಯ ಜಿನಾಲಯದಲ್ಲಿ ಕನ್ನಡದ ಮೊದಲ ಗ್ರಂಥ 'ವಡ್ಡಾರಾಧನೆ'ಯ ಒಂದು ಹಸ್ತ ಪ್ರತಿ ದಾಖಲೆ ಕೂಡಾ ನಮಗೆ ಸಿಗುತ್ತದೆ. ಖೇಮಲಾಪೂರ ರಾಯಬಾಗ ತಾಲೂಕಿನ ಒಂದು ಪ್ರಾಚೀನ ಜೈನ ಕ್ಷೇತ್ರವಾಗಿತ್ತೆಂದು ಸ್ಪಷ್ಟವಾಗಿ ಹೇಳಬಹುದು. ಖೇಮಲಾಪೂರದ ಪಕ್ಕದಲ್ಲಿ ಬೂದಿಹಾಳವೆಂದು ಕರೆಯುವ ಹಾಳು ಪ್ರದೇಶವಿದೆ. "ಈ ನೆಲೆ ಇತಿಹಾಸ ಪೂರ್ವ ಆರಂಭದ ನೆಲೆ ಎಂದು ಗುರುತಿಸಿದ್ದಾರೆ."[೭]

ಅದು ಒಂದು ಪ್ರಾಚ್ಯ ನೆಲೆಯಾಗಿತ್ತು. ಒಂದು ಕಾಲದಲ್ಲಿ ಅಲ್ಲಿ ಬೂದಿ ದಿಬ್ಬವಿತ್ತು ಎಂದು ಹೇಳುತ್ತಾರೆ. ಆದರೆ ಅಲ್ಲಿ ಯಾವ ಕುರುಹುಗಳು ನಮಗೆ ಸಿಗುವುದಿಲ್ಲ. ನೆಲ ಅಗೆದಾಗ ಹಾಳು

---

೭ ಇಂಡಿಯನ್ ಆರ್ಕಿಯಾಲಜಿ ಎ-ರಿವ್ಯೂ ೧೯೬೦-೬೧ ಪುಟ-೨೫



ಮಣ್ಣು ಸ್ವಲ್ಪ ಪ್ರಮಾಣದಲ್ಲಿ ಸಿಗುತ್ತದೆ. ರಾಮಪ್ಪ ಜುಂಜರವಾಡ, ಬಸಪ್ಪ ರಾಮಪ್ಪ ಬಾನೆ, ಸತ್ಯಪ್ಪ ಬಾಳಪ್ಪ ಕದಂ, ಶಿವಪುತ್ರ ಬಾನೆ, ಅಪ್ಪಾಸಾಬ ಬಾನೆ, ಕುಳಲಿ ಇವರ ತೋಟದ ಜಮೀನಿನಲ್ಲಿ ಈ ನೆಲೆಯನ್ನು ಗುರುತಿಸಲಾಗಿದೆ. ಇತ್ತೀಚೆಗೆ ಸತ್ಯಪ್ಪ ಬಾಳಪ್ಪ ಕದಂ ಇವರು ಜಮೀನು ಉಳುವಾಗ ಟ್ರ್ಯಾಕ್ಟರಿಗೆ ಎರಡು ದೊಡ್ಡ ಬಂಡೆಕಲ್ಲು ಹತ್ತಿದವು. ಆ ಬಂಡೆಗಲ್ಲುಗಳನ್ನು ತೆಗೆದು ನೋಡಿದಾಗ



ಇತಿಹಾಸ ಪೂರ್ವದ ರೇಖಾ ಚಿತ್ರ (ಆಕಳ ಕಲ್ಲು)

ಒಂದು ಬಂಡೆಗಲ್ಲಿನ ಮೇಲೆ ಆಕಳು ಹಾಗೂ ಡಮರುಗದ ರೇಖಾ ಚಿತ್ರ ಸಿಕ್ಕಿದೆ. ಇದು ಅತ್ಯಂತ ಮಹತ್ವದ ರೇಖಾಚಿತ್ರವಾಗಿದೆ. ಏಕೆಂದರೆ ಆ ಡಮರುಗ ಆಕಳುಗಳನ್ನು ನೋಡಿದರೆ ಯಾವುದೋ ಒಂದು ಕಾಲದ ಸಂಸ್ಕೃತಿಯ ಕುರುಹುಗಳಾಗಿದ್ದವು ಎಂದು ನಮಗೆ ಗೋಚರವಾಗುತ್ತದೆ. ಅವುಗಳನ್ನು ಆಧರಿಸಿ ಅಲ್ಲಿಯ ಜನರ ಧಾರ್ಮಿಕ ಬದುಕನ್ನು ಕಟ್ಟಿಕೊಡಬಹುದಾಗಿದೆ. ಈ ಪ್ರದೇಶದಲ್ಲಿ ಶೈವ ಸಂಸ್ಕೃತಿ ಆಗಲೇ ಆರಂಭವಾಗಿತ್ತು ಎಂಬುದು ಊಹಿಸಬಹುದು.

೩.೫.೬ ಬಾವಾನ ಸೌಂದತ್ತಿ ಮತ್ತು ನಸಲಾಪೂರ :

ನಸಲಾಪೂರ ಮತ್ತು ಬಾವನ ಸೌಂದತ್ತಿ ಗ್ರಾಮಗಳು ರಾಯಬಾಗ ತಾಲೂಕಿನ ಕೃಷ್ಣಾ ತೀರದಲ್ಲಿರುವ ಮತ್ತೆರಡು ಪ್ರಾಚ್ಯ ನೆಲೆಗಳು. ನಸಲಾಪೂರ ಕೃಷ್ಣಾ ನದಿಯಿಂದ ೨ ಕಿ.ಮೀ ದಕ್ಷಿಣದಲ್ಲಿದ್ದರೆ ಸವದತ್ತಿ ಗ್ರಾಮವು ಕೃಷ್ಣೆಯ ದಡದಲ್ಲಿದೆ. ಸವದತ್ತಿ ಗ್ರಾಮದಲ್ಲಿ ಕೃಷ್ಣೆಯ ಪ್ರವಾಹದಲ್ಲಿಯೇ ಒಂದು ದೇವಾಲಯವಿದ್ದು ಅದನ್ನು ಸ್ಥಳೀಯರು ಸೌಗಂಧಿಕಾ ದೇವಾಲಯವೆಂದು ಕರೆಯುತ್ತಾರೆ. ಅವಳ ಸೌಗಂಧಿಕೆಯ ಕುರಿತು ಮಹಾಭಾರತದ ಕಥೆಯನ್ನು ಕಟ್ಟುತ್ತಾರೆ. ಅವಳು ಯೋಜನಗಂಧಿ.



ಮತ್ಸ್ಯಗಂಧಿಯು ಸುಗಂಧಾದೇವಿಯಾಗಿ ಪರಿವರ್ತನೆಗೊಂಡಳೆಂದು ಹೇಳುತ್ತಾರೆ. ಅದೇನಿದ್ದರೂ ಸ್ಥಳೀಯ ಐತಿಹ್ಯ. ಕೂಡಾ ಬೆಳಗಾವಿ ಜಿಲ್ಲೆಯಲ್ಲಿ ಸವದತ್ತಿ ಎಂಬ ಹೆಸರಿನ ಎರಡು ಗ್ರಾಮಗಳು ನಮಗೆ ಸಿಗುತ್ತಿದ್ದು ಒಂದು ಬೆಳಗಾವಿ ಜಿಲ್ಲೆಯ ತಾಲೂಕಾ ಕೇಂದ್ರವಾಗಿರುವ ಯಲ್ಲಮ್ಮನ ಸವದತ್ತಿ, ಮತ್ತೊಂದು ಬಾವಾನ ಸವದತ್ತಿ. ಬಹುಶಃ ಈ ಎರಡು ಸವದತ್ತಿಗಳನ್ನು ಪ್ರತ್ಯೇಕಿಸಲು ರಾಯಬಾಗ ತಾಲೂಕಿನಲ್ಲಿಯ ಸವದತ್ತಿಯನ್ನು ಬಾವಾನ ಸವದತ್ತಿಯೆಂದು ಕರೆಯುತ್ತಾರೆ. ಬಹುಶಃ ಬಾವಾನ್ನ ಎಂದರೆ ಭತ್ತ. ಒಂದು ಕಾಲದಲ್ಲಿ ಸುಗಂಧಿತವಾದ ಭತ್ತವನ್ನು ಬೆಳೆಯುವ ಪ್ರದೇಶ ಇದಾಗಿರಬಹುದು. ಆದರೆ ಸ್ಥಳೀಯರು ಅಲ್ಲಿ ಒಬ್ಬ ಮುಸ್ಲಿಂ ಫಕೀರ ವಾಸವಾಗಿದ್ದು ಅವನಿಂದಾಗಿಯೇ ಈ ಗ್ರಾಮ ಬಾವಾನ ಸವದತ್ತಿಯೆಂದು ಹೆಸರಾಯಿತು ಎಂದು ಹೇಳುತ್ತಾರೆ. ಇದು ಪಾಮರ ನಿಷ್ಪತ್ತಿ. ನಿಜವಾಗಿಯೂ ಅದು ಒಂದು ಕಾಲದಲ್ಲಿ ಭತ್ತ ಬೆಳೆಯುವ ಪ್ರದೇಶವಾಗಿರಬಹುದೆಂದು ಹೆಚ್ಚು ಸಮಂಜಸವೆನಿಸುತ್ತದೆ. ಸವದತ್ತಿ ಗ್ರಾಮ ನಾಮದ ನಿಷ್ಪತ್ತಿ ಕುರಿತು ಯೋಚನೆ ಮೂಡಿದಾಗ ಅದು ಶ್ರಮಣ+ದತ್ತಿ=ಸವದತ್ತಿ. ಅಂದರೆ ಶ್ರವಣದತ್ತಿ ಹೋಗಿ ಸವದತ್ತಿ ಆಗಿರಬೇಕು. ಸವದತ್ತಿ ಹಾಗೂ ನಸಲಾಪೂರ ಇಂದಿಗೂ ಕೂಡಾ ಜೈನ ಧರ್ಮಿಯರ ಪ್ರಾಬಲ್ಯ ಹೊಂದಿವೆ. ಅವು ಪ್ರಾಚೀನ ಕಾಲದಿಂದಲೂ ಜೈನ ಪ್ರದೇಶಗಳೇ ಆಗಿರಬೇಕು. ಸವದತ್ತಿ ಜೈನ ಧರ್ಮದ ಸೊಗಡನ್ನು ಹೊಂದಿರುವುದು ಇದಕ್ಕೆ ಪುಷ್ಠಿ ನೀಡುತ್ತದೆ. ಇವೆರಡು ಗ್ರಾಮಗಳಲ್ಲಿ ಪ್ರಾಚ್ಯ ನೆಲೆಗಳನ್ನು ಗುರುತಿಸಬಹುದಾಗಿದೆ. ಆದರೆ ಆ ಕುರಿತು ಯಾವ ಅಧ್ಯಯನಗಳು ನಡೆದಿಲ್ಲ ಸಧ್ಯ ಅಲ್ಲಿಯ ನೆಲೆಗಳನ್ನು ಗಮನಿಸಿದಾಗ ಅಂತಹ ಅವಶೇಷಗಳು ಸಿಗುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡು ಬಂದರೂ ಉತ್ಖನನ ಕೈಗೊಂಡಾಗ ಅಲ್ಲಿಯೂ ಕೂಡಾ ಪ್ರಾಚ್ಯ ನೆಲೆಗಳ ಅವಶೇಷ ಸಿಗುವ ಸಾಧ್ಯತೆ ಹೆಚ್ಚು.

೩.೬ ಬೆಟ್ಟ ಪ್ರದೇಶದ ಪ್ರಾಚ್ಯ ನೆಲೆಗಳು :

ರಾಯಬಾಗ ತಾಲೂಕಿನ ಒಟ್ಟು ೫೫ ಹಳ್ಳಿಗಳಲ್ಲಿ ೨೨ ಬೆಟ್ಟ ಪ್ರದೇಶದ ಗ್ರಾಮಗಳು. ಇವುಗಳಲ್ಲಿ ಬೂದಿಹಾಳ, ಹುಬ್ಬರವಾಡಿ, ಮಾವಿನಹೊಂಡಾ, ರಾಮನಕಟ್ಟೆ, ದೇವನಕಟ್ಟೆ, ಬೆಂಡವಾಡ, ಇಟ್ನಾಳ, ಖಣದಾಳ, ಕಟಕಬಾವಿ, ಮಾಡಲಗಿ/ಮಾರಡಿ ಬಸ್ತವಾಡ, ನಿಡಗುಂದಿ ಪ್ರಮುಖ ಗ್ರಾಮಗಳು.

ಇವುಗಳಲ್ಲಿ ಬೂದಿಹಾಳ, ಮಾವಿನಹೊಂಡ, ರಾಮನಕಟ್ಟೆ, ಮಾವಿನಕಟ್ಟೆ, ಮಾಡಲಗಿ, ಹುಬ್ಬರವಾಡಿ, ಇಟ್ನಾಳ, ಖಣದಾಳ, ನಿಡಗುಂದಿ ಪ್ರಮುಖ ಪ್ರಾಚ್ಯ ನೆಲೆಗಳು.

೩.೬.೧ ಬೂದಿಹಾಳ :

ರಾಯಬಾಗದಿಂದ ದಕ್ಷಿಣದ ದಿಕ್ಕಿನಲ್ಲಿ ಸುಮಾರು ೬ ಕಿ.ಮೀ ಅಂತರದಲ್ಲಿ ಬೂದಿಹಾಳ ಎಂಬ ಗ್ರಾಮವಿದ್ದು ಈಗಿನ ಬೂದಿಹಾಳ ಗ್ರಾಮದಿಂದ ½ ಕಿ.ಮೀ ದೂರದಲ್ಲಿ ಲಗಮವ್ವನ ಗುಡಿ ಇದೆ. ದಕ್ಷಿಣದ ದಿಕ್ಕಿನಲ್ಲಿ ಬೂದಿಹಾಳ ಕ್ರಾಸದ ಪ್ರದೇಶವು ಬೂದಿ ದಿಬ್ಬದ ಪ್ರದೇಶವಾಗಿದೆ.



ನೆಲೆಯಲ್ಲಿ ದೊರೆತ ಬೂದಿ ಉಂಡೆಗಳು, ಬಳಸಿದ ಕಲ್ಲುಗಳು ಹಾಗೂ

ಮಡಕೆ ಚೂರುಗಳು



ಬೂದಿ ದಿಬ್ಬದ ಅವಶೇಷ





ಪೂರ್ವಕ್ಕೆ ಮುಖ ಹೊಂದಿ ಪಶ್ಚಿಮಕ್ಕೆ ಬೆನ್ನು ಮಾಡಿ ನಿಂತ ಲಗಮವ್ವನ ಗುಡಿ ಪ್ರದೇಶದ ಸುತ್ತೆಲ್ಲ ಈ ಬೂದಿ ಉಂಡೆಗಳಿವೆ. ಬೂದಿ ದಿಬ್ಬದ ಉತ್ತರ ದಿಕ್ಕಿನಲ್ಲಿ ಹಳ್ಳವಿದೆ. ಅದು ಪೂರ್ವದಿಂದ ಪಶ್ಚಿಮ ಮುಖವಾಗಿ ಹರಿಯುತ್ತದೆ. ಇಲ್ಲಿ ವರ್ಷದ ಹನ್ನೆರಡು ತಿಂಗಳು ನೀರು ಹರಿಯುತ್ತಿತ್ತೆಂದು ಹೇಳುತ್ತಾರೆ. ಈ ಪ್ರದೇಶದ ಪೂರ್ವಕ್ಕೆ ಮತ್ತು ದಕ್ಷಿಣಕ್ಕೆ ಬಾಗಿಯ ದೊಡ್ಡ ಬೆಟ್ಟಗಳು ಆವೃತ್ತವಾಗಿವೆ. ಬೂದಿಹಾಳದ ಸುತ್ತ ರಾಮಲಿಂಗೇಶ್ವರ ಗುಡಿ, ದೇವನಕಟ್ಟೆ ದುರ್ಗಾದೇವಿ ಗುಡಿಗಳಿವೆ. 'ಈಗಿನ ಬೂದಿಹಾಳ ಗ್ರಾಮದ ಲಕ್ಷ್ಮೀದೇವಿ ಗುಡಿಯ ಹತ್ತಿರ ದೊಡ್ಡ ದೊಡ್ಡ ಹರವಿಗಳು ಇದ್ದವು. ತಾವು ನೋಡಿದ್ದಾ'ಗಿ ಊರಿನವರು ಹೇಳುತ್ತಾರೆ. ಗುಡಿಯ ಸುತ್ತಲೂ ೪-೫ ಅಡಿಗಳಷ್ಟು ಇರುವ ಮಣ್ಣಿನ ದೊಡ್ಡದಾದ ಹರವಿಗಳು ಅಂದಾಜು ೩ ಫೂಟ ಎತ್ತರದ ನೆಲದಲ್ಲಿ (ಗುಡಿಯ ಹತ್ತಿರ) ಸಿಕ್ಕಿರುವುದಾಗಿ ನವಲಿಯೆಂಬುವವರು ಹೇಳುತ್ತಾರೆ. ಅವು ಒಡೆದ ಖಾಲಿ ಮಡಿಕೆಗಳಾಗಿದ್ದವು. ಗುಡಿಯ ಸಮೀಪ ಕೈಗೊಡಲಿ, ಬಾಚಿಯಂತಹ ಕಲ್ಲಿನ ಆಯುಧಗಳು ಸಿಗುತ್ತಿದ್ದವು. ಒಳಕಲ್ಲು ದೊರೆತ್ತಿತ್ತು ಎನ್ನುವ ವಿಚಾರವನ್ನು ಸಿದ್ರಾಮ ಭೀಮಪ್ಪ ಹೆಗಡೆ ಹೇಳುತ್ತಾರೆ. ಲಗಮವ್ವಾ ಸತ್ಯಪ್ಪ ಹೆಗಡೆ ಸಿದ್ರಾಮ ಇವರ ಸಹೋದರ. ಸತ್ಯಪ್ಪ ಇವರ ಧರ್ಮ ಪತ್ನಿಯವರು ಇವರೆಗೂ ಕೂಡ ತಮಗೆ ದೊರೆತ (ಬೂದಿಹಾಳದಲ್ಲಿ) ಒಳಕಲ್ಲನ್ನು ಜೋಪಾನವಾಗಿಟ್ಟುಕೊಂಡು ಬಂದಿದ್ದಾರೆ.



ಬೂದಿಹಾಳದ ಬೂದಿ ದಿಬ್ಬದ ನೆಲೆಯಲ್ಲಿ ಸಿಕ್ಕ ಒಳಕಲ್ಲು

ಇವರು ಭೂಮಿ ಉಳಿಮೆಯನ್ನು ಮಾಡುತ್ತಿರುವಾಗ ಅದು ದೊರೆತ್ತಿದ್ದು ಇದನ್ನು ಜೋಪಾನವಾಗಿ ಇಟ್ಟುಕೊಂಡು ಬಂದಿದ್ದಾರೆ. ಈ ಪ್ರದೇಶದಲ್ಲಿ ೮-೧೦ ಅಡಿಯಷ್ಟು ಎತ್ತರವಾದ ಬೂದಿ ದಿಬ್ಬವಿತ್ತು. ಅದು ೧೦ ಎಕರೆ ಪ್ರದೇಶದಷ್ಟು ವಿಸ್ತಾರವಾಗಿತ್ತು ಎಂದು ಭೂಮಿ ಮಾಲೀಕರಾದ ಹೆಗಡೆಯವರು ತಿಳಿಸುತ್ತಾರೆ. ಭೂಮಿಯ ಫಲವತ್ತತೆಗಾಗಿ ವಾಣಿಜ್ಯ ಬೆಳೆಗೆ ಅದನ್ನು ತೆಗೆದುಕೊಂಡು



ಹೋಗಿದ್ದಾರೆ. ನಮ್ಮ ಹಿರಿಯರು ಮಾರಾಟ ಮಾಡಿದ್ದಾರೆಂದು ತಿಳಿಸುತ್ತಾರೆ. ಈ ಬೂದಿ ದಿಬ್ಬದ ಪ್ರದೇಶದಲ್ಲಿ ಅಲ್ಪಸ್ವಲ್ಪ ಬೂದಿಯ ಹೆಂಟೆಗಳು ಚದುರಿಕೊಂಡು ಬಿದ್ದಿವೆ. ಈ ಪ್ರದೇಶದ ಬೂದಿ ಹೆಂಟೆಗಳು ಮತ್ತು ಕೃಷ್ಣಾ ನದಿ ಕೊಳ್ಳದ ಕುಡಚಿಯ ತಿಕನಹಾಳ ತೋಟದ ಬೂದಿಹೆಂಟೆಗಳು ಒಂದೇ ತೆರನಾದವುಗಳಾಗಿವೆ.

ಬೂದಿ ದಿಬ್ಬದ ದಕ್ಷಿಣ ಹಾಗೂ ಪೂರ್ವ ದಿಕ್ಕುಗಳಲ್ಲಿ ಎತ್ತರವಾದ ಎರಡು ಗುಡ್ಡಗಳಿವೆ. ಕಿ.ಮೀ ದಕ್ಷಿಣ ದಿಕ್ಕಿನಲ್ಲಿರುವ ಗುಡ್ಡಕ್ಕೆ ಬಸವನ ಗುಡ್ಡವೆಂದು ಕರೆಯುತ್ತಾರೆ. ಇದು ಬೂದಿ ದಿಬ್ಬದಿಂದ 1½ ಕಿ.ಮೀ ಉತ್ತರದಲ್ಲಿದೆ. ಈಗ ಆ ಗುಡ್ಡದ ಮೇಲೆ ಗಾಳಿ ಯಂತ್ರಗಳನ್ನು ಅಳವಡಿಸಿರುತ್ತಾರೆ. ನೆಲ ಪಾತಾಳಿಯಿಂದ ಸುಮಾರು ೨೦೦ ಅಡಿ ಎತ್ತರವಿದೆ. ಅದು ಪೂರ್ವದಲ್ಲಿರುವ ಬಾಗಿಗುಡ್ಡ. ದೇವನಕಟ್ಟೆ ಹದ್ದಿನಲ್ಲಿರುತ್ತದೆ.

ಬಸವನ ಗುಡ್ಡದಲ್ಲಿ ಒಂದು ಮಠ ಇದೆ. ಈ ಗುಡ್ಡಗಳನ್ನು ಬಾಗಿ ಗುಡ್ಡಗಳೆಂದು ಕರೆಯುತ್ತಿದ್ದರು. ಬಸವನ ಗುಡ್ಡದ ಮೇಲೆ ಪುಟ್ಟದಾದ ಶಿವ ದೇವಾಲಯವಿದ್ದು ಅದರ ಮುಂದೆ ೮ x ೬ ಅಡಿ ಅಳತೆಯ ನೈಸರ್ಗಿಕವಾದ ನೀರಿನ ಹೊಂಡವಿದೆ. ಆ ಹೊಂಡವು ಸದಾಕಾಲ ನೀರಿನಿಂದ ತುಂಬಿರುವುದು ಇಲ್ಲಿಯ ವಿಶೇಷ. ಇದನ್ನು ಸ್ಥಳೀಯರು ಸಿಡಿಲು ಬಾವಿಯೆಂದು ಕರೆಯುತ್ತಾರೆ. ಇದು ಅಷ್ಟೇನು ಆಳವಾಗಿಲ್ಲ. ಆದರೆ ಬೇಸಿಗೆ ಮಳೆಗಾಲ ಎಂತಹ ಬರಗಾಲವಿದ್ದರು ಬತ್ತುವುದಿಲ್ಲ.

ಆ ಹೊಂಡದ ಉತ್ತರ ದಿಕ್ಕಿನಲ್ಲಿ ಒಂದು ಕೊರಕಲು ಇದ್ದು ಆ ಕೊರಕಲಿನಲ್ಲಿ ಅನೇಕ ಮರಗಳಿವೆ. ಅದೊಂದು ನೈಸರ್ಗಿಕವಾದ ಆರಾಧನಾ ಕೇಂದ್ರವಾಗಿರಬಹುದು. ಮನುಷ್ಯ ಇತಿಹಾಸ ಪೂರ್ವಕಾಲದಲ್ಲಿ ಇಂತಹ ಕೊಳಗಳಲ್ಲಿಯೇ ಶಿವ ಮತ್ತು ಸೃಷ್ಟಿಯ ಕುರುಹುಗಳನ್ನು ಕಂಡುಕೊಂಡಿದ್ದು ನಮಗೆ ತಿಳಿಯುತ್ತದೆ. ಈಗಲೂ ಇಲ್ಲಿಯ ಜನಗಳಲ್ಲಿ ಈ ಸ್ಥಳದ ಆಕರ್ಷಣೆ ಇದೆ. ಅತ್ಯಂತ ಪೂಜ್ಯ ಭಾವನೆಯಿಂದ ನಡೆದುಕೊಳ್ಳುತ್ತಾರೆ. ಇಲ್ಲಿಯೇ ರಾಮಸ್ವಾಮಿಯವರ ಸಮಾಧಿ ಇದೆ. ನೂರು-ಇನ್ನೂರು ವರ್ಷಗಳ ಹಿಂದೆ ರಾಮಸ್ವಾಮಿ ಎಂಬ ಯೋಗಿಯೊಬ್ಬರು ನೆಲೆಸಿದರಂತೆ.

೩.೬.೨ ಇಟನಾಳ :

ರಾಯಬಾಗ ತಾಲೂಕಿನ ಇಟನಾಳ ಅತಿ ಸಣ್ಣ ಗ್ರಾಮ. ಸುಮಾರು ೪೦೦೦ ಜನಸಂಖ್ಯೆ. ಈ ಹಳ್ಳಿಯು ರಾಯಬಾಗದ ಆಗ್ನೇಯ ದಿಕ್ಕಿನಲ್ಲಿ ಬರುತ್ತದೆ. ರಾಯಬಾಗದಿಂದ ಇಟನಾಳ ಸುಮಾರು ೨೪ ಕಿ.ಮೀ ಅಂತರದಲ್ಲಿದೆ. ಹಾಳು ಇಟನಾಳ ಅಥವಾ ಹಳೆ ಇಟನಾಳ ಗ್ರಾಮವು ಈಗಿನ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಇಟನಾಳ ಸೌಸುದ್ದಿ ರಸ್ತೆಯ ೩.೫ ಕಿ.ಮೀ ಕ್ರಮಿಸಿದ ನಂತರ ದಕ್ಷಿಣಕ್ಕೆ ಮತ್ತೆ ೧/೨ ಕಿ.ಮೀ ಅಂತರದಲ್ಲಿ 'ಹಿರಿ ಲಕ್ಕವ್ವ'ನ ಗುಡಿಯ ಹತ್ತಿರ ಇದೆ. ಇದೊಂದು ಪ್ರಾಚ್ಯ ನೆಲೆ. ಈಗ ಸಂಪೂರ್ಣ ಕೃಷಿ ಜಮೀನಾಗಿ ಪರಿವರ್ತನೆಯಾಗಿದೆ. ರಾಮಪ್ಪ ಬಸಪ್ಪ ಬಳಿಗಾರ ಇವರ ರ.ನಂ ೨೩೨ರ ಜಮೀನಿನಲ್ಲಿ ಪ್ರಾಚ್ಯ ನೆಲೆಯಿದೆ. ಸುಮಾರು ೨.೫ ಯಿಂದ ೩ ಎಕರೆ ಪ್ರದೇಶದಲ್ಲಿ ಹಾಳು ಮಣ್ಣಿನ ದಿಬ್ಬವಿತ್ತು. ೪೦ ಅಡಿ ಎತ್ತರವಾಗಿತ್ತು ಹಾಳು ಮಣ್ಣು. ಅಲ್ಲಿ ಹಗೆಗಳು ಸಿಗುತ್ತಿದ್ದವು.



ಹಳ್ಳಟ್ಟಿ ಲಕ್ಕವ್ವನ ಗುಡಿಯ ಪರಿಸರದ ಪ್ರಾಚ್ಯ ನೆಲೆ

ಈ ಪ್ರದೇಶಕ್ಕೆ "ಹಳ್ಳಟ್ಟಿ ಲಕ್ಕವ್ವ"ನ ಪ್ರದೇಶವೆಂದು ಕರೆಯುತ್ತಾರೆ. ಸುತ್ತೆಲ್ಲಾ ಗರಸು ಕಲ್ಲಿನಿಂದ ಕೂಡಿದ ಪ್ರದೇಶವಿದ್ದು ದೊಡ್ಡ ಹಳ್ಳದ ಪಕ್ಕದಲ್ಲಿ ನೆಲೆಯಿತ್ತು. ಆ ಹಳ್ಳಕ್ಕೆ "ಸರ್ಕಾರಿ ಒಡ್ಡ" ಎಂದು ಕರೆಯುವರು. ಅದು ಪೂರ್ವ ದಿಕ್ಕಿನಲ್ಲಿದೆ. ಸುಮಾರು ೪೫ ವರ್ಷಗಳ ಹಿಂದೆ ಕಂಟಿ, ಜಾಲಿ, ಬಳ್ಳಿಗಳಿಂದ ಸುತ್ತುವರಿದಿತ್ತು. ನಂತರ ಕೃಷಿ ಜಮೀನಾಗಿ ಪರಿವರ್ತಿಸಲು ಹಾಳು ಮಣ್ಣನ್ನು ಮಾರಾಟ ಮಾಡಿದ್ದಾರೆ. ಅಲ್ಲದೆ ತಮ್ಮದೆ ಹೊಲಕ್ಕೆ ಎತ್ತಿ ಸಾಗುವಳಿ ಮಾಡಿದ್ದಾರೆ. ಅವರ ಹೇಳಿಕೆಯ ಪ್ರಕಾರ ಹಾಳಾದ ಪ್ರದೇಶದಲ್ಲಿ ಲಕ್ಕವ್ವನ ಗುಡಿಯನ್ನು ಕಟ್ಟಿದ್ದಾರೆ. ಊರಿಗೆ ಸಂಕಷ್ಟ ಬಂದಾಗ ಹಿರಿಯ ಲಕ್ಕವ್ವನ ಹತ್ತಿರ ಬೇಡಿಕೊಂಡರೆ ಪರಿಹಾರವಾಗುತ್ತದೆ ಎಂದು ಸ್ಥಳೀಯರು ತಿಳಿಸುತ್ತಾರೆ. ಈ ಪ್ರದೇಶವನ್ನು ಅಗೆಯುವಾಗ ಮಡಿಕೆ ಚೂರುಗಳು, ಕಲ್ಲಿನಲ್ಲಿ ತಯಾರಾದ ಕೊಡಲಿ ಆಕಾರದ ವಸ್ತುಗಳು, ಚೂಪಾದ ಕಲ್ಲಿನ ವಸ್ತುಗಳು ದೊರೆಯುತ್ತಿದ್ದವು. ನಾವು ಅವುಗಳನ್ನು ನೋಡಿದ್ದಾಗಿ ಹಿರಿಯರು ತಿಳಿಸುತ್ತಾರೆ. ಊರು ಹಾಳಾಗಲು ಕಾರಣ ಕೇಳಿದರೆ ಸುಮಾರು ನೂರಾರು ವರ್ಷಗಳ ಹಿಂದೆ ಬೆಂಕಿ ಮಳೆ ಆಯಿತು. ಆವಾಗ ಇಲ್ಲಿಂದ ಜನ ಗುಳೆ ಹೋಯಿತು ಎಂದು ತಿಳಿಸುತ್ತಾರೆ. ನನ್ನ ಕ್ಷೇತ್ರಾನ್ವೇಷಣೆಯಲ್ಲಿ ಕೃಷಿ ಭೂಮಿಯಾಗಿ ಪರಿವರ್ತನೆಯಾಗಿದ್ದ ಈ ಪ್ರದೇಶವು ಸ್ವಲ್ಪ ಎತ್ತರ ಮಟ್ಟದಾಗಿದ್ದು ದೊಡ್ಡ ಹಳ್ಳವು ಅತಿಕ್ರಮಣವಾಗಿ ಅದು ಸಣ್ಣದಾದ ಹಳ್ಳವಾಗಿ ಪರಿವರ್ತನೆ ಹೊಂದಿದೆ. ಹಾಳು ಮಣ್ಣಿನ ಸ್ವಲ್ಪ ಅವಶೇಷ ಮಾತ್ರ ದೊರೆಯುತ್ತದೆ. ಕಬ್ಬು ಮತ್ತು ಬಾಳೆಗಿಡಗಳನ್ನು ನಾಟಿ ಮಾಡಿದ್ದರಿಂದ ಹೆಚ್ಚಿನ ಮಾಹಿತಿ ದೊರೆತಿಲ್ಲ.



೩.೬.೩ ಹುಬ್ಬರವಾಡಿ :



ಬೃಹತ್ ಶಿಲಾಗೋರಿಗಳು

ರಾಯಬಾಗ ಪಟ್ಟಣದಿಂದ ದಕ್ಷಿಣ ದಿಕ್ಕಿನಲ್ಲಿ ಸುಮಾರು ೪ ಕಿ.ಮೀ ಅಂತರದಲ್ಲಿ ಹುಬ್ಬರವಾಡಿ ಗ್ರಾಮವಿದೆ. ಇದಕ್ಕೆ ಇನ್ನೊಂದು ಹೆಸರು ಹಣಬರವಾಡಿ ಎಂದು ಕರೆಯುತ್ತಾರೆ. ಹಣಬರ ಜನಾಂಗದವರು ಈ ಪ್ರದೇಶದಲ್ಲಿ ಬಂದು ವಾಸಿಸಲು ಪ್ರಾರಂಭಿಸಿದ ನಂತರ ಹಣಬರವಾಡಿ ಎಂದು ಕರೆಯುತ್ತಿರಬಹುದು. ಗ್ರಾಮದ ಸಮೀಪ ಉತ್ತರಕ್ಕೆ ½ ಕಿ.ಮೀ ಅಂತರದಲ್ಲಿ ಶಿಲಾಗೋರಿಗಳು ಹಾಗೂ ಸಮೂಹ ಗೋರಿಗಳ ಅವಶೇಷಗಳಿವೆ. ಇದು ಬೃಹತ ಶಿಲಾಯುಗದ ಅವಧಿಯ ನೆಲೆಯಾಗಿರಬಹುದು. ಸುತ್ತಲೂ ಇಳಿಜಾರು ಪ್ರದೇಶವಿದ್ದು ಸಮೀಪದಲ್ಲಿ ಹಳ್ಳದ ಹರಿವಿದೆ. ಅತಿ ಎತ್ತರದ ಸ್ಥಳದ ಮೇಲೆ ಗೋರಿಗಳು ಕಂಡು ಬರುತ್ತವೆ. ಈ ಪ್ರದೇಶದ ತುಂಬೆಲ್ಲಾ ಹಿರಿಯರ ಗೋರಿಗಳು ಇವೆ. ಇದನ್ನು ಸ್ಥಳೀಯರು ಹಿರಿಯರ ಗೋರಿಗಳೆಂದು ಕರೆಯುತ್ತಾರೆ. ಇಲ್ಲಿಂದ ದಕ್ಷಿಣದ ದಿಕ್ಕಿನಲ್ಲಿ ಬೂದಿಹಾಳ ಗ್ರಾಮವಿದೆ.



ಶಿಲಾ ಗೋರಿ – ಹುಬ್ಬರವಾಡಿ





೩.೬.೪ ಮಾಡಲಗಿ :



ಲಕ್ಷ್ಮೀ ದೇವಾಲಯದ ಸುತ್ತಲಿನ ಪ್ರಾಚ್ಯ ನೆಲೆ

ರಾಯಬಾಗದಿಂದ ೧೪ ಕಿ.ಮೀ ಅಂತರದಲ್ಲಿ ಬೂದಿಹಾಳದ ಕ್ರಾಸ್‌ದಿಂದ ಒಂದು ಕಿ.ಮೀ ದಕ್ಷಿಣದಲ್ಲಿರುವ ರಾಯಬಾಗ-ಕಬ್ಬೂರ ರಸ್ತೆಯ ಪಶ್ಚಿಮ ಬದಿ ರಸ್ತೆಗೆ ಅಂಟಿಕೊಂಡಂತೆ ೬ ಎಕರೆ ಕ್ಷೇತ್ರ ವಿಸ್ತಾರದಲ್ಲಿ ಪ್ರಾಚೀನ ನೆಲೆ ಇದ್ದ ಕುರುಹುಗಳಿವೆ. ಸಧ್ಯ ಅಲ್ಲಿಯ ಹಾಳು ಮಣ್ಣನ್ನು ಬೇರೆಡೆಗೆ ವಿವಿಧ ಉದ್ಧೇಶಗಳಿಗಾಗಿ ಸಾಗಿಸಲಾಗಿದೆ. ಇತ್ತಿಚಿಗೆ ಪುನರ್ ನಿರ್ಮಾಣಗೊಂಡ ಲಕ್ಷ್ಮೀ (ಲಗಮವ್ವನ) ದೇವಸ್ಥಾನವಿದೆ. ಪಕ್ಕದಲ್ಲಿ ಜನತಾ ಮನೆಗಳನ್ನು ನಿರ್ಮಿಸಲಾಗಿದೆ ಮತ್ತು ವಾಯುವ್ಯ ದಿಕ್ಕಿನಲ್ಲಿ ೧ ಕಿ.ಮೀ ಅಂತರದಲ್ಲಿ ಒಂದು ಪುಟ್ಟ ಗುಡ್ಡವಿದೆ. ಅದನ್ನು ಕಾರಿಕುಪ್ಪ ಗುಡ್ಡವೆಂದು ಜನರು ಕರೆಯುತ್ತಾರೆ. ಇದು ಐತಿಹಾಸಿಕ ಪ್ರತೀತಿ ಹೊಂದಿದೆ. ಸ್ಥಳೀಯರು ನಮ್ಮ ಪೂರ್ವಜರು ನೆಲೆನಿಂತ ಪ್ರದೇಶವಾಗಿದೆ ಎಂದು ಹೇಳುತ್ತಾರೆ.

೩.೬.೫ ದೇವನಕಟ್ಟೆ : ರಾಮನಕಟ್ಟೆ :

ದೇವನಕಟ್ಟೆ ಬೂದಿಹಾಳ ಪ್ರಾಚ್ಯ ನೆಲೆಯಿಂದ ೩ ಕಿ.ಮೀ ಅಂತರದಲ್ಲಿ ಪೂರ್ವ ದಿಕ್ಕಿನಲ್ಲಿ ಬರುತ್ತದೆ. ಹಳೆ ಊರು ಮತ್ತು ಹೊಸ ಊರು ಎಂದು ಕರೆಯುತ್ತಾರೆ. ಹಳೆ ಊರು ಹಾಳು ಮಣ್ಣನ್ನು ಹೊಂದಿತ್ತು. ಎತ್ತರದ ಪ್ರದೇಶದ ಮೇಲಿದೆ. ಈಗಲೂ ಕಟ್ಟಡ ಉರುಳಿ ಬಿದ್ದ ಮನೆಗಳಿವೆ. ಈ ಪ್ರದೇಶಲ್ಲಿ ಸುಮಾರು ೩ ಎಕರೆ ಪ್ರದೇಶದಷ್ಟು ವಿಸ್ತೀರ್ಣದಲ್ಲಿ ಹಾಳು ಮಣ್ಣು ಇತ್ತು. ಅದನ್ನೆಲ್ಲಾ ಕೃಷಿಗಾಗಿ ಮತ್ತು ಮನೆ ಕಟ್ಟಡಗಳಿಗಾಗಿ ತೆಗೆದುಕೊಂಡು ಹೋಗಿದ್ದಾರೆ. ಅಲ್ಪಸ್ವಲ್ಪ ಹಾಳು ಮಣ್ಣು ಇದ್ದು ಮೊದಲು ಜನವಸತಿ ನೆಲೆ ನಿಂತ ಪ್ರದೇಶವಾಗಿದೆ. ಇದರ ಕೆಳ ಪ್ರದೇಶದಲ್ಲಿ ಮಾವಿನಹೊಂಡ



ಎಂಬ ಸರೋವರ ಇದ್ದಿತ್ತು. ಆದ್ದರಿಂದ ಈ ಪ್ರದೇಶ ಪ್ರಾಚ್ಯ ನೆಲೆಯಾಗಿರಬಹುದು. ಇಲ್ಲಿಂದ ೨ ಕಿ.ಮೀ ದೂರದಲ್ಲಿ ರಾಮನಕಟ್ಟೆ ಇದೆ. ಅದರ ಪೂರ್ವದಲ್ಲಿ ಗುಡ್ಡದ ಅಡಿಯಲ್ಲಿ ಈ ಪ್ರದೇಶವಿದೆ. ಅಲ್ಲಿ ಒಂದು ಹೊಂಡವಿದ್ದು ಆ ಹೊಂಡ ಯಾವಾಗಲೂ ನೀರಿನಿಂದ ತುಂಬಿರುತ್ತದೆ. ಶ್ರೀರಾಮನು ವನವಾಸದಲ್ಲಿದ್ದಾಗ ಈ ಕಡೆ ಬಂದಿದ್ದನೆಂದು ಪ್ರತೀತಿ. ರಾಮ, ಲಕ್ಷ್ಮಣ, ಸೀತೆ ಒಂದು ದಿನ



ಬಾಗಿ ಗುಡ್ಡದಲ್ಲಿಯ ಪಡಿಯಪ್ಪನ ಬೆಟ್ಟ ಮತ್ತು ಗುಹೆಯ ಮಾನವನ ಪ್ರಾಚ್ಯ ನೆಲೆ

ನಂದಿಕುರಳಿಯಲ್ಲಿ ವಾಸ ಮಾಡಿದ್ದರಂತೆ. ಅಲ್ಲಿಂದ ಇಲ್ಲಿಯ ಬೆಟ್ಟ ಗುಡ್ಡಗಳಲ್ಲಿ ಹಾಯ್ದು ಹೋಗುವಾಗ ಸೀತೆಗೆ ಬಾಯಾರಿಕೆಯಾಯಿತು. ಆಗ ರಾಮನು ನೀರಿಗಾಗಿ ಸುತ್ತೆಲ್ಲಾ ಹುಡುಕಿದನು. ನೀರು ಸಿಗಲಿಲ್ಲ. ಆ ಸಂದರ್ಭದಲ್ಲಿ ಶ್ರೀರಾಮನು ತನ್ನ ಬಿಲ್ಲಿನಿಂದ ಬಾಣವೊಂದನ್ನು ನೆಲಕ್ಕೆ ಹೊಡೆದು ನೆಲದಿಂದ ನೀರು ತೆಗೆದು ಸೀತೆಗೆ ಕೊಟ್ಟನೆಂದು ಕೆಲವರು ಹೇಳುವರು. ಮತ್ತೆ ಕೆಲವರು ಸೀತೆಯು ಅಂಗಾಚರಣೆ ಮಾಡುವಾಗ ಬಾಯಾರಿಕೆಯಾಯಿತು. ಆಗ ಅವಳು ಕೃಷ್ಣಾ ನದಿಯ ನೀರನ್ನು ತಂದು ಕೊಡಲು ಕೇಳಿಕೊಂಡಳಂತೆ. ಆಗ ರಾಮನು ಬಾಣ ಹೊಡೆದು ಕೃಷ್ಣೆಯನ್ನು ಇಲ್ಲಿಗೆ ಕಾರಂಜಿ ರೂಪದಲ್ಲಿ ಹರಿಸಿದನೆಂದು ಪ್ರತೀತಿ. ಈ ಹೊಂಡದ ಆಳ ಎಷ್ಟೆಂದು ತಿಳಿಯುವುದಿಲ್ಲ. ಈ ನೆಲೆಯಿಂದ ೧ ಕಿ.ಮೀ ಎತ್ತರದಲ್ಲಿ ರೇವಣಸಿದ್ಧೇಶ್ವರ ದೇವಸ್ಥಾನವಿದೆ. ಇಲ್ಲಿಂದ ದಕ್ಷಿಣಕ್ಕೆ ೩ ಕಿ.ಮೀ ಅಂತರದಲ್ಲಿ ಬೆಂಡವಾಡ ಎಂಬ ಗ್ರಾಮವಿದೆ. ದೇವನಕಟ್ಟೆ ಮತ್ತು ರಾಮನಕಟ್ಟೆ ನಡುವೆ ಪ್ರಾಚೀನ ಕಾಲದಲ್ಲಿ ವಿಸ್ತಾರವಾದ ಒಂದು ಹೊಂಡ (ಸರೋವರ) ಇತ್ತು. ಅದನ್ನೆ ಮಾವಿನಹೊಂಡ ಎಂದು ಕರೆಯುವರು. ೫೦ ಎಕರೆ ವಿಸ್ತೀರ್ಣ ಪ್ರದೇಶದ ಸುತ್ತಲೂ ಗುಡ್ಡವಿದ್ದು ನಡುವೆ ತಗ್ಗು ಪ್ರದೇಶವಿದ್ದು ನಾಲ್ಕು ಊರುಗಳ ಬೆಟ್ಟದಿಂದ ನೀರು ತಗ್ಗು ಪ್ರದೇಶ ಸೇರುತ್ತದೆ. ಹಳ್ಳವೊಂದು ಉಗಮ ಹೊಂದಿ ಪಶ್ಚಿಮಕ್ಕೆ ಹರಿಯುತ್ತದೆ.



೩.೬.೬ ಖಣದಾಳ :

ರಾಯಬಾಗ ಪಟ್ಟಣದಿಂದ ಸುಮಾರು ೧೯ ಕಿ.ಮೀ. ಅಂತರದಲ್ಲಿ ಆಗ್ನೇಯ ದಿಕ್ಕಿನಲ್ಲಿದೆ. ಇದು ಮುಗಳಖೋಡ, ಕ್ರಾಸ್, ಸೌಸುದ್ದಿ ರಸ್ತೆಯ ಮೇಲಿದೆ. ಖಣದಾಳ ಗ್ರಾಮದಿಂದ ಪೂರ್ವ ದಿಕ್ಕಿನಲ್ಲಿ ೧/೨ ಕಿ.ಮೀ ದೂರದಲ್ಲಿ ಹಾಳ ಖಣದಾಳ ಊರು ಸಿಗುತ್ತದೆ. ಖಣದಾಳ ಒಟ್ಟು ಮೂರು



ಖಣದಾಳದ ಪ್ರಾಚ್ಯ ನೆಲೆ

ಬಾರಿ ಸ್ಥಳ ಬದಲಾವಣೆಯನ್ನು ಮಾಡಿಕೊಂಡಿದೆ ಎಂದು ಹುಲಕಾಂತೇಶ್ವರ ಮಠದವರು ಪಾರುಪತ್ಯ ಮುಖ್ಯಸ್ಥರಾದ ಈರಯ್ಯ ಶಿವಯ್ಯ ಜಂಗಮರವರು ತಿಳಿಸುತ್ತಾರೆ. ಈಗಿನ ಖಣದಾಳ ಸುಮಾರು ೩೦೦ ವರ್ಷಗಳಿಂದ ನೆಲೆಯೂರಿದ ಪ್ರದೇಶವಾಗಿದ್ದು ಸುಮಾರು ೩೫೦೦ ಜನಸಂಖ್ಯೆ ಹೊಂದಿದೆ. ಈ ಗ್ರಾಮಕ್ಕಿಂತಲೂ ಪೂರ್ವದಲ್ಲಿ ಸುಮಾರು ೧೧ನೇ ಶತಮಾನದಲ್ಲಿ ಬಸವಣ್ಣನವರ ಕಾಲಾವಧಿಯಲ್ಲಿ ಮಠದ ದಕ್ಷಿಣದ ಬಾಜು ಖಣದಾಳ ಇತ್ತು ಆ ಸಂದರ್ಭದಲ್ಲಿ ಹುಲಕಾಂತೇಶ್ವರ ಮಠವು ವೀರಶೈವ ಧಾರ್ಮಿಕ ಕಾರ್ಯ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿತ್ತು. ವೀರಶೈವ ಪಂಥವು ಶಿವನ ಆರಾಧನಾ ಕೇಂದ್ರವಾಗಿತ್ತು. ಅದಕ್ಕಿಂತಲೂ ಪೂರ್ವದಲ್ಲಿ ಮೊದಲನೆಯ ಖಣದಾಳ ಗ್ರಾಮವು ಈಗಿನ ಹಾಳ ಖಣದಾಳ ಆಗಿತ್ತು. ನಿಂಗನಗೌಡ ಮುರಿಗೆಪ್ಪಾ ಪಾಟೀಲ ಮತ್ತು ಅಲಗೌಡ ಗೌಡಪ್ಪಾ ಪಾಟೀಲ ಇವರ ತೋಟದಲ್ಲಿ ಪ್ರಾಚ್ಯ ನೆಲೆಯಿತ್ತು ಎಂದು ಜಂಗಮರು ತಿಳಿಸುತ್ತಾರೆ. ಈ ಪ್ರದೇಶವು ಅತಿ ಎತ್ತರದ ಪ್ರದೇಶವಾಗಿತ್ತು. ದಕ್ಷಿಣ ಬಾಜು ಬೆಟ್ಟ ಕೊರಕಲಿನಿಂದ ಕೂಡಿದ್ದು ನೆಲೆಯ ಪಶ್ಚಿಮ ಬಾಜು ನೈಸರ್ಗಿಕ ಕೆರೆಯಿಂದ ಆವೃತವಾಗಿದ್ದು ಉತ್ತರಕ್ಕೆ ಸಮತಟ್ಟಾದ ಪ್ರದೇಶವನ್ನು ಹೊಂದಿತ್ತು. ಹಾಳು ಮಣ್ಣಿನ ದಿಬ್ಬದ ಮೇಲೆ ಈ ನೆಲೆ ಇತ್ತು. ದಕ್ಷಿಣದ ಬೆಟ್ಟದ ೩ ಕಿ.ಮೀ ಹಿಂದೆ ಎತ್ತರದ ಪ್ರದೇಶದಿಂದ ಮಳೆ ನೀರು ಸಂಗ್ರಹವಾಗಿ ಕೆರೆ ತುಂಬಿ ಹಳ್ಳವಾಗಿ ಉತ್ತರ ದಿಕ್ಕಿನ ಕಡೆಗೆ ಹರಿದು ಹೋಗುವ



ಹಳ್ಳವಿದೆ. ಈ ಹಳ್ಳ ಈಗ ಇಲ್ಲಿ ಕೃಷಿ ಜಮೀನು ಆಗಿ ಪರಿವರ್ತನೆಯಾಗಿದೆ. ಈ ಪ್ರದೇಶದಲ್ಲಿ ಹಾಳು ಮಣ್ಣನ್ನು ತೆಗೆದುಕೊಂಡು ಹೋಗಿದ್ದಾರೆ. ಆ ಸಂದರ್ಭದಲ್ಲಿ ಅನೇಕ ರೀತಿಯ ಕಲ್ಲಿನ ಆಯುಧಗಳು ಪಾಟೀಲರವರಿಗೆ ದೊರೆತಿವೆ. ಹಾಳು ಮಣ್ಣಿನಲ್ಲಿ ದೊಡ್ಡ ಮಡಿಕೆಗಳು, ಒಡೆದ ಚೂರುಗಳು ಇದ್ದವು ಎಂದು ಹೇಳುತ್ತಾರೆ. ಈಗ ಈ ಪ್ರದೇಶಲ್ಲಿ ಸ್ವಲ್ಪ ಹಾಳು ಮಣ್ಣಿನ ಅವಶೇಷ ಉಳಿದಿದ್ದು ಹಾಳು ಮಣ್ಣಿನಲ್ಲಿ ದೊರೆತ ಕೆಲವು ಕಲ್ಲುಗಳನ್ನು ಬದುವಿಗೆ ತೆಗೆದು ಹಾಕಿದ್ದಾರೆ. ಈ ನೆಲೆಯು ಪ್ರಾಚ್ಯ ನೆಲೆಯಾಗಿದೆಯೆಂಬುದಕ್ಕೆ ಸಾಕ್ಷಿಗಳು.

೩.೬.೭ ನಿಡಗುಂದಿ :

ರಾಯಬಾಗದಿಂದ ಪೂರ್ವ ದಿಕ್ಕಿನಲ್ಲಿ ೮ ಕಿ.ಮೀ ದೂರದಲ್ಲಿ ರಾಯಬಾಗ ಹಾರೂಗೇರಿ ರಸ್ತೆಯ ಮೇಲಿರುವ ನಿಡಗುಂದಿ ಗ್ರಾಮದಿಂದ 1½ ದಕ್ಷಿಣದಲ್ಲಿ ಒಂದು ಎತ್ತರವಾದ ಪ್ರದೇಶವಿದ್ದು ಅದನ್ನು ಹಾಳೂರು ಎಂದು ಜನ ಕರೆಯುತ್ತಾರೆ. ಅದುವೇ ಹಳೆಯ ನಿಡಗುಂದಿ ಎಂದು ಹೇಳುತ್ತಾರೆ.



ಹಾಳು ಮಣ್ಣಿನ ಪ್ರಾಚೀನ ಹುಡೆ ಖೆಮಲಾಪೂರೆ ಅವರ ತೋಟದಲ್ಲಿ

ವಿಸ್ತಾರವಾದ ಬೆಟ್ಟ. ಅದರ ಕೊರಕಲಿನಲ್ಲಿ ಫಲವತ್ತಾದ ಮಣ್ಣು. ಅಲ್ಲಿಯೇ ಒಂದು ಹಳ್ಳ ದಕ್ಷಿಣೋತ್ತರವಾಗಿ ಹರಿಯುತ್ತದೆ. ಸುಮಾರು ೨೦ ರಿಂದ ೨೫ ಎಕರೆ ವಿಸ್ತೀರ್ಣವಾದ ಪ್ರದೇಶದಲ್ಲಿ ಹಾಳು ಮಣ್ಣು ಕಂಡು ಬರುತ್ತದೆ. ಅದೊಂದು ಪ್ರಾಚೀನ ಮಾನವನ ನೆಲೆಯಾಗಿರಬಹುದೆಂದು ಊಹೆಗೆ ಪುಷ್ಠಿ ನೀಡುತ್ತದೆ. ಅಲ್ಲಿ ಕೆಲವು ತೋಟದ ಮನೆಗಳಿದ್ದು ಆ ಪ್ರದೇಶವೆಲ್ಲಾ ಕೃಷಿ ಭೂಮಿಯಾಗಿ ಪರಿವರ್ತನೆಗೊಂಡಿದೆ. ಆದರೆ ಕೆಲವು ಪ್ರಾಚೀನ ಕಟ್ಟಡದ ಅವಶೇಷಗಳು ದೇವಾಲಯಗಳು ಈಗಲೂ ನೋಡಲು ಸಿಗುತ್ತವೆ. ಈಗ ಈ ಪ್ರದೇಶ ಖೆಮಲಾಪೂರೆ ತೋಟವೆಂದೆ ಗುರುತಿಸಲ್ಪಡುತ್ತದೆ.



ಒಂದು ಶಿವರಾಯ, ಭೂತಾಳ ಸಿದ್ದೇಶ್ವರ, ಇತ್ತೀಚಿನ ಮಹಾವೀರ ತೀರ್ಥಂಕರ ಜಿನಾಲಯವಿದೆ. ಮಹಾವೀರ ಧನಪಾಲ ಖೆಮಲಾಪೂರೆ ಇವರ ತೋಟದಲ್ಲಿ ಮೂರು ಮಾಸ್ತಿಗಲ್ಲುಗಳು ನೆಲೆಗೊಂಡಿವೆ. ಅವುಗಳನ್ನು ಪೂರ್ವಾಭಿಮುಖವಾಗಿ ಸಾಲಾಗಿ ನಿಲ್ಲಿಸಲಾಗಿದೆ. ಇನ್ನೊಂದು ಮಾಸ್ತಿಕಲ್ಲು ದೊರೆತಿದ್ದು ಅದು ನಿಡಗುಂದಿ, ಬಿರನಾಳ ರಸ್ತೆಯ ಮೇಲೆ ಅಶೋಕ ದೇವಪ್ಪಾ ಖೇಮಲಾಪೂರ ಅವರ ಮನೆಯ ಸಮೀಪ ರಸ್ತೆಯ ಬದಿಯಲ್ಲಿ ದೊರೆಯುತ್ತದೆ. ಪೂರ್ವದಲ್ಲಿ ಕ್ವಾಟೆವ್ವನ ಗುಡಿ ಇದೆ. ಅದರ ಎತ್ತರದಲ್ಲಿ ಎಲ್ಲವ್ವನ ಗುಡಿ ಇದೆ. ಕ್ವಾಟೆವ್ವನ ಗುಡಿ ಅನೀಲ ಖೇಮಲಾಪೂರೆ ಅವರ ತೋಟದಲ್ಲಿ ಇದೆ. ಅಲ್ಲಿ ಹಳೆಯ ಕಟ್ಟಡದ ಅವಶೇಷಗಳು ಇದ್ದು ನಾಗಶಿಲ್ಪ ದೊಡ್ಡ ಕಲ್ಲಿನ ಬೊದುಗೆಗಳು ಬಿದ್ದುಕೊಂಡಿವೆ. ೭೮ ಅಡಿಗಳಷ್ಟು ಆಳವಾದ ಹಾಳು ಮಣ್ಣಿನ ದಿಬ್ಬವಿದೆ. ಅಲ್ಲಿ ಕಟ್ಟಡದ ಅಡಿಪಾಯದ ಮಾದರಿಯ ಅವಶೇಷಗಳಿವೆ. ಒಂದು ಕಾಲದಲ್ಲಿ ಕೋಟೆಯ ಗೋಡೆಗೆ ಅಂಟಿಕೊಂಡ ಹುಡೆ (ಕಾವಲು ಗೋಪುರ) ಇದ್ದಿರಬಹುದು. ಒಂದು ಕಾಲದಲ್ಲಿ ಸುಮಾರು ೫೦-೬೦ ಅಡಿ ಎತ್ತರದ ಹಾಳು ಮಣ್ಣಿನ ದಿಬ್ಬವಿತ್ತು. ಅದು ಕೃಷಿ ಭೂಮಿಗಾಗಿ ಹಾಗೂ ಇತರ ಚಟುವಟಿಕೆಗಳಿಗಾಗಿ ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಂಡಿದೆ. ಈಗ ಸಂಪೂರ್ಣವಾಗಿ ಕೃಷಿ ಭೂಮಿಯಾಗಿ ಮಾರ್ಪಟ್ಟಿದೆ.

೩.೬.೮ ನಂದಿಕುರಳಿ :

ರಾಯಬಾಗದಿಂದ ಪಶ್ಚಿಮಕ್ಕೆ ೧೦ ಕಿ.ಮೀ ದೂರದದಲ್ಲಿರುವ ನಂದಿಕುರಳಿ ಉತ್ತರ ಅಕ್ಷಾಂಶ ೧೬°-೩೦° ಪೂರ್ವ ರೇಖಾಂಶ ೭೪°-೪೨° ರ ಮಧ್ಯದಲ್ಲಿ ಇದೆ. ತಾಲೂಕಿನ ಐತಿಹಾಸಿಕ ಮಹತ್ವ ಪಡೆದ ಹಳ್ಳಿಗಳಲ್ಲಿ ಇದೂ ಒಂದು. ಪುರಾತನ ಅಂಶಗಳನ್ನು ಸಾರುವ ಹಲವಾರು ಅವಶೇಷಗಳು ಸಿಗುತ್ತವೆ. ಗ್ರಾಮದ ಸುತ್ತಲೂ ಎತ್ತರವಾದ ಬೆಟ್ಟಗಳಿವೆ. ಇಲ್ಲಿಯ ಮಣ್ಣಿನ ಬಣ್ಣ ಕೆಂಪು. ವ್ಯವಸಾಯಕ್ಕೆ ತುಂಬ ಅನುಕೂಲವಾದ ಮಣ್ಣು. ಪ್ರಾಚೀನ ಕಾಲದಲ್ಲಿ ಈ ಗ್ರಾಮಕ್ಕೆ ನಂದಿ ಗ್ರಾಮವೆಂದು ಹೆಸರು ಬಂದಿತ್ತು ಎಂದು ಸ್ಥಳೀಯರು ಹೇಳುತ್ತಾರೆ. ತ್ರೇತಾಯುಗದಲ್ಲಿ ದಕ್ಷ ಬ್ರಹ್ಮನು ಯಡೂರು ಗ್ರಾಮದ ಕೃಷ್ಣಾನದಿಯ ದಂಡೆಯ ಮೇಲೆ ಯಜ್ಞವನ್ನು ಹಮ್ಮಿಕೊಂಡಿದ್ದನಂತೆ. ಈ ಗ್ರಾಮದ ಮುಖಾಂತರ ಶಿವ ನಂದಿಯನ್ನೇರಿ ಯಡೂರು ಗ್ರಾಮಕ್ಕೆ ಹೋದ ಕಾರಣ ಈ ಗ್ರಾಮಕ್ಕೆ ನಂದಿಕುರಳಿ ಎಂಬ ಹೆಸರು ಬಂದಿತು ಎಂಬುದು ಸ್ಥಳೀಯರ ಹೇಳಿಕೆ.

ಮತ್ತೊಂದು ದಂತಕಥೆಯ ಪ್ರಕಾರ ಪುರಾಣಕಾಲದಲ್ಲಿ ಶ್ರೀ ಪಂಚಲಿಂಗೇಶ್ವರ ಪುಣ್ಯಕ್ಷೇತ್ರ ಇರುವ ಈ ಗ್ರಾಮವು ನಂದಿಗ್ರಾಮವೆಂದೇ ಪ್ರಸಿದ್ಧವಾಗಿತ್ತು. ಬಹುಶಃ ಇಲ್ಲಿರುವ ನಂದಿಯ ದೇವಾಲಯದಿಂದಾಗಿ ನಂದಿಕುರಳಿ ಎಂದು ಹೆಸರು ಬಂದಿರಬಹುದು. ಜನಪದ ಹಾಲುಮತದ ಮಹಾಕಾವ್ಯದಲ್ಲಿ ನಂದಿಕುರಳಿ ಗ್ರಾಮದ ಪ್ರಸ್ತಾಪವಿದೆ. ಅಲ್ಲಿ ಈ ಗ್ರಾಮವನ್ನು ನಂದದ ಕೊರಳಿಗೆ ಎಂದು ಕರೆಯಲಾಗಿದೆ. ಪ್ರಾಯಶಃ ಒಂದು ಕಾಲದಲ್ಲಿ ಇಲ್ಲಿ ಕಾಡು ಇರಬಹುದು. ಆದ್ದರಿಂದ

ಇದನ್ನು ನಂದನ ಎಂಬ ವಿಶೇಷಣದಿಂದ ಗುರುತಿಸಲಾಗುತ್ತದೆ. ಇಲ್ಲಿಯ ಪಂಚಲಿಂಗೇಶ್ವರ ದೇವಾಲಯ ಪ್ರಸಿದ್ಧವಾದುದು. ಅದರಂತೆ ಇಲ್ಲೊಂದು ಗುಹಾದೇವಾಲಯ ಕೂಡ ನಮಗೆ ನೋಡಲು ಸಿಗುತ್ತದೆ. ಪಾರ್ವತಿ ಮತ್ತು ಶಿವ ನಂದಿಕುರಳಿಯಲ್ಲಿ ಒಂದು ದಿನ ವಾಸ್ತವ್ಯ ಮಾಡಿದ್ದರೆಂದು ಅಲ್ಲಿಯ ಜನ ಕಥೆ ಹೇಳುತ್ತಾರೆ. ಗ್ರಾಮದ ಪಕ್ಕದಲ್ಲಿ ಸಣ್ಣ ಹಳ್ಳ ಹರಿಯುತ್ತಿದ್ದು ಅದನ್ನು ಪ್ರಾಚೀನ ಕರಕಾ ನದಿಯೆಂದು ಗುರುತಿಸಲಾಗುತ್ತದೆ. ಈ ನದಿಯು ಮಾವಿನಹೊಂಡ, ದೇವನಕಟ್ಟೆ, ಬೂದಿಹಾಳ ಮೂಲಕ ನಂದಿಕುರಳಿ ಪ್ರವೇಶಿಸಿ ಕೃಷ್ಣಾ ನದಿ ಸೇರುತ್ತದೆ. ಈ ಎಲ್ಲ ಅಂಶಗಳನ್ನು ನಾವು ಅವಲೋಕಿಸಿದರೆ ನಂದಿಕುರಳಿಯಲ್ಲಿ ಪ್ರಾಚ್ಯ ನೆಲೆ ಇತ್ತೆಂಬುದರಲ್ಲಿ ಸಂದೇಹವಿಲ್ಲ.



ಪ್ರಾಚೀನ ಕಾಲದಲ್ಲಿ ಕರ್ಕಾನದಿಯೆಂದು ಗುರ್ತಿಸುವ ನಂದಿಕುರಳಿಯ ಪ್ರಾಚ್ಯ ನೆಲೆ

ನಂದಿಕುರಳಿ ಗ್ರಾಮದಲ್ಲಿ ಪಂಚಲಿಂಗೇಶ್ವರ ದೇವಸ್ಥಾನದ ಪಕ್ಕದಲ್ಲಿಯೇ ಸುಮಾರು ೧೦ ಎಕರೆಯಷ್ಟು ಹಾಳು ಮಣ್ಣಿನ ಪ್ರದೇಶವಿದೆ. ಈಗ ಸ್ವಲ್ಪ ಪ್ರಮಾಣದಲ್ಲಿ ಉಳಿದುಕೊಂಡಿದ್ದು ಮತ್ತು ಈಗಿರುವ ಗ್ರಾಮದ ಮಧ್ಯಭಾಗದಲ್ಲಿ ಹಾಳು ಮಣ್ಣಿನ ಪ್ರದೇಶದಿಂದ ವಿಸ್ತರಿಸಿಕೊಂಡಿದೆ. ಇಲ್ಲಿಯ ಪ್ರಾಚೀನ ಮಾನವನ ನೆಲೆಯಾಗಿತ್ತು ಎಂಬುದರಲ್ಲಿ ಅನುಮಾನವಿಲ್ಲ.

"ಗ್ರಾಮದ ದಕ್ಷಿಣ ಭಾಗದಲ್ಲಿರುವ ಬಸವೇಶ್ವರ ದೇವಾಲಯದ ಆವರಣದಲ್ಲಿ ಎರಡು ವೀರಗಲ್ಲು ಇವೆ. ಕರಿಕಲ್ಲಿನಲ್ಲಿ ಕೆತ್ತಲ್ಪಟ್ಟ ಒಂದು ವೀರಗಲ್ಲವು ೨ ಸ್ತರಗಳನ್ನು ಒಳಗೊಂಡಿದೆ. ಮೇಲಿನ ಸ್ತರವು ಒಡೆದು ಹೋಗಿದೆ. ಇದು ಸುಮಾರು ಒಂದೂವರೆ ಅಡಿ ಎತ್ತರವಾಗಿದೆ. ೧ ಅಡಿ ಅಗಲವಾಗಿದೆ. ಕೆಳಗಿನ ಸ್ತರವು ಹೋರಾಟದ ದೃಶ್ಯವನ್ನು ಒಳಗೊಂಡಿದೆ. ಎರಡನೆಯ ಸ್ತರದಲ್ಲಿ ವೀರನನ್ನು ದೇವಗಣಿಕೆಯರು ಹೊತ್ತುಕೊಂಡು ಹೊರಟಿದ್ದಾರೆ. ಕೇವಲ ಈ ಎರಡು ಸ್ತರಗಳನ್ನು ಹೊಂದಿದ ಈ ವೀರಗಲ್ಲು ಪಶ್ಚಿಮಾಭಿಮುಖವಾಗಿ ನಿಲ್ಲಿಸಲಾಗಿದೆ.



ಬಸವೇಶ್ವರ ದೇವಾಲಯದ ಆವರಣದಲ್ಲಿ ಪೂರ್ವಾಭಿಮುಖವಾಗಿರುವ ಮತ್ತೊಂದು ಈ ವೀರಗಲ್ಲು ಕರಿಕಲ್ಲಿನಿಂದ ಕೆತ್ತಲ್ಪಟ್ಟಿದೆ. ಈಗ ೨ ಸ್ತರಗಳನ್ನು ಮಾತ್ರ ಒಳಗೊಂಡಿದೆ. ಕೆಳಗಿನ ಸ್ತರವು ಒಡೆದು ಹೋಗಿದೆ. ಇದು ಸುಮಾರು ೨ ಅಡಿ ಎತ್ತರವಾಗಿದೆ. ಅರ್ಧ ಅಡಿ ಅಗಲವಾಗಿದೆ. ಕೆಳಗಿನ ದೇವಗಣಿಕೆಯರು ವೀರನನ್ನು ಹೊತ್ತುಕೊಂಡು ಹೊರಟಿದ್ದಾರೆ. ಮೇಲಿನ ಸ್ತರದಲ್ಲಿ ವೀರನು ಶಿವಲಿಂಗದೆದುರು ಕೈ ಮುಗಿದು ಕುಳಿತುಕೊಂಡಿದ್ದಾನೆ.

ಕಪ್ಪು ಶಿಲೆಯಲ್ಲಿ ಕೆತ್ತಲ್ಪಟ್ಟ ಈ ಶಿಲೆಯು ಬಸವೇಶ್ವರ ದೇವಾಲಯದ ಮುಂದಿನ ದೀಪಸ್ತಂಭದ ಹತ್ತಿರ ಪಶ್ಚಿಮಾಭಿಮುಖವಾಗಿರುತ್ತದೆ. ಈಗ ಈ ಶಿಲ್ಪದ ಕೆಳಗಿನ ಭಾಗವು ಒಡೆದು ಹೋಗಿದೆ ಮತ್ತು ಇತರ ಕಡೆಯಲ್ಲಿ ಅಲ್ಪ ಸ್ವಲ್ಪ ಭಗ್ನಗೊಂಡಿದೆ. ಈ ಉಬ್ಬು ಶಿಲ್ಪವು ೪೬ ಸೆಂ.ಮೀ ಎತ್ತರ, ೪೧ ಸೆಂ.ಮೀ ಅಗಲವಾಗಿದೆ. ಕಿರೀಟ, ಕಂಠಾಭರಣ, ಕೈಗಡಗಳು, ಕರ್ಣಾಭರಣಗಳನ್ನು ಹೊಂದಿದ್ದು, ಅಷ್ಟಭುಜ ಹೊಂದಿದೆ. ಈ ಶಿಲ್ಪವು ಸುಮಾರು ೭-೮ ನೆಯ ಶತಮಾನಕ್ಕೆ ಸೇರಿರಬಹುದು. ನೋಡಲು ಅತ್ಯಂತ ಸುಂದರವಾದ ಈ ಶಿಲ್ಪವು ಈಗ ಭಗ್ನಗೊಂಡಿದೆ.

ಬಸವೇಶ್ವರ ದೇವಾಲಯದ ಆವರಣದಲ್ಲಿ ಅನೇಕ ರೀತಿಯ ಶಿಲ್ಪಗಳಿವೆ. ಆದರೆ ಅವು ಭಗ್ನಗೊಂಡಿವೆ. ಅವುಗಳಲ್ಲಿ ನಂದಿ, ಸ್ತಂಭ, ಶಿವಲಿಂಗ, ನಾಗ, ನಾಗಿಣಿ ಶಿಲ್ಪ ಪ್ರಮುಖವಾಗಿವೆ."[೮]

೩.೭ ಬಯಲು ಪ್ರದೇಶದ ಪ್ರಾಚ್ಯ ನೆಲೆಗಳು :

ತಾಲೂಕಾ ಕೇಂದ್ರವಾಗಿರುವ ರಾಯಬಾಗ, ಹಾರೂಗೇರಿ, ಯಬರಟ್ಟಿ, ಮುಗಳಖೋಡ, ಕಪ್ಪಲಗುದ್ದಿ, ಹಂದಿಗುಂದ, ಹಿಡಕಲ್, ರಾಯಬಾಗ ತಾಲೂಕಿನ ಬಯಲು ಪ್ರದೇಶದ ಗ್ರಾಮಗಳು. ಇವುಗಳಲ್ಲಿ ಹಾರೂಗೇರಿ ಮತ್ತು ಮುಗಳಖೋಡ ದೊಡ್ಡ ಗ್ರಾಮಗಳು. ಈ ಗ್ರಾಮಗಳು ಕೃಷ್ಣಾ ನದಿಯಿಂದ ೮-೧೦ ಕಿ.ಮೀ ದಕ್ಷಿಣದಲ್ಲಿದ್ದು ಸಮತಟ್ಟಾದ ಪ್ರದೇಶಗಳನ್ನು ಒಳಗೊಂಡಿವೆ. ಹಾರೂಗೇರಿಯ ಜನಸಂಖ್ಯೆ ಸು. ೫೫,೦೦೦, ಮುಗಳಖೋಡದ ಜನಸಂಖ್ಯೆ ಸು. ೪೦,೦೦೦ ಇವೆರಡೂ ಪ್ರಾಚ್ಯ ನೆಲೆಗಳೆಂದು ಇತಿಹಾಸಕಾರರಿಂದ ಗುರುತಿಸಲ್ಪಡುತ್ತದೆ. ಇಲ್ಲಿ ಡಾ. ಅ. ಸುಂದರರವರು ಉತ್ಖನನ ಕೈಗೊಂಡು ಹಲವು ಪ್ರಾಚ್ಯ ಅವಶೇಷಗಳನ್ನು ಶೋಧಿಸಿದ್ದಾರೆ. ಹಾರೂಗೇರಿ ಪಕ್ಕದಲ್ಲಿರುವ ಯಬರಟ್ಟಿ ಹಾಗೂ ಮುಗಳಖೋಡದಿಂದ ೧೦ ಕಿ.ಮೀ ಆಗ್ನೇಯ, ಕಪ್ಪಲಗುದ್ದಿ ಹಾಗೂ ಪೂರ್ವದಲ್ಲಿರುವ ಹಂದಿಗುಂದ ಗ್ರಾಮಗಳು ಫಲವತ್ತಾದ ಮಣ್ಣು ಹೊಂದಿದ್ದು ವ್ಯವಸಾಯಕ್ಕೆ ಅನುಕೂಲವಾಗಿವೆ. ಹಾರೂಗೇರಿ ಪಕ್ಕದ ಹಿಡಕಲ ಒಂದು ಕಾಲದಲ್ಲಿ ಸಾಂಸ್ಕೃತಿಕ ನೆಲೆಯೆಂದು ಪ್ರಖ್ಯಾತಿ ಪಡೆದಿತ್ತು. ಬಯಲು ಪ್ರದೇಶದಲ್ಲಿ ಬರುವ ಪ್ರಾಚ್ಯ ನೆಲೆಗಳ ಅಧ್ಯಯನ ಈ ಅಧ್ಯಾಯದಲ್ಲಿದೆ.

೮. ಅಪ್ಪಣ್ಣಾ. ಎ. ಹಂಚೆ 'ರಾಯಬಾಗ ಪ್ರದೇಶದ ದೇವಾಲಯಗಳು, ಶಿಲ್ಪ ಮತ್ತು ಶಾಸನಗಳು' ಅಪ್ರಕಟಿತ – ಪುಟ ೭೬–೭೭

೩.೭.೧ ರಾಯಬಾಗ :

ರಾಯಬಾಗ ಪ್ರಾಚೀನ ಕಾಲದಲ್ಲಿ ಒಂದು ವಿದ್ಯಾಕೇಂದ್ರವಾಗಿ ಪ್ರಸಿದ್ಧಿಯನ್ನು ಪಡೆದಿತ್ತು. ರಾಯಬಾಗದ ಇತಿಹಾಸ ರಾಜಾದಿತ್ಯನ ವ್ಯವಹಾರ ಗಣಿತದೊಂದಿಗೆ ಬಿಚ್ಚಿಕೊಳ್ಳುತ್ತದೆ. ಮೊಟ್ಟಮೊದಲು ರಾಯಬಾಗದ ದಾಖಲೆ ಇರುವುದೇ ರಾಜಾದಿತ್ಯನ ವ್ಯವಹಾರ ಗಣಿತದಲ್ಲಿ. ಅನಂತರ ರಾಯಬಾಗದ ಹಲವು ಶಾಸನಗಳು ಅದರ ಇತಿಹಾಸವನ್ನೇ ಬಿಚ್ಚಿಡುತ್ತವೆ. ಇಲ್ಲಿಯ ಶಾಸನಗಳಲ್ಲಿ ಆ ನಾಡನ್ನು ಆಳಿದ ರಟ್ಟರು, ಕಲ್ಯಾಣದ ಚಾಲುಕ್ಯರು ಹಾಗೂ ಹೊಯ್ಸಳರಿಗೆ ಸಂಬಂಧಿಸಿದ ವಿವರಗಳು ಸಿಗುತ್ತವೆ. ರಾಯಬಾಗದಲ್ಲಿ ಪ್ರಾಚೀನ ೩ ನೆಲೆಗಳು ಇರುವುದನ್ನು ಅಲ್ಲಿಯ ಜನ ಗುರುತಿಸುತ್ತಾರೆ. ೧) ಈಗಿನ ನ್ಯೂ ಹೈಸ್ಕೂಲ ಪ್ರದೇಶ ೨) ದಿಗ್ಗೇವಾಡಿ ರಸ್ತೆಗೆ ಹೊಂದಿಕೊಂಡಿರುವ ಪ್ರದೇಶ ೩) ಸಧ್ಯದ ಪಟ್ಟಣದ ಮಧ್ಯದಲ್ಲಿರುವ ಪ್ರದೇಶ. ಇವು ಹಾಳು ಮಣ್ಣಿನಿಂದ ಕೂಡಿದ್ದು ಅವು ರಾಯಬಾಗದ ಪ್ರಾಚೀನ ನೆಲೆಗಳಾಗಿರಬಹುದೆಂದು ಸಹಜವಾಗಿ ಊಹಿಸಬಹುದು. ರಾಯಬಾಗ ೩ ಬಾರಿ ಸ್ಥಳಾಂತರಗೊಂಡಿತೆಂದು ಅಲ್ಲಿಯ ಜನರು ಹೇಳುವರು.

ಈ ಸ್ಥಳಾಂತರದ ಕುರಿತು ಅಲ್ಲಿಯ ಜನ ಸ್ವಾರಸ್ಯಕರವಾಗಿ ಕಥೆ ಕಟ್ಟುತ್ತಾರೆ. ಒಂದು ಸಲ ಈ ಊರ ಶ್ರೀಮಂತನ ಮಗಳು ಹಾಗೂ ರಾಯ(ರಾಜ)ನ ಮಗಳೂ ಸಂತೆಗೆ ಹೋಗಿದ್ದರು. ಪೇಟೆಯಲ್ಲಿ ಒಂದು ಉನ್ನತ ಗಾತ್ರದ ರುಚಿಕಟ್ಟಾದ ಕುಂಬಳಕಾಯಿ ಇಬ್ಬರ ಮನಸ್ಸಿಗೂ ಬರುತ್ತದೆ. ಆಗ ಅದನ್ನು ಪಡೆಯಲು ಸ್ಪರ್ಧೆ ಆರಂಭ. ಯಾರೂ ಸೋಲುವಂತಿಲ್ಲ. ಅಂತೂ ಬಹಿರಂಗ ಸವಾಲಿನಲ್ಲಿ ಶ್ರೀಮಂತನ ಮಗಳೇ ಹೆಚ್ಚು ದುಡ್ಡು ಕೊಟ್ಟು ಪಡೆದು ಹಿಂದಿರುಗುತ್ತಾಳೆ. ಇತ್ತ ಅವಮಾನಿತಳಾದ ರಾಯ(ರಾಜ)ನ ಮಗಳು ತಂದೆಗೆ ಸುದ್ದಿ ಮುಟ್ಟಿಸಿದ್ದೇ ತಡ, ನನ್ನ ಪ್ರಜೆಯಿಂದಲೇ ನನಗೆ ಅವಮಾನವೇ!, ಸಾಧ್ಯವಿಲ್ಲ, ಎಂದವನೇ ಹೊತ್ತು ಏರುವುದರೊಳಗಾಗಿ ಊರನ್ನು ತೆರವು ಮಾಡಬೇಕು, ಇಲ್ಲವಾದಲ್ಲಿ ಎಲ್ಲರ ರುಂಡ ಚಂಡಾಡುತ್ತೇನೆ ಎಂದು ಸಾರಿದನಂತೆ. ಹೆದರಿದ ಶ್ರೀಮಂತನ ಕುಟುಂಬ ಹಾಗೂ ಇತರ ಗ್ರಾಮಸ್ಥರು ಕಂಡ ಕಂಡತ್ತ ಪಲಾಯನ ಮಾಡಿದರು. ಕೆಲ ಕುಟುಂಬಗಳು ಈಗ ಇರುವ ಸ್ಥಳದಲ್ಲಿ ನೆಲೆನಿಂತರು. ಅದೇ ಮುಂದೆ ಬೆಳೆದು ರಾಯ(ರಾಜ)ನು ನೆಲೆ ನಿಂತ ತೋಟ (ಬಾಗ)ವೇ ರಾಯಬಾಗವಾಯಿತು. ಮುಂದೆ ಹಳ್ಳಿಗರ ಆಡು ನುಡಿಯಲ್ಲಿ ಬಾಗಿಯೂ ಆಯಿತು. ಇದಕ್ಕೆ ಹಿನ್ನೆಲೆಯಾಗಿ ಸಂಕೇಶ್ವರರ ಸಂಕನಾಥ, ಖಿದ್ರಾಪೂರದ ಕೋಪನಾಥ, ಬಾಗಿಯ ಬಂಕನಾಥ ಮಂದಿರಗಳನ್ನು ದೈತ್ಯರು ಒಂದೇ ರಾತ್ರಿಯಲ್ಲಿ ಕಟ್ಟಿಸಿದರೆಂಬ ದಂತ ಕಥೆಯೂ ಸಹ ಬಾಯಿಂದ ಬಾಯಿಗೆ ಹರಿದು ಬಂದಿರುವುದನ್ನು ವಿಚಾರಿಸಬಹುದಾಗಿದೆ.

ಕ್ರಿ.ಶ ೧೨೦೪ರಷ್ಟು ಹಿಂದೆಯೇ ಈಗಿನ ಆದಿನಾಥ ಮಂದಿರವು ಸ್ಥಾಪನೆಯಾಗಿತ್ತೆಂದೂ, ಅದು ಜೀರ್ಣಗೊಂಡಾಗ ಕಾರ್ತವೀರ್ಯನು ಹೊಸದುಗೊಳಿಸಿದನು. ಹಾಗಾದರೆ ಈ ಜಿನಮಂದಿರವು ಊರು ಪಶ್ಚಿಮಕ್ಕಿದ್ದಾಗ ಈಗಿನ ಸ್ಥಳದಲ್ಲಿ ಪ್ರಶಾಂತ ವಾತಾವರಣದಲ್ಲಿತ್ತೆಂದು ನಂತರ ಊರು ಸ್ಥಳಾಂತರ ಹೊಂದಿ ಇದರ ಸುತ್ತಲೂ ಹಬ್ಬಿರಬಹುದೆಂದು ಊಹಿಸಬಹುದಾಗಿದೆ. ಇದರೊಂದಿಗೆ

ಇದಕ್ಕೂ ಪೂರ್ವದಲ್ಲಿ ಯಾಪನೀಯ ಸಂಘದ ಬಸದಿಯೊಂದು ಇತ್ತೆಂದು ಅದಕ್ಕೆ ಮಾರಸಿಂಗಮಯ್ಯ ಬಸದಿಯೆಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. ಇಂದು ಚಿಂಚಲಿ ದಾರಿಯಲ್ಲಿ ಗುಡ್ಡದ ಮೇಲಿರುವ ಬಸದಿಯೇ ಇದಾಗಿರುವ ಸಂಭವವಿದೆ. ರಾಯಬಾಗದಲ್ಲಿ ಸಧ್ಯ ಆದಿನಾಥ ಬಸದಿ, ಮಾರಸಿಂಗಮಯ್ಯನ ಬಸದಿ ಹಾಗೂ ಗಡದ ಬಸದಿ ಮೊದಲಾದ ಬಸದಿಗಳಿವೆ. ಇದಲ್ಲದೆ ಹಲವು ಪ್ರಾಚೀನ ದೇವಾಲಯಗಳಿವೆ. ಇವುಗಳಲ್ಲಿ ಮುಖ್ಯವಾದ ದೇವಾಲಯಗಳೆಂದರೆ ಬಾಗಿಯ ಬಂಕನಾಥನ ದೇವಾಲಯ ಹಾಗೂ ಸೋಮನಾಥ. ಇನ್ನೊಂದು ಮಹತ್ವದ ದೇವಾಲಯವೆಂದರೆ ನರಸಿಂಹನ ದೇವಾಲಯ. ಇದು ವೈಷ್ಣವರಿಗೆ ಸಂಬಂಧಿಸಿದ್ದು. ನರಸಿಂಹ ದೇವಾಲಯದಲ್ಲಿರುವ ಮೂರ್ತಿ ಅತ್ಯಂತ ಪ್ರಸಿದ್ಧವಾಗಿದ್ದು ಶಿಲ್ಪ ದೃಷ್ಟಿಯಿಂದ ಅದು ಕರ್ನಾಟಕದಲ್ಲಿಯೇ ಏಕೈಕವಾದ ಮೂರ್ತಿಯೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ರಾಯಬಾಗದಲ್ಲಿ ಇತ್ತೀಚಿಗೆ ಮನೆ ಕಟ್ಟುವಾಗ ಅಡಿಪಾಯದಲ್ಲಿ ಕೆಲವು ಜಿನ ಬಿಂಬಗಳು ಸಿಕ್ಕಿದ್ದು ನಾಡಿನ ತುಂಬೆಲ್ಲಾ ಸುದ್ದಿಯಾಗಿತ್ತು. ಆ ಜಿನ ಬಿಂಬಗಳನ್ನು ನೋಡಿದಾಗ ಅಲ್ಲಿರುವ ಬಸ್ತಿಗಳನ್ನೇ ಗಮನಿಸಿದಾಗ ಅದೊಂದು ಪ್ರಾಚೀನ ಜೈನ ನೆಲೆ ಆಗಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಆದರೆ ಸಧ್ಯದಲ್ಲಿ ರಾಯಬಾಗ ಪಟ್ಟಣದ ಇತಿಹಾಸ ಪೂರ್ವದ ಚರಿತ್ರೆಗೆ ಯಾವ ಸಾಕ್ಷ್ಯಾಧಾರಗಳು ನಮಗೆ ಸಿಗುವುದಿಲ್ಲ. ಅಲ್ಲಿಯ ಭೌಗೋಳಿಕ ಪರಿಸರವನ್ನು ಗಮನಿಸಿದಾಗ ಅದು ನಿಶ್ಚಿತವಾಗಿಯು ಪ್ರಾಚೀನ ಮಾನವನ ನೆಲೆಯಾಗಿತ್ತು ಎಂಬುದನ್ನು ಕಂಡುಕೊಳ್ಳಬಹುದು. ಈ ದಿಶೆಯಲ್ಲಿ ಅಲ್ಲಿಯ ಅಧ್ಯಯನಗಳು ನಡೆದಲ್ಲಿ ರೋಚಕ ಪರಿಣಾಮಗಳು ತಿಳಿಯುವ ಸಾಧ್ಯತೆ ಇದೆ.

೩.೭.೨ ಮುಗಳಖೋಡ :

ಈ ಗ್ರಾಮವು ರಾಯಬಾಗದಿಂದ ಆಗ್ನೇಯ ದಿಕ್ಕಿನಲ್ಲಿ ಸುಮಾರು ೨೧ ಕಿ.ಮೀ ಅಂತರದಲ್ಲಿದೆ. ಇದು ರಾಯಬಾಗ ತಾಲೂಕಿನ ಪ್ರಾಚ್ಯ, ಐತಿಹಾಸಿಕ ಮತ್ತು ಪುಣ್ಯಕ್ಷೇತ್ರವಾಗಿ ಖ್ಯಾತವಾಗಿದೆ. ಈ ಗ್ರಾಮದ ಹೆಸರಿನ ಬಗ್ಗೆ ಸಾಕಷ್ಟು ವದಂತಿಗಳಿವೆ. ಇಲ್ಲಿ ನೀರಲಕೋಡಿ, ಹರನಕೋಡಿ, ಯಾದ್ಯಾನಕೋಡಿ ಎಂಬ ಮೂರು ಕೋಡಿಗಳಿದ್ದು ಅವು ಮೂರು ಕೋಡಿಗಳು ಒಂದೆಡೆ ಕೂಡಿವೆ. ಆದ್ದರಿಂದ ಮುಗೋಳ>ಮುಗಳಕೋಡಿ>ಮುಗಳಖೋಡ ಎಂದು ಹೆಸರು ಗ್ರಾಮಕ್ಕೆ ಬಂದಿರಬಹುದು. ಇನ್ನೊಂದು ಇದು ಎತ್ತರದ ಪ್ರದೇಶ. ಮಗ್ಗುಲಲ್ಲಿ ಬೆಟ್ಟಗಳಿವೆ. ಈಗ ಈ ಪ್ರದೇಶ ಕಂಡು ಬರುವುದಿಲ್ಲ. ಕಾರಣ ನೀರಾವರಿ ಕ್ಷೇತ್ರವಾಗಿ ಮಾರ್ಪಾಟ್ಟಿದೆ. ಈ ವಿಷಯ ಈ ಊರಿನ ಹೆಸರಿನಲ್ಲಿಯೇ ಅಡಗಿದೆ. ಮುಗಳಿ ಎಂದರೆ 'ಗಿಡ' 'ಕೋಡು' ಎಂದರೆ 'ಗುಡ್ಡ' ಎಂದು ಅರ್ಥವಾಗುತ್ತದೆ. ಇದರಿಂದಲೇ ಈ ಹೆಸರು ಬಂದಿರಬಹುದು ಎಂದು ಸ್ಥಳೀಯರ ನಂಬಿಕೆ. ಆದರೆ, ಈ ನಿಷ್ಪತ್ತಿ ಸರಿಯಾಗಿಲ್ಲ. ಪ್ರಾಯಶಃ ಇದು ಮುನಿಗಳ ಖೋಡಿ ಆಗಿರಬಹುದು ಅಥವಾ ಮೂರು + ಕೊಳ= ಮುಗಳಕೋಡಿ ಆಗಿರಬಹುದು.

ಮುಗಳಖೋಡ ಪ್ರಾಚೀನ ಗ್ರಾಮವೆಂಬುದಕ್ಕೆ ಅಲ್ಲಿ ಸಿಗುವ ಪ್ರಾಚ್ಯ ಅವಶೇಷಗಳು ಸಾಕ್ಷಿ.

ಇಲ್ಲಿ ಹಾಳ ದೇಗುಲವಿದೆ. ದೇಗುಲ ಗುಡಿ ರಟ್ಟರ ಕಾಲದ್ದು. ಸುಮಾರು ೧೦-೧೧ನೇ ಶತಮಾನದ್ದು. ಗ್ರಾಮದ ಈಶಾನ್ಯ ಭಾಗದಲ್ಲಿ ಘಟಪ್ರಭಾ ಎಡದಂಡೆ ಕಾಲುವೆಯ ಎಡ ಮಗ್ಗುಲಿಗೆ ಎತ್ತರವಾದ ದಿನ್ನೆಯ ಮೇಲೆ ಪೂರ್ವಾಭಿಮುಖವಾಗಿ ಈ ದೇವಾಲಯ ಕಟ್ಟಲ್ಪಟ್ಟಿದೆ. ನಂತರ ಗ್ರಾಮದ ಮಧ್ಯಭಾಗದಲ್ಲಿ ಚನ್ನಬಸವೇಶ್ವರ ದೇವಾಲಯದ ಮುಂಭಾಗದಲ್ಲಿ ಪಶ್ಚಿಮಾಭಿಮುಖವಾಗಿ ನಿಲ್ಲಿಸಲಾಗಿರುವ ಮಾಸ್ತಿ ಕಲ್ಲುಗಳು ದೊರೆಯುತ್ತವೆ. ಈ ಗ್ರಾಮದಲ್ಲಿ ನಿಷಧಿ ಕಲ್ಲು ಸುಮಾರು ಎರಡುವರೆ ಅಡಿ ಎತ್ತರವಾಗಿದೆ. ಹಿಂದೆ ಅಪ್ರಕಟಿತ ಶಾಸನವೊಂದು ಉಪಲಬ್ಧವಿದ್ದ ವಿಷಯ ತಿಳಿಯುತ್ತದೆ. ಆದರೆ ಇಂದು ಯಾವ ಶಾಸನಗಳು ಸಿಗುವುದಿಲ್ಲ. ಮುಗಳಖೋಡ ಪ್ರಾಚೀನ ಜೈನಕೇಂದ್ರವಾಗಿರಬಹುದು. ಅಲ್ಲಿ ನಿಷಧಿ ಕಲ್ಲುಗಳು ದೊರೆಯುತ್ತವೆ.



ಹಳ್ಳದ ಬದಿಯಲ್ಲಿರುವ ನಾಯಿಕ ಅವರ ತೋಟದಲ್ಲಿಯ ಹಾಳು ಮಣ್ಣಿನ ಪ್ರದೇಶ

ರಾಯಬಾಗ ತಾಲೂಕಿನಲ್ಲಿಯ ಕೆಲವೇ ಕೆಲವು ದೊಡ್ಡ ಗ್ರಾಮಗಳಲ್ಲಿ ಇದು ಒಂದಾಗಿದ್ದು ವಿಸ್ತಾರವಾದ ಕೃಷಿ ಕ್ಷೇತ್ರವನ್ನು ಹೊಂದಿದೆ. ಈಗ ಯಲ್ಲಾಲಿಂಗ ಮಹಾರಾಜರ ಮಠದಿಂದಾಗಿ ಮಹಾರಾಷ್ಟ್ರ, ಆಂಧ್ರ ಪ್ರದೇಶ ಮತ್ತು ಕರ್ನಾಟಕದಲ್ಲಿ ಪ್ರಸಿದ್ಧಿ ಪಡೆದಿದೆ. ಇಲ್ಲಿ ಎರಡು ಪ್ರಾಚ್ಯ ನೆಲೆಗಳನ್ನು ಗುರುತಿಸಬಹುದು. ಒಂದು ಊರ ಮಧ್ಯದಲ್ಲಿ ದ್ಯಾಮವ್ವನ ಗುಡಿ ಹತ್ತಿರ ಅನೇಕ ಪ್ರಾಚ್ಯ ಅವಶೇಷಗಳು ಸಿಗುತ್ತವೆ. ಇನ್ನೊಂದು ಪ್ರಾಚ್ಯ ನೆಲೆ ಮಹಾಲಿಂಗಪೂರ ರಸ್ತೆಯ ದಕ್ಷಿಣ ದಿಕ್ಕಿನಲ್ಲಿ, ಸೂರ್ಯಕಾಂತ ನಾಯಕ ಹಾಗೂ ರಾವಸಾಬ ನಾಯಿಕ ಜಮೀನಿನಲ್ಲಿ ಹಾಳು ಕ್ಷೇತ್ರವಿದೆ. ಅದರ ಪಕ್ಕದಲ್ಲಿ 'ಸಾಡೆ' ಹಳ್ಳ ಹರಿಯುತ್ತದೆ. ಕಾಲ ಕ್ರಮೇಣ ಇಲ್ಲಿಯ ಹಾಳು ಮಣ್ಣು ಬಳಸಿಕೊಳ್ಳಲಾಯಿತು. ಈಗ ಪೂರ್ವ ದಿಕ್ಕಿನಲ್ಲಿ ಹಳ್ಳಕ್ಕೆ ಹೊಂದಿಕೊಂಡಂತೆ ಹಾಳು ಕ್ಷೇತ್ರವಿದ್ದು



ಅದು ಮತ್ತೊಂದು ಪ್ರಾಚ್ಯ ನೆಲೆಯಾಗಿರಬಹುದು. ಈಗಾಗಲೇ ಇತಿಹಾಸಕಾರರು ಈ ಪ್ರಾಚ್ಯ ನೆಲೆಯನ್ನು ಗುರುತಿಸಿ ವರದಿ ಮಾಡಿದ್ದಾರೆ. ಈ ಪ್ರಾಚ್ಯ ನೆಲೆಯು "ಶಿಲಾ-ತಾಮ್ರಯುಗ ಸಂಸ್ಕೃತಿಯುಳ್ಳದಾಗಿದ್ದು, ಈ ಪ್ರದೇಶದಲ್ಲಿ ಇಬ್ಬದಿ ನೀಳಚಕ್ಕೆ ಕೆಂಪು ವರ್ಣದ ಮಡಕೆಯ ಮೇಲೆ ಕಪ್ಪು ವರ್ಣದ ಚಿತ್ರಗಳು, ಉಜ್ಜಿ ನಯಗೊಳಿಸಿದ ಉಪಕರಣ ದೊರೆತಿವೆ"[೯] ಮತ್ತು "ಮಸ್ಕಿ ಮಾದರಿಯ ಮಡಕೆಯ ಚೂರುಗಳು ಈ ನೆಲೆಯಲ್ಲಿ ದೊರೆತಿವೆ."[೧೦]

೩.೭.೩ ಹಂದಿಗುಂದ :

ಹಂದಿಗುಂದ ಇದು ರಾಯಬಾಗ ತಾಲೂಕಿನ ಪೂರ್ವ ದಿಕ್ಕಿನಲ್ಲಿ ಕೊನೆಯ ಹಳ್ಳಿ. ಇದು ರಾಯಬಾಗದಿಂದ ಸು. ೩೫ ಕಿ.ಮೀ ದೂರದಲ್ಲಿದೆ. ಹಂದಿಗುಂದವನ್ನು ದಾಟಿದರೆ ಬಾಗಲಕೋಟೆ ಜಿಲ್ಲೆ ಪ್ರಾರಂಭಗೊಳ್ಳುತ್ತದೆ. ಹಂದಿಗುಂದ ಎಂಬ ಗ್ರಾಮದ ಹೆಸರನ್ನು ಗಮನಿಸಿದರೆ ಗುಂದ ಎಂದರೆ ಬೆಟ್ಟ. ಬಹುಶಃ ಒಂದು ಕಾಲದಲ್ಲಿ ಈ ಬೆಟ್ಟದಲ್ಲಿ ಹಂದಿಗಳು ಹೆಚ್ಚು ವಾಸಿಸುತ್ತಿರಬಹುದು. ಆದ್ದರಿಂದ ಇದನ್ನು ಹಂದಿಗುಂದ ಎಂದು ಕರೆದಿರಬಹುದು. ಹಂದಿಗುಂದದ ಗ್ರಾಮದ ಪಕ್ಕದಲ್ಲಿ ಒಂದು ಹಾಳು ನೆಲೆಯಿದ್ದು ಅದು ಪ್ರಾಚ್ಯ ನೆಲೆಯಾಗಿರಬೇಕು. ಅಲ್ಲಿ ಈಗಲೂ ಹಾಳು ಮಣ್ಣು ಸಿಗುತ್ತದೆ. ಅಲ್ಲದೆ ಹಂದಿಗುಂದದ ನೆಲ ತುಂಬ ಫಲವತ್ತಾಗಿದ್ದು ದಕ್ಷಿಣ ಹಾಗೂ ಪಶ್ಚಿಮ ದಿಕ್ಕುಗಳಲ್ಲಿ ಬಯಲು ಪ್ರದೇಶವಿದೆ. ಇದೆಲ್ಲವನ್ನು ಗಮನಿಸಿದರೆ ಒಂದು ಕಾಲದಲ್ಲಿ ಬೇಟೆಯ ಸಂಸ್ಕೃತಿ ಇಲ್ಲಿ ಇದ್ದಿರಬಹುದು. ಆದರೆ ಇತಿಹಾಸ ತಜ್ಞರು ಹಂದಿಗುಂದದ ಪ್ರಾಚ್ಯ ನೆಲೆಗಳ ಅವಲೋಕನ ಇದುವರೆಗೂ ಮಾಡಿಲ್ಲ. ಈ ದಿಶೆಯಲ್ಲಿ ಗಮನ ಹರಿಸುವುದು ಅವಶ್ಯವೆನಿಸುತ್ತದೆ.

೩.೭.೪ ಹಾರೂಗೇರಿ :

ರಾಯಬಾಗದ ಪೂರ್ವ ದಿಕ್ಕಿನಲ್ಲಿ ೧೯ ಕಿ.ಮೀ ಅಂತರದಲ್ಲಿರುವ ದೊಡ್ಡ ಪಟ್ಟಣ. ಸುಮಾರು ೫೫,೦೦೦ ಸಾವಿರ ಜನಸಂಖ್ಯೆಯುಳ್ಳ ವಿವಿಧ ಸಾಂಸ್ಕೃತಿಕ ಆಯಾಮಗಳನ್ನು ಒಳಗೊಂಡು ಬೆಳೆದು ಬಂದಿದೆ. ತೇರದಾಳ ಜಿನಾಲಯಕ್ಕೆ ನೀಡಿದ ದತ್ತಿಕ್ಷೇತ್ರಕ್ಕೆ ಚತುರ್ಸೀಮೆಗಳನ್ನು ಹೇಳುವಾಗ ಅಲ್ಲಿ ಹಾರೂಗೇರಿಯ ಹೆಸರು ಉಲ್ಲೇಖಿತಗೊಂಡಿದೆ. ಅದನ್ನು ಆ ಶಾಸನ 'ಹಾರುನಗೆರೆ' ಎಂದು ಕರೆದಿದೆ. ಹಾರುನಗೆರೆ ಎಂದರೆ ಪ್ರಾಯಶಃ ಹಾರುಗ ಎಂಬ ವ್ಯಕ್ತಿ ಕೆರೆಯನ್ನು ನಿರ್ಮಿಸಿರಬಹುದು. ಆ ಕೆರೆಯಿಂದಾಗಿ ಈ ಊರಿಗೆ ಆ ಹೆಸರು ಬಂದಿರಬಹುದು ಎಂದು ಊಹಿಸಬಹುದಾಗಿದೆ. "ಡಾ. ಅ. ಸುಂದರರವರು ೧೯೬೫-೬೬ ರಲ್ಲಿ ಕೃಷ್ಣ ಮೇಲ್ದಂಡೆಯ ೨೦ ಗ್ರಾಮಗಳ ಅನ್ವೇಷಣೆ

---

೯. ಇಂಡಿಯನ್ ಆರ್ಕಿಯಾಲಜಿ ಎ-ರಿವ್ಯೂ ೧೯೬೫-೬೬ ಪುಟ - ೩೨

೧೦. ಪಿ. ಬಿ. ದೇಸಾಯಿ (ಫೆಲಿಟೇಶನ್) ಸ್ಟಡಿಸ್ ಇನ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರ್ ೧೯೭೧ ಪುಟ-೨೫

ಕಾರ್ಯವನ್ನು ಕೈಗೊಂಡಾಗ ಹಾರೂಗೇರಿ ಕೂಡಾ ಒಂದು ಪ್ರಾಚ್ಯ ನೆಲೆಯೆಂದು ಗುರುತಿಸಲಾಯಿತು. ಅಲ್ಲಿ ಇತಿಹಾಸ ಪೂರ್ವದ ಅನೇಕ ಅವಶೇಷಗಳು ಸಿಕ್ಕಿದ್ದಾಗಿ ಅವರು ಉಲ್ಲೇಖಿಸುವರು. ಕಲ್ಲಿನ ಕೊಡಲಿ, ಅರೆಯುವ ಕಲ್ಲುಗಳು, ಬೃಹತ ಪಾತ್ರೆಗಳ ಚೂರುಗಳು ಅಸ್ಥಿಪಂಜರುಗಳು, ಹಿಡಿಕೆಯುಳ್ಳ ಬಟ್ಟಲುಗಳು ಹಾಗೂ ರೇಖಾ ಚಿತ್ರಗಳುಳ್ಳ ಮಣ್ಣಿನ ಪಾತ್ರೆಗಳು ಅವರ ಅನ್ವೇಷಣೆಯ ಕಾಲದಲ್ಲಿ ಸಿಕ್ಕಿದ್ದು ಅವು ಕ್ರಿಪೂ ೨೦೦೦ ದಿಂದ ೧೦೦೦ ದ ವರೆಗಿನ ಅವಧಿಯವು ಎಂದು ಡಾ. ಅ. ಸುಂದರರವರು ಗುರುತಿಸಿರುವರು.”[೧೧] ಈಗಲೂ ಹಾರೂಗೇರಿಯನ್ನು ಹಾಳ ಹಾರೂಗೇರಿ ಎಂದು ಕರೆಯುವರು. ಹಾರೂಗೇರಿ ಗ್ರಾಮದ ನಾಮದೊಂದಿಗೆ ಅಂಟಿಕೊಂಡ ಹಾಳು ಎಂಬ ಪದ ಅದರ ಪ್ರಾಚ್ಯ ನೆಲೆಯನ್ನು ಗುರುತಿಸಲು ಸಹಾಯಕವಾಗುತ್ತದೆ. ಒಂದು ಕಾಲದಲ್ಲಿ ಇಲ್ಲಿ ದೊಡ್ಡ ದೊಡ್ಡ ಹಾಳು ಮಣ್ಣಿನ ದಿಬ್ಬವಿತ್ತು. ಈ ಹಾಳು ಮಣ್ಣೆಲ್ಲ ಕರಗಿ ಹೋಗಿದೆ. “ಅಲ್ಲಿ ಮಸ್ಕಿ ಮಾದರಿಯ ಮಡಿಕೆ, ಸಾವಳ್ಗಾ ಮಾದರಿಯ ಮಡಿಕೆ, ಕಪ್ಪು ವರ್ಣದ ಮಡಿಕೆ, ಬೂದಿ ಬಣ್ಣದ ಮಡಿಕೆಗಳು ಸಿಕ್ಕಿವೆ.”[೧೨] ರೈತರು ಅದನ್ನು ಜಮೀನಿಗಾಗಿ ಉಪಯೋಗಿಸುತ್ತಿದ್ದರಿಂದ ಆ ಹಾಳು ಮಣ್ಣು ಬರಿದಾಗಿದೆ. ಆದರೆ ಗ್ರಾಮದ ಪಶ್ಚಿಮದಲ್ಲಿ ‘ಉಪ್ಪಿನ ಮಾಳ’ ಎಂದು ಗುರುತಿಸಲಾಗುವ ಒಂದು ದಿಬ್ಬವಿದ್ದು ಅದುವೇ ಹಾರೂಗೇರಿಯ ಮೊದಲ ನೆಲೆಯಾಗಿತ್ತೆಂದು ಹಿರಿಯರು ಹೇಳುತ್ತಾರೆ. ಆದರೆ ಸಧ್ಯಕ್ಕೆ ಅಲ್ಲಿ ಯಾವ ಪ್ರಾಚೀನ ಅವಶೇಷಗಳು ಸಿಗುವುದಿಲ್ಲ. ಒಂದು ಕಾಲದಲ್ಲಿ ಇದು ಜನವಸತಿ



ಹಳ್ಳದ ಹತ್ತಿರ ಉಪ್ಪಿನ ಮಾಳ ಪ್ರಾಚ್ಯ ನೆಲೆ

---

೧೧. ಡಾ. ಪಿ. ಜಿ. ಕೆಂಪಣ್ಣವರ ಮತ್ತು ಟಿ. ಆರ್. ಜೊಡಟ್ಟಿ “ಜೈನ ಕ್ಷೇತ್ರಗಳ ಐತಿಹ್ಯ” ಪುಟ – ೧೯೯

ಪ್ರಕಾಶಕರು ಬಿ. ಬಿ. ಕರ್ಣವಾಡಿ – ೧೯೯೦

೧೨. ಪಿ. ಬಿ. ದೇಸಾಯಿ (ಫೆಲಿಟೇಶನ್) ಸ್ಟಡಿಸ್ ಇನ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರ್ ಪುಟ–೨೪ ೧೯೭೧



ನೆಲೆಯಾಗಿರಬೇಕೆಂಬುದಕ್ಕೆ ಡಾ. ಅ. ಸುಂದರರವರು ಹುಡುಕಿದ ಅವಶೇಷಗಳು ಸಾಕ್ಷಿಯಾಗುತ್ತವೆ. ಹೀಗೆ ಇದು ಶಿಲಾಯುಗ ಮತ್ತು ತಾಮ್ರ ಶಿಲಾಯುಗ ಸಂಸ್ಕೃತಿಯನ್ನು ಗರ್ಭೀಕರಿಸಿಕೊಂಡಿದೆ. ಹಾರೂಗೇರಿಯ ಪೂರ್ವದಲ್ಲಿ ಮತ್ತೊಂದು ನೆಲೆ ಇದ್ದಿರಬಹುದು ಎಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಅಲ್ಲಿ ಅನೇಕ ಅವಶೇಷಗಳು ಸಿಕ್ಕಿದ್ದವು. ಅವು ಇತಿಹಾಸ ಕಾಲದ ಅವಶೇಷಗಳಾಗಿದ್ದು ಪ್ರಾಚ್ಯ ಅವಶೇಷಗಳು ಆ ನೆಲೆಯಲ್ಲಿ ಸಿಕ್ಕಿರುವುದಿಲ್ಲ ಎಂಬುದನ್ನು ಗಮನಿಸಬಹುದು. ಹಾರೂಗೇರಿಯ ವಿಷಯ ಅಧ್ಯಯನ ಮಾಡಿದ್ದೇ ಆದ್ದಲ್ಲಿ ಪ್ರಾಚ್ಯ ಅವಶೇಷಗಳನ್ನು ಈಗಲೂ ಹುಡುಕಬಹುದು ಒಂದು ಕಾಲದಲ್ಲಿ ಹಾಳು ಮಣ್ಣಿನ ದಿಬ್ಬವನ್ನು ಅಗೆಯುವಾಗ ಅನೇಕ ಅವಶೇಷಗಳು ಹಾಗೂ ಪಾತ್ರೆಯ ಚೂರುಗಳು ಎಲುವಿನ ಚೂರುಗಳು ಸಿಗುತ್ತಿದ್ದವು. ಅವೆಲ್ಲ ಇಂದು ನಾಶವಾಗಿವೆ. ಒಟ್ಟಿನಲ್ಲಿ ಹಾರೂಗೇರಿ ಕೂಡಾ ಪ್ರಾಚ್ಯ ನೆಲೆಯಾಗಿತ್ತೆಂಬುದಕ್ಕೆ ಅನೇಕ ಆಧಾರಗಳು ಸಿಗುತ್ತವೆ ಈ ದಿಶೆಯಲ್ಲಿ ಅಧ್ಯಯನವನ್ನು ಕೈಕೊಳ್ಳುವ ಅಗತ್ಯವಿದೆ.

೩.೭.೫ ಯಬರಟ್ಟಿ :



ಯಬರಟ್ಟಿ : ಕುಡೇನಿ ಹಳ್ಳದ ಪಕ್ಕದ ಪ್ರಾಚ್ಯ ನೆಲೆ

ರಾಯಬಾಗ ಪೂರ್ವ ದಿಕ್ಕಿನಲ್ಲಿ ಸುಮಾರು ೨೩ ಕಿ.ಮೀ ಅಂತರದಲ್ಲಿಯ ಗ್ರಾಮ ಯಬರಟ್ಟಿ ಕಾಗವಾಡ ಮತ್ತು ಜಮಖಂಡಿ ರಸ್ತೆ ಪಕ್ಕದಲ್ಲಿದ್ದು ೪೦೦೦ ಜನಸಂಖ್ಯೆಯನ್ನು ಹೊಂದಿದೆ. ಈ ಗ್ರಾಮದ ಪ್ರಾಚೀನ ಮಾನವನ ನೆಲೆ ಸಮಸ್ಯಾತ್ಮಕವಾಗಿದೆ. ಕಾರಣ ಗ್ರಾಮದ ವ್ಯಾಪ್ತಿಯಲ್ಲಿ ಯಾವುದೇ ಕುರುಹುಗಳು ಸಿಗುವುದಿಲ್ಲವಾದರು "ಡಾ. ಅ. ಸುಂದರರವರು ೧೯೬೫-೬೬ರಲ್ಲಿ ಕೃಷ್ಣಾ ಮೇಲ್ದಂಡೆಯ ಗ್ರಾಮಗಳ ಅನ್ವೇಷಣೆಯ ಕಾರ್ಯವನ್ನು ಕೈಗೊಂಡಾಗ ಯಬರಟ್ಟಿ ಶಿಲಾ ತಾಮ್ರಯುಗ ಸಂಸ್ಕೃತಿಯ ನೆಲೆಯಾಗಿತ್ತೆಂದು ಗುರುತಿಸುತ್ತಾರೆ."[೧೩] ಈ ನೆಲೆ ಬಹುಶಃ ಯಬರಟ್ಟಿಯ ಹದ್ದಿನಲ್ಲಿ ಕೊಡೆನಹಳ್ಳ

---

೧೩. ಇಂಡಿಯನ್ ಆರ್ಕಿಯಾಲಜಿ ಎ-ರಿವ್ಯೂ ೧೯೬೫-೬೬ ಪುಟ - ೩೨



ಸ್ಥಳದ ಪೂರ್ವ ಬಾಜುವಿನ ಪ್ರದೇಶವಾಗಿರಬಹುದು. ಅದು ಪ್ರಾಚೀನ ಮಾನವನ ನೆಲೆಯಾಗಿತ್ತೆಂಬುದಕ್ಕೆ ಅನೇಕ ಅವಶೇಷಗಳು ಸಿಗುತ್ತಿದ್ದವು. ಅಲ್ಲಿ ೪ ಎಕರೆ ವಿಸ್ತೀರ್ಣದ ಹಾಳು ಮಣ್ಣಿನ ದಿಬ್ಬವಿತ್ತು. ಅದು ೩೦ ರಿಂದ ೪೦ ಫೂಟ ಎತ್ತರವಾಗಿತ್ತು. ಮಡಿಕೆ ಚೂರುಗಳು, ಎಲುವಿನ ಚೂರುಗಳು ದೊರಕುತ್ತಿದ್ದವು ಎಂದು ಸ್ಥಳೀಯರು ಹೇಳುತ್ತಾರೆ. ಸಧ್ಯದ ಪರಿಸ್ಥಿತಿಯಲ್ಲಿ ಕೃಷಿ ಚಟುವಟಿಕೆಗಾಗಿ ಪರಿವರ್ತನೆ ಹೊಂದಿ ಮನೆಗಳು ಅಂಗನವಾಡಿ ಶಾಲೆ, ಪ್ರಾಥಮಿಕ ಶಾಲೆ ಹಾಗೂ ಹನುಮಾನ ಮಂದಿರ ತಲೆಯೆತ್ತಿವೆ.

೩.೭.೬ ಕಪ್ಪಲಗುದ್ದಿ :

ಕಪ್ಪಲಗುದ್ದಿ ಗ್ರಾಮನಾಮವನ್ನು ಗಮನಿಸಿದರೆ ಇದು ಶಿಲಾಯುಗ ಸಂಸ್ಕೃತಿಗೆ ಸಂಬಂಧಿಸಿದ್ದು ಎನಿಸುತ್ತದೆ. ಕಪ್ಪಲ–ಕಪ್ಪಲು ಎಂಬ ಪದಗಳನ್ನು ಗಮನಿಸಿದರೆ ಈ ಗ್ರಾಮದ ಹೆಸರಿನಲ್ಲಿ ೨ ಪದಗಳಿದ್ದು ಕಪ್ಪು+ಕಲ್ಲು=ಕಪ್ಪುಕಲ್ಲು ಎಂಬುದು ಕಾಲಾನಂತರದಲ್ಲಿ ಕಪ್ಪಲ ಎಂದಾಗಿರಬಹುದು. ಯಾವ ಗ್ರಾಮಗಳ ಹೆಸರು ಕಲ್ಲುಗಳು ಎಂಬ ಪದದಿಂದ ಅಂತ್ಯಗೊಳ್ಳುತ್ತದೆಯೋ ಸಾಮಾನ್ಯವಾಗಿ ಆ ಗ್ರಾಮದ ಇತಿಹಾಸ ಚರಿತ್ರೆ ಪೂರ್ವಕಾಲಕ್ಕೆ ತನ್ನ ಸಂಬಂಧವನ್ನು ಬೆಳೆಸಿಕೊಂಡಿರುತ್ತದೆ. ಉದಾಹರಣೆಗೆ ಹಿಡಕಲ್ಲು, ಕಪ್ಪಲಗುದ್ದಿ, ಖಣದಾಳ ಮೊದಲಾದ ಪದಗಳನ್ನು ಗಮನಿಸಿದಾಗ ಇವುಗಳಲ್ಲಿ ಕಲ್ಲು ಅಥವಾ ಕಲ್ಲಿನ ಗುಣದ ಪ್ರಸ್ತಾಪ ಬರುವುದನ್ನು ನೋಡಬಹುದು. ಇವತ್ತಿನ ಕಪ್ಪಲಗುದ್ದಿ ಎಂಬ ಹಳ್ಳಿ ಪ್ರಾಚೀನ ಕಾಲದಲ್ಲಿ ಶಿಲಾಯುಗ ಸಂಸ್ಕೃತಿಯನ್ನು ಹೊಂದಿರಬಹುದು.

ಅಧ್ಯಾಯ : ನಾಲ್ಕು

ಸಮಾರೋಪ

೪.೧ ಬೂದಿ ದಿಬ್ಬಗಳು

೪.೨ ಬೃಹತ್ ಶಿಲಾಗೋರಿಗಳು

೪.೩ ಅಧ್ಯಯನದ ಫಲಿತಗಳು

೪.೪ ಅಧ್ಯಯನದ ಅವಕಾಶಗಳು

ಅಧ್ಯಾಯ : ನಾಲ್ಕು

ಸಮಾರೋಪ

ಮಾನವನ ಹುಟ್ಟು ಯಾವಾಗ ಆಯಿತೆಂಬುದು ತಿಳಿದಿಲ್ಲ. ಆದರೆ ಆತನ ವಿಕಾಸದ ಹಂತಗಳ ಅಧ್ಯಯನ ನಡೆದಿದೆ. ಏಕಜೀವಿ ಅಮೀಬಾದಿಂದ ಮಾನವನವರೆಗಿನ ಜೀವ ವಿಕಾಸದ ಪರಿಕ್ರಮವನ್ನು ಕಂಡುಕೊಳ್ಳುವ ಪ್ರಯತ್ನ ನಡೆದಿದೆ. ಮಾನವನ ಹುಟ್ಟು ಎಲ್ಲಿಯೇ ಆಗಲಿ, ಜೀವಿ ವಿಕಾಸದ ಕ್ರಮಗಳು ಹೇಗೆ ಆಗಿರಲಿ, ಆದರೆ ನಾಗರಿಕತೆಗೆ ನದಿಗಳೇ ಮೂಲ ನೆಲೆಗಳು. ನಮ್ಮ ನಾಗರಿಕತೆಗಳು ನದಿ ತೀರದಲ್ಲಿಯೇ ವಿಕಾಸಗೊಂಡವು. ಸಿಂದು ನದಿ ಕೊಳ್ಳದ ನಾಗರಿಕತೆ ಬಗೆಗಿನ ಅಧ್ಯಯನಗಳು ಪ್ರಾಚ್ಯ ನೆಲೆಗಳ ಅಭ್ಯಾಸಕ್ಕೆ ಪ್ರೇರಣೆ ನೀಡಿದವು. ಪ್ರಪಂಚದಲ್ಲಿ ಅನೇಕ ನದಿಗಳಿವೆ. ಭಾರತದಲ್ಲಿ ಗಂಗಾ, ಯಮುನಾ, ಸಿಂದೂ ನದಿಗಳು ಉತ್ತರದ ಪ್ರಮುಖ ಜೀವವಾಹಿನಿಗಳಾಗಿರುವಂತೆ ಕೃಷ್ಣಾ ಮತ್ತು ಕಾವೇರಿ ದಕ್ಷಿಣದ ಜೀವನದಿಗಳು. ಭಾರತದ ನದಿಕೊಳ್ಳದ ಅಧ್ಯಯನ ವಿಸ್ಮಯಕಾರಕ ಪರಿಣಾಮಗಳನ್ನು ಹೊರಗೆಡವಿತು. ಕಾವೇರಿಗಿಂತಲೂ ಕೃಷ್ಣೆ ದೊಡ್ಡ ನದಿ. ಮಹಾರಾಷ್ಟ್ರದ ಮಹಾಬಳೇಶ್ವರದಲ್ಲಿ ಹುಟ್ಟಿ ಕರ್ನಾಟಕ ಮತ್ತು ಆಂಧ್ರಗಳಲ್ಲಿ ಹರಿದು ಬಂಗಾಳ ಕೊಲ್ಲಿ ಸೇರುವ ಈ ನದಿ ಸುಮಾರು ೧೩೯೨ ಕಿ.ಮೀ ಕೃಷ್ಣಾ ನದಿ ತೀರದಲ್ಲಿ ವಿಕಾಸಗೊಂಡ ಗ್ರಾಮ–ಪಟ್ಟಣಗಳು, ನೂರು–ನೂರು. ದಕ್ಷಿಣ ಭಾರತದ ಜೀವದಾಯಿನಿ ಕೃಷ್ಣೆ ಅನೇಕ ನೆಲೆಗಳು ಅಭಿವೃದ್ಧಿಗೊಳ್ಳಲು ಕಾರಣ.

ಮಹಾರಾಷ್ಟ್ರದಿಂದ ಹರಿದು ಬರುವ ಕೃಷ್ಣಾ ನದಿ ಚಿಕ್ಕೋಡಿ ತಾಲೂಕಿನ ಮೂಲಕ ಕರ್ನಾಟಕವನ್ನು ಪ್ರವೇಶಿಸಿ, ಅಲ್ಲಿಂದ ರಾಯಬಾಗ ತಾಲೂಕಿಗೆ ಬರುವುದು. ಇದು ಎಷ್ಟೋ ತಾಲೂಕುಗಳಿಗೆ ಗಡಿಯಾಗುತ್ತದೆ. ಚಿಕ್ಕೋಡಿ ತಾಲೂಕಿನ ಮಾಂಜರಿಯ ಮೂಲಕ ಬಾವಾನ ಸವದತ್ತಿಗೆ ಬರುತ್ತದೆ. ಬಾವಾನ ಸವದತ್ತಿ ರಾಯಬಾಗ ತಾಲೂಕಿಗೆ ಕೃಷ್ಣೆಯನ್ನು ಸ್ವಾಗತಿಸುವ ಪ್ರವೇಶ ದ್ವಾರ. ಈ ನದಿ ದಕ್ಷಿಣಕ್ಕೆ ರಾಯಬಾಗ ತಾಲೂಕಿನ ಗ್ರಾಮಗಳಿದ್ದರೆ ಉತ್ತರದ ತೀರದಲ್ಲಿ ಅಥಣಿ ತಾಲೂಕಿನ ಗ್ರಾಮಗಳು.

ಪಶ್ಚಿಮದಿಂದ ಪೂರ್ವಕ್ಕೆ ಹರಿಯುವ ನದಿ ಹಲವು ತಿರುವುಗಳನ್ನು ಪಡೆದು ಅಲ್ಲಲ್ಲಿ ತನ್ನ ದಿಕ್ಕು ಬದಲಿಸಿಕೊಂಡಿದೆ. ಒಮ್ಮೊಮ್ಮೆ ಅಲ್ಲಲ್ಲಿ ಉತ್ತರಾಭಿಮುಖವಾಗಿ ವಹಿಸುತ್ತದೆ. ಸವದತ್ತಿ-ದಿಗ್ಗೇವಾಡಿ-ಜಲಾಲಪುರ-ಭಿರಡಿ-ಚಿಂಚಲಿ-ಕುಡಚಿ-ಗುಂಡವಾಡ-ಶಿರಗೂರ-ಖೆಮಲಾಪುರ - ಸಿದ್ದಾಪೂರ ದಾಟಿ ಸಪ್ತಸಾಗರ ತೀರ್ಥದ ಹತ್ತಿರ ಅಥಣಿ ತಾಲೂಕು ಪ್ರವೇಶಿಸುವುದು. ವಿಶೇಷವೆಂದರೆ ಮೇಲೆ ಉಲ್ಲೇಖಿಸಿದ ರಾಯಬಾಗ ತಾಲೂಕಿನ ನದಿ ತೀರದ ಗ್ರಾಮಗಳೆಲ್ಲವು ಪ್ರಾಚ್ಯ ನೆಲೆಗಳು. ಈಗಿರುವ ಜನವಸತಿ ಪ್ರದೇಶಗಳು ಪ್ರಾಚ್ಯನೆಲೆಗಳಿಲ್ಲದಿರಬಹುದು. ಆದರೆ ಪ್ರತಿಯೊಂದು ಗ್ರಾಮದ ಕ್ಷೇತ್ರವ್ಯಾಪ್ತಿಯಲ್ಲಿ ಹಾಳು ಮಣ್ಣಿನ ಕ್ಷೇತ್ರಗಳಿವೆ, ಹಾಳಾದ ಹಳ್ಳಿಗಳಿವೆ. 'ಹಟ್ಟಿ' ವಿಶೇಷಣದಿಂದ ಕೊನೆಗೊಳ್ಳುವ ಪುಟ್ಟ ಪುಟ್ಟ ಜನವಸತಿ ಪ್ರದೇಶಗಳಿವೆ. ಯಬರಟ್ಟಿ, ಯಲ್ಪಾರಟ್ಟಿ, ಸುಟ್ಟಟ್ಟಿ, ಜೋಡಟ್ಟಿ, ಹುಬ್ಬರವಾಡಿ, ರಾಯಬಾಗ ತಾಲೂಕಿನಲ್ಲಿಯ ಪ್ರಾಚೀನ ಹಟ್ಟಿಗಳು. 'ಹಟ್ಟಿ' ಎಂದರೆ ದನಗಳನ್ನು ಕಟ್ಟುವ ದೊಡ್ಡಿ. ದೀಪಾವಳಿಯನ್ನು ಹಟ್ಟಿ ಹಬ್ಬವೆಂದು ಕರೆಯುವುದು. ಈ ಹಿನ್ನೆಲೆಯಲ್ಲಿಯೇ. ಅಂದು ದನಗಳಿಗೆ ಆರತಿ ಬೆಳಗುತ್ತ ಹಾಡುತ್ತಾರೆ. ಆದ್ದರಿಂದ ದೀಪಾವಳಿಯನ್ನು 'ಹಟ್ಟಿ ಹಬ್ಬ' ಎಂದು ಕರೆಯುವುದು ಸಾಮಾನ್ಯವಾಗಿ 'ಕಲ್ಲು' ಪದದಿಂದ ಕೊನೆಗೊಳ್ಳುವ ಗ್ರಾಮಗಳು ಪ್ರಾಚೀನತೆಯನ್ನು ಹೊಂದಿರುತ್ತವೆ. ಹಿಡಕಲ್, ಕಪ್ಪಲಗುದ್ದಿ, ಖಣದಾಳ ಶಿಲಾ ಸಂಸ್ಕೃತಿಯ ಕುರುಹುಗಳು. ಹಾರೂಗೇರೆ, ಬೆಕ್ಕೇರೆ ಹೀಗೆ 'ಕೆರೆ' ಶಬ್ದದಿಂದ ಅಂತ್ಯಗೊಳ್ಳುವ ಗ್ರಾಮಗಳು ಐತಿಹಾಸಿಕವಾಗಿ ಮಹತ್ವವನ್ನು ಪಡೆದಿರುತ್ತವೆ. 'ಹಾಳ' ಪದದಿಂದ ಗುರುತಿಸಲ್ಪಡುವ ಹಳ್ಳಿಗಳು ಖಂಡಿತವಾಗಿಯೂ ಪ್ರಾಚ್ಯ ನೆಲೆಗಳು. ಖಣದಾಳ, ಬೂದಿಹಾಳ, ಶಿಕನಾಳ, ಇಟನಾಳ, ಬೊಮ್ಮನಾಳ, ಬಿರನಾಳಗಳಲ್ಲಿ ಪ್ರಾಚ್ಯ ಅವಶೇಷಗಳು ಸಿಗುತ್ತವೆ. ಹಿಂದಿನ ಅಧ್ಯಾಯದಲ್ಲಿ ವಿವರಿಸಿದಂತೆ ಬೂದಿಹಾಳ, ಚಿಂಚಲಿ, ಖೆಮಲಾಪೂರ, ಕುಡಚಿಗಳಲ್ಲಿ ಬೂದಿ ದಿಬ್ಬಗಳಿವೆ.

೪.೧ ಬೂದಿ ದಿಬ್ಬಗಳು :

ಬೂದಿ ದಿಬ್ಬಗಳು ಪ್ರಾಚ್ಯ ನೆಲೆಗಳು ಕುರುಹುಗಳೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ರಾಯಬಾಗ ತಾಲೂಕಿನಲ್ಲಿಯ ಶಿಕನಾಳ, ಬೂದಿಹಾಳ, ಖೆಮಲಾಪೂರಗಳಲ್ಲಿ ಗಮನಿಸಿದರೆ ಅವು ತುಂಬಾ ಎತ್ತರವಾಗಿದ್ದವಂತೆ. ಅವುಗಳನ್ನು ನೋಡಿದವರು ಈಗಲೂ ಇದ್ದಾರೆ. ಸುಮಾರು ೨೦ ಅಡಿಗಳಿಗಿಂತಲೂ ಹೆಚ್ಚು ಎತ್ತರವಾಗಿದ್ದವು. ಇಷ್ಟು ಎತ್ತರದ ದಿಬ್ಬಗಳು ಹೇಗೆ ರಚನೆಗೊಂಡವು ಎಂಬುದು ಇಂದಿಗೂ ಸ್ಪಷ್ಟವಾಗಿ ತಿಳಿದು ಬಂದಿಲ್ಲ ಇತಿಹಾಸಕಾರರು ಈ ಬೂದಿ ದಿಬ್ಬಗಳ ರಚನೆ ಕುರಿತು ಹಲವು ಊಹೆಗಳನ್ನು ಮುಂದಿಟ್ಟಿದ್ದಾರೆ. ಆದರೆ ಯಾವ ಸ್ಪಷ್ಟ ನಿಲುವು ಪ್ರಕಟಿಸಿಲ್ಲ. ಪಶುಪಾಲನೆ ಹಂತದಲ್ಲಿ ಪಶುಗಳ ಶಗಣಿಯನ್ನು ಒಂದೆಡೆ ಕಲೆ ಹಾಕಿ ಅದಕ್ಕೆ ಬೆಂಕಿ ಹಚ್ಚಿರಬಹುದೆಂಬುದು ಅವರ ಸಾಮಾನ್ಯ ಊಹೆ. ಆದರೆ ಇಷ್ಟು ಪ್ರಮಾಣದಲ್ಲಿ ಶಗಣಿ ಕಲೆ ಹಾಕಿದರ ಕಾರಣ ಏನಿರಬಹುದು.? ಏಕೆ ಬೆಂಕಿ ಹಚ್ಚಿದರು? ಬೆಂಕಿ ಹಚ್ಚಿ ಬೂದಿ ರಾಶಿ ಸೃಷ್ಟಿಗೊಂಡರು ಏಕೆ ತೆರವುಗೊಳಿಸಲಿಲ್ಲ. ಈ ಬೂದಿ ದಿಬ್ಬಗಳು ಶಿಲಾಯುಗದ ಯಾವ ಘಟ್ಟದಲ್ಲಿ ರಚಿತಗೊಂಡವು.

ಇತ್ಯಾದಿ ಪ್ರಶ್ನೆಗಳು ಇಂದಿಗೂ ಪ್ರಶ್ನೆಗಳಾಗಿಯೇ ಉಳಿದಿವೆ. ಈ ಕುರಿತು ವಿದ್ವಾಂಸರ ಚರ್ಚೆ ಉಲ್ಲೇಖನೀಯ.

"ಕರ್ನಾಟಕ ಹಾಗೂ ಆಂಧ್ರದ ಹಲವು ಸ್ಥಳಗಳಲ್ಲಿ ಶಿಲಾತಾಮ್ರಯುಗದ ಹಂತದಲ್ಲಿ ನೂತನ ಶಿಲಾಯುಗ ನೆಲೆಗಳಲ್ಲಿ ಬೂದಿ ದಿಬ್ಬದ ದಿನ್ನೆಗಳಿವೆ. ಅನೇಕ ಬೂದಿ ದಿನ್ನೆಗಳು ಹಾಳಾಗಿವೆ. ಬಳ್ಳಾರಿ ಜಿಲ್ಲೆ ಕುಡುತಿನಿಯ ಬಳಿ ದೊಡ್ಡ ಬೂದಿ ದಿನ್ನೆ ಇದೆ. ರಾಬರ್ಟ ಬ್ರೂಸ್ ಫೂಟ್ ಅವರು ಇದನ್ನು ನೂತನ ಶಿಲಾಯುಗದೆಂದು ತಿಳಿಸಿದ್ದಾರೆ. ಉತ್ತನೂರು, ಸಂಗನಕಲ್ಲು, ರಾಮಿರೆಡ್ಡಿ ಪಾಳ್ಯದಲ್ಲಿ ಉತ್ಖನನ ನಡೆಸಿ ದೊರೆತ ವಸ್ತುಗಳ ವಿಶ್ಲೇಷಣೆ ಮಾಡಿ ಸಾಂದರ್ಭಿಕ ಸ್ಥಾನ ಗುರುತಿಸಲಾಗಿದೆ. ಅಲ್ಲದೇ ಸಾದರ್ಭಿಕ ಮತ್ತು ಇತರ ನೆಲೆಗಳೊಡನೆ ಹೊಂದಿರುವ ಸಂಬಂಧಗಳಿಂದ ಈ ಕೆಳಕಂಡಂತೆ ತರ್ಕಿಸಲಾಗಿದೆ.

೧) ನೂತನ ಶಿಲಾಯುಗದ ಜನರು ದನಗಳನ್ನು ಸಾಕುತ್ತಿದ್ದು, ಅಲ್ಲಿಯ ಸಗಣಿಯನ್ನು ಸುಡುವುದರಿಂದ ಈ ರೀತಿ ಗುಡ್ಡೆಗಳು ನಿರ್ಮಾಣವಾಗಿರಬೇಕು ಎಂದು ತರ್ಕಿಸಲಾಗಿದೆ.

೨) ನೂತನ ಶಿಲಾಯುಗದ ನಂತರದ ವರ್ಗದವರು ಕಬ್ಬಿಣದ ಲೋಹವನ್ನು ಮಾಡುವ ಕ್ರಿಯೆಯಿಂದ ಇವು ಉಂಟಾಗಿವೆ ಎಂದು ತಿಳಿಯಲಾಗಿದೆ.

೩) ದುಷ್ಟ ಮೃಗಗಳನ್ನು ದೂರವಿಡಲು ಈ ರೀತಿಯ ದಹನ ಕ್ರಿಯೆ ನಡೆಯುತ್ತಿತ್ತೆಂದು ಅಭಿಪ್ರಾಯಪಡಲಾಗಿದೆ.

೪) ಇವು ಶೂರರ ನೆನಪಿನಲ್ಲಿ ದೊಡ್ಡ ಪ್ರಮಾಣದ ಸಗಣಿಯನ್ನು ಸುಡುವ ಆಚರಣೆಯಿರಬೇಕು ಎಂದು ತರ್ಕಿಸಲಾಗಿದೆ.

ಬೂದಿ ಗುಡ್ಡಗಳು ಹುಟ್ಟು ಮತ್ತು ಕಾಲಮಾನ, ಕಾರಣಕರ್ತರ ಬಗ್ಗೆ ವಿರೋಧಾಭಾಸದ ಪ್ರಮೇಯಗಳಿವೆ. ಸಧ್ಯಕ್ಕೆ ಇವುಗಳ ಕಾಲಮಾನವನ್ನು ಕ್ರಿ.ಪೂ. ೨೦೦೦-೬೦೦೦ ಎಂದು ಗುರುತಿಸಲಾಗಿದೆ. ಈ ಮೇಲಿನ ಪ್ರಮೇಯಗಳನ್ನು ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ. ಅದೇನೆಂದರೆ ಅತಿ ದೊಡ್ಡ ಪ್ರಮಾಣದಲ್ಲಿ ದನ-ಕರುಗಳ ಸಗಣಿಯನ್ನು ಹೆಚ್ಚಿನ ಉಷ್ಣತೆಯಲ್ಲಿ ಸುಡುವುದರಿಂದ ಈ ಬೂದಿ ಗುಡ್ಡೆಗಳು ನಿರ್ಮಾಣವಾಗಿವೆ."[೧]

೪.೨ ಬೃಹತ್ ಶಿಲಾಗೋರಿಗಳು :

ರಾಯಬಾಗ ಬೂದಿಹಾಳ ದಾರಿಯಲ್ಲಿರುವ ಹುಬ್ಬರವಾಡಿಯ ಸಮೀಪ ಬೃಹತ್ ಶಿಲಾಗೋರಿಗಳು ಚರಿತ್ರೆಕಾರರ ಗಮನ ಸೆಳೆಯುತ್ತವೆ. ಹುಬ್ಬರವಾಡಿಯ ದಕ್ಷಿಣದಲ್ಲಿ ಎರಡು ಫರ್ಲಾಂಗು ಅಂತರದಲ್ಲಿರುವ ಸಮೂಹ ಗೋರಿಗಳು ರಾಯಬಾಗ ಬೂದಿಹಾಳ ರಸ್ತೆಯ ಪಕ್ಕದಲ್ಲಿಯೇ ೫೦ ರಷ್ಟಿವೆ. ದಕ್ಷಿಣೋತ್ತರವಾಗಿರುವ ರಸ್ತೆಯ ಎರಡು ಬದಿಗಳಲ್ಲಿಯೂ ಪ್ರಾಚೀನ ಮಾನವರ ಗೋರಿಗಳಿವೆ. ರಸ್ತೆಯ ಪಶ್ಚಿಮದಲ್ಲಿ ಗೋರಿಗಳ ಎರಡು ಸಮೂಹಗಳಿವೆ. ಕೆಲವೆಡೆ ಒಂದೊಂದು ಶಿಲಾಗೋರಿಗಳಿವೆ.

೧. ಬಾಲಸುಬ್ರಮಣ್ಯಮ : "ಪುರಾತತ್ವ, ಪುಟ- ೧೨ ಕ.ವಿ.ವಿ. ಹಂಪಿ - ೨೦೦೨

ಅಧ್ಯಯನದ ಸಂದರ್ಭದಲ್ಲಿ ಪತ್ತೆಯಾಗಿರುವ ಏಕೈಕ ಬೃಹತ್ ಶಿಲಾಗೋರಿಗಳ ನೆಲೆಯಿದು. ತಾಲೂಕಿನ ಮತ್ತೆಲ್ಲಿಯೂ ಬೃಹತ್ ಶಿಲಾಗೋರಿಗಳ ಸಮೂಹಗಳು ಕಾಣಲು ಸಿಗುವುದಿಲ್ಲ. ಹುಬ್ಬರವಾಡಿಯಲ್ಲಿರುವ ಶಿಲಾಗೋರಿಗಳ ಸಾಮಾನ್ಯ ರಚನೆ ಹೀಗಿದೆ.



ಹುಬ್ಬರವಾಡಿಯ ಬೃಹತ್ ಶಿಲಾಗೋರಿಗಳು

ಸುತ್ತಲೂ ನಾಲ್ಕು ಬೃಹತ್ ಶಿಲೆಗಳಿದ್ದು, ಅವುಗಳ ಮೇಲೆ ಮತ್ತೊಂದು ಬೃಹತ್ ಕಲ್ಲು ಹೊದಿಕೆಯಂತೆ ಹೊಚ್ಚಲಾಗಿದೆ. ಒಂಥ ಗೋರಿಗಳನ್ನು ಯಮಕನಮರಡಿ ಸಮೀಪದ ಹತ್ತರಗಿಯ ಕೆ.ಇ.ಬಿ. ಸ್ಟೇಶನ್‌ದಲ್ಲಿ ಕಾಣಬಹುದು. ಸ್ಥಳೀಯರು ಹುಬ್ಬರವಾಡಿಯಲ್ಲಿ ಈ ಶಿಲಾಗೋರಿಗಳನ್ನು ಇಂದಿಗೂ ಪೂಜಿಸುತ್ತಾರೆ. ಅವುಗಳನ್ನು ಹಿರಿಯರ ಗೋರಿಗಳೆಂದು ಹೆಮ್ಮೆಯಿಂದ ಹೇಳುತ್ತಾರೆ. ತಮ್ಮ ಹಿರಿಯರ ಶವಸಂಸ್ಕಾರ ಎಲ್ಲಿಯೇ ಆಗಿರಲಿ, ಅಲ್ಲೊಂದು ಅವಶೇಷವನ್ನು ತಂದಿಡುತ್ತಾರೆ. ಹುಬ್ಬರವಾಡಿಗೆ ಹಣಬರಟ್ಟಿ ಎಂದೂ ಸಹ ಹೆಸರು. ಅಲ್ಲಿ ಹಣಬರು ಹೆಚ್ಚಿನ ಸಂಖ್ಯೆಯಲ್ಲಿರುವುದರಿಂದ ಅದಕ್ಕೆ ಈ ಹೆಸರು ಬಂದಿರಬಹುದು. ಅದು ಅದರ ಪ್ರಾಚೀನ ಹೆಸರೂ ಆಗಿರಬೇಕು.

ಹುಬ್ಬರವಾಡ> ಹುಬ್ಬರವಾಡಿಯಾಗಿರಬೇಕು. 'ಹುಬ್ಬ' ಎಂಬುದು ಪೂರ್ವ ಪದದ ತದ್ಭವ. ಪೂರ್ವಾ ಮಳೆಗೆ ನಮ್ಮಲ್ಲಿ ಹುಬ್ಬಾ ಮಳೆ ಎಂದು ಕರೆಯುತ್ತಾರೆ. ಪೂರ್ವಕರ > ಹಿರಿಯರ ಬಾಡ ಕಾಲಕ್ರಮೇಣ ಹುಬ್ಬರವಾಡ ಆಗಿರಬೇಕು. ಒಟ್ಟಿನಲ್ಲಿ ಹುಬ್ಬರವಾಡ ಪ್ರಾಚ್ಯ ನೆಲೆಯನ್ನು ಸೂಚಿಸುತ್ತದೆ.

ಹುಬ್ಬರವಾಡದ ಬೃಹತ್ ಶಿಲಾಗೋರಿಗಳು ಇಂದು ಅಪಾಯದ ಅಂಚಿನಲ್ಲಿವೆ. ಇವು ಮೊರಡಿ ಪ್ರದೇಶದಲ್ಲಿದ್ದು, ಅದು ಕೃಷಿಗೆ ಅಯೋಗ್ಯವಾದ ಭೂಮಿ. ಈಗ ಅದನ್ನು ಕೃಷಿಗೆ ಹದಗೊಳಿಸುವ ಕಾರ್ಯ ಆರಂಭಗೊಂಡಿದೆ. ಇನ್ನು ಕೆಲವೇ ವರ್ಷಗಳಲ್ಲಿ ಈ ಶಿಲಾಗೋರಿಗಳು ಮಾಯವಾಗುತ್ತವೆ. ಆದ್ದರಿಂದ ಸರಕಾರ ಇವುಗಳ ರಕ್ಷಣೆಗೆ ಮುಂದಾಗುವ ಅಗತ್ಯವಿದೆ.



೪.೩ ಅಧ್ಯಯನದ ಫಲಿತಗಳು :

೧. ಈ ನಿಬಂಧದಲ್ಲಿ ಅನೇಕ ಪ್ರಾಚ್ಯ ನೆಲೆಗಳನ್ನು ಪ್ರಪ್ರಥಮಾವಿ ಗುರುತಿಸಲಾಗಿದೆ. ಇದುವರೆಗೆ ಇತಿಹಾಸ ತಜ್ಞರು ರಾಯಬಾಗ ತಾಲೂಕಿನಲ್ಲಿ ಕೇವಲ..ಒು.೪!! ಪ್ರಾಚ್ಯ ನೆಲೆಗಳನ್ನು ಗುರುತಿಸಿದ್ದರು. ಇವುಗಳಲ್ಲಿ ಹೊರತುಪಡಿಸಿ ಇಪ್ಪತ್ತು ಪ್ರಾಚ್ಯ ನೆಲೆಗಳನ್ನು ಶೋಧಿಸಿದುದು ಈ ಅಧ್ಯಯನದ ಅತ್ಯಂತ ಪ್ರಮುಖ ಕೊಡುಗೆ.

೨. ರಾಯಬಾಗ ತಾಲೂಕಿನಲ್ಲಿ ಎರಡು ಬೂದಿ ದಿಬ್ಬಗಳು ಮಾತ್ರ ಪತ್ತೆಯಾಗಿದ್ದವು. ಅವು ಕುಡಚಿಯಲ್ಲಿಯವು. ಂಕನಾಳದಲ್ಲಿ ಮಾತ್ರ ಬೂದಿ ದಿಬ್ಬದ ಅವಶೇಷಗಳಿದ್ದು ಡಾ. ಅ. ಸುಂದರ ಗುರುತಿಸುವ ಕುಡಚಿಯ ಮತ್ತೊಂದು ನೆಲೆಯಲ್ಲಿ ಬೂದಿ ಬಂಡೆಗಳ ಅವಶೇಷಗಳು ಕಿಂಚಿತ್ತೂ ಸಿಗುವುದಿಲ್ಲ.

ಈ ಅಧ್ಯಯನದ ತಾಲೂಕಿನ ಮತ್ತೆ ಮೂರು ಬೂದಿ ದಿಬ್ಬಗಳನ್ನು ಶೋಧಿಸಿ ವಿವರಗಳನ್ನು ನೀಡುತ್ತದೆ. ಬೂದಿಹಾಳದ ಲಗಮವ್ವನ ಗುಡಿಯ ಹತ್ತಿರದ ಬೂದಿ ದಿಬ್ಬ ಬೃಹತ್ತಾದುದು. ಗುಡಿಯ ಸುತ್ತಲಿನ ಹತ್ತು ಎಕರೆ ವಿಸ್ತಾರವಾದ ಕ್ಷೇತ್ರದಲ್ಲಿ ಬೂದಿ ಉಂಡೆಗಳು ಹರಡಿವೆ. ಕುಡಚಿಯ ಂಕನಾಳದಷ್ಟೇ ವಿಸ್ತಾರ ಹಾಗೂ ಪ್ರಾಚೀನ ನೆಲೆ ಇದು. ಚಿಂಚಲಿಯ ಹಾಲುಹಳ್ಳದ ಪಕ್ಕದಲ್ಲಿ ಎರಡು ಬೂದಿ ದಿಬ್ಬಗಳನ್ನು ಶೋಧಿಸಲಾಗಿದೆ. ಇದರಂತೆ ಖೆಮಲಾಪೂರ ಸಮೀಪದ ಒಂದು ಹಾಳು ಪ್ರದೇಶದಲ್ಲಿ ಮತ್ತೊಂದು ಬೂದಿ ದಿಬ್ಬದ ಅವಶೇಷ ಶೋಧಿಸಲಾಗಿದೆ. ಇದನ್ನು ಈಗಲೂ ಬೂದಿಹಾಳ ಎಂದೇ ಕರೆಯುತ್ತಾರೆ. ರಾಯಬಾಗ ತಾಲೂಕಿನಲ್ಲಿ ಎರಡು ಬೂದಿಹಾಳಗಳಿವೆ. ಒಂದು ಬೂದಿಹಾಳ ಈಗಲೂ ಅಸ್ತಿತ್ವದಲ್ಲಿದೆ. ಮತ್ತೊಂದು ಹಾಳಾಗಿದೆ. ಈ ಎಲ್ಲ ಬೂದಿ ದಿಬ್ಬಗಳನ್ನು ಗಮನಿಸಿದರೆ ತಾಲೂಕಿನಲ್ಲಿ ಒಟ್ಟು ಐದು ಬೂದಿ ದಿಬ್ಬಗಳಿವೆ.



ಬೂದಿಹಾಳದಲ್ಲಿ ಸಿಕ್ಕಿರುವ ಒಳಕಲ್ಲು



೩. ಕೆಲವು ಪ್ರಾಚ್ಯ ಅವಶೇಷಗಳನ್ನು ಮೊತ್ತಮೊದಲು ಅನ್ವೇಷಿಸಲಾಗಿದೆ. ಬೂದಿಹಾಳ ಲಗಮವ್ವನ ಗುಡಿಯ ಪ್ರದೇಶದಲ್ಲಿ ಒರಳು ಸಿಕ್ಕಿದ್ದನ್ನು ಈ ಹಿಂದೆ ಉಲ್ಲೇಖಿಸಲಾಗಿದೆ.

೪. ಖೆಮಲಾಪೂರ ಸಮೀಪದ ಬೂದಿಹಾಳ (ಈಗ ಅಸ್ತಿತ್ವದಲ್ಲಿಲ್ಲ)ದಲ್ಲಿ ಒಂದು ರೇಖಾ ಚಿತ್ರ ಸಿಕ್ಕಿದೆ. ಈ ರೇಖಾ ಚಿತ್ರವನ್ನು ಬಂಡೆಗಲ್ಲಿನ ಮೇಲ ಕೊರೆಯಲಾಗಿದೆ. ಅದರಲ್ಲಿ ಒಂದು ಪ್ರಾಣಿಯ ಆಕೃತಿಯಿದ್ದು, ಅದರ ಸಮೀಪವೇ ಡಮರುಗದಂತೆ ಕಾಣುವ ಆಕೃತಿಯಿದೆ. ಅದು ಡಮರುಗವೇ ಆದಲ್ಲಿ ಶೈವ ಸಂಸ್ಕೃತಿಯ ಪ್ರಾಚೀನತೆಯನ್ನು ಗುರುತಿಸುವಲ್ಲಿ ಮುಖ್ಯ ಆಧಾರವಾಗುತ್ತದೆ.



ಖೆಮಲಾಪೂರದಲ್ಲಿ ದೊರೆತ ರೇಖಾಚಿತ್ರ

೫. ಚಿಂಚಲಿಯ ಜಂಬಿಟ್ಟಿಗೆಗಳು ಕುತೂಹಲ ಕೆರಳಿಸುತ್ತವೆ. ಇವು ಹಾಲುಹಳ್ಳದ ದಡದಲ್ಲಿ ಪಶ್ಚಿಮದ ದಿಕ್ಕಿನಲ್ಲಿವೆ. ಇವು ಎರಡು ನೆಲೆಗಳಲ್ಲಿ ಕಾಣಸಿಗುತ್ತವೆ. ಸ್ಥಳೀಯರು ಇವುಗಲ ಕುರಿತು ದಂತ ಕಥೆಗಳನ್ನು ಹೆಣೆದಿದ್ದಾರೆ. ಈ ಜಂಬಿಟ್ಟಿಗೆಗಳು ಇರುವ ಪ್ರದೇಶಲ್ಲಿ ಮಡಕೆ, ಎಲುವಿನ ಚೂರು, ಶಿಲಾಯುಧಗಳು ಸಿಗುತ್ತವೆ. ಇವುಗಳನ್ನು ಗಮನಿಸಿದರೆ ಆ ಪ್ರಾಚ್ಯ ನೆಲೆಗಳು ಕಾಲಾವಧಿ ಗುರುತಿಸಬಹುದು.

೬. ಪ್ರಾಚೀನ ಮಾನವರ ಪ್ರಕೃತಿಯ ವೈಚಿತ್ರ್ಯಗಳಲ್ಲಿಯೇ ದೇವರ ಅಸ್ತಿತ್ವವನ್ನು ಕಂಡವರು. ಅಂತಹ ಹಲವು ತಾಣಗಳನ್ನು ಈ ಅಧ್ಯಯನ ಗುರುತಿಸಿದೆ. ರಾಯಬಾಗ ದಕ್ಷಿಣದಲ್ಲಿ ಚಿಕ್ಕೋಡಿ ತಾಲೂಕಿಗೆ ಹೊಂದಿಕೊಂಡಿರುವ ಪ್ರದೇಶದಲ್ಲಿ ಇಂಥ ಕ್ಷೇತ್ರಗಳಿವೆ. ಬಸವನಗುಡ್ಡ, ರಾಮನಗುಡ್ಡ, ಮಾವಿನಹೊಂಡ, ದೇವನಕಟ್ಟೆ ಇವೆಲ್ಲ ದೈವ ನೆಲೆಗಳು ಬಸವನ ಗುಡ್ಡದಲ್ಲಿರುವ ಕೊರಕಲು ಯೋಗಿರೂಪದಲ್ಲಿದೆ. ಅದರ ಮೇಲೆ ಒಂದು ಹೊಂಡವಿದೆ. ಅಲ್ಲಿಂದ ನೀರು ಆ ಕೊರಕಲಿನಲ್ಲಿ ಜಿನುಗುತ್ತದೆ. ಅದು ಪ್ರಾಚೀನ ಮಾನವನ ಆರಾಧನಾ ನೆಲೆಯಾಗಿರಬಹುದು. ಈಗ ಅಲ್ಲೊಂದು ಶಿವಲಿಂಗ ಇದೆ. ಲಿಂಗ ಮತ್ತು ಯೋಗಿ ಪೀಠಗಳ ಪರಿಕಲ್ಪನೆಗಳು ಮೂಡಿದ್ದೇ ಇಂಥ ಪ್ರಾಕೃತಿಕ



ವೈಚಿತ್ರ್ಯಗಳಲ್ಲಿ.

೭. ರಾಯಬಾಗ ತಾಲೂಕಿನಲ್ಲಿ ಮೂರು ಮುಖ್ಯ ಹಳ್ಳಗಳಿದ್ದು ಅವುಗಳ ದಡದಲ್ಲಿಯೇ ಪ್ರಾಚೀನ ನೆಲೆಗಳು ರೂಪಗೊಂಡಿವೆ.

೧. ಹಾಲು ಹಳ್ಳ

೨. ಹಿರ್‍ಯಾಳ

೩. ಕರ್ಕಾನದಿ ಎಂದು ಕರೆಯಲ್ಪಡುವ ಹಳ್ಳ.

೧. ಹಾಲು ಹಳ್ಳ

ಇದು ನಿಡಗುಂದಿಯ ಬೆಟ್ಟದಲ್ಲಿ ಸೈಫಾನ್ ಎಂಬ ತೋಟದಲ್ಲಿ ಹುಟ್ಟಿಕೊಳ್ಳತ್ತದೆ. ಬೊಮ್ಮನಾಳ, ಚಿಂಚಲಿಗಳ ಮೂಲಕ ಹರಿದು ಕೃಷ್ಣಾ ನದಿ ಸೇರುತ್ತದೆ. ಇದು ದಕ್ಷಿಣದಲ್ಲಿ ಹುಟ್ಟಿ ಉತ್ತರಕ್ಕೆ ಪ್ರವಹಿಸುತ್ತದೆ. ಇದರ ದಡದ ಮೇಲೆ ಮೂರು ಪ್ರಾಚ್ಯ ನೆಲೆಗಳನ್ನು ಶೋಧಿಸಲಾಗಿದೆ.

೧. ನಿಡಗುಂದಿ

೨. ಬೊಮ್ಮನಾಳ

೩. ಚಿಂಚಲಿ

ಪ್ರಾಯಶಃ ಹಾಲುಹಳ್ಳವೆಂದು ಕರೆಯಲಾಗುವ ತೊರೆಯ ಪ್ರಾಚೀನ ಹೆಸರು ಹಾಳ ಹಳ್ಳವಾಗಿರಬೇಕು. ನಿಡಗುಂದಿಯ ಹಾಳದ ಹಿಂದೆಯೇ ಈ ಹಳ್ಳ ಹುಟ್ಟಿಕೊಳ್ಳುತ್ತದೆ.

೨. ಹಿರ್‍ಯಾಳ

ಹಿರ್‍ಯಾಳದ ಮೂಲ ಹೆಸರು ಹಿರೆ ಹಳ್ಳವಾಗಿದೆಯೋ ಅಥವಾ ಹಿರ್‍ಯಾರ ಹಾಳ ಆಗಿದೆಯೋ ತಿಳಿಯದು. ತೇರದಾಳ ಹಾರೂಗೇರಿ ನಡುವೆ ಇದು ಹರಿಯುತ್ತದೆ. ಎರಡು ಗ್ರಾಮಗಳಿಗೆ ಇದುವೇ ಗಡಿಯಾಗಿದೆ. ಈ ಪ್ರದೇಶವನ್ನು ಅಲ್ಲಿಯ ಜನರು ಹಿರ್‍ಯಾಳ ಎಂದು ಕರೆಯುತ್ತಾರೆ. ಅಲ್ಲಿ ಹರಿಯುವ ಹಳ್ಳಕ್ಕೂ ಅದೇ ಹೆಸರು ಬಂದಿದೆ. ಹಿರ್‍ಯಾಳ ಎಂದು ಕರೆಯಲಾಗುವ ಪ್ರದೇಶದಲ್ಲಿ ಬೃಹತ್ ಶಿಲಾಗೋರಿಗಳಿದ್ದಿರಬಹುದಾದ ಸಾಧ್ಯತೆಗಳಿವೆ. ಏಕೆಂದರೆ ತೇರದಾಳ, ಹಾರೂಗೇರಿ, ಯಬರಟ್ಟಿ ಪ್ರಾಚ್ಯ ನೆಲೆಗಳು. ಈ ಗೋರಿಗಳು ಹಾಳಾಗಿವೆ. ಕಪ್ಪು ಮಣ್ಣಿನ ಈ ಪ್ರದೇಶ ಪ್ರಾಚೀನ ಮಾನವನ ವಸತಿ ಪ್ರದೇಶ ಆಗಿರುವ ಸಾಧ್ಯತೆಗಳು ಹೆಚ್ಚು.

'ಹಿರ್‍ಯಾಳ' ರಾಯಬಾಗ ತಾಲೂಕಿನ ಖಣದಾಳದ ಬೆಟ್ಟದಲ್ಲಿ ಜನಿಸುತ್ತದೆ. ಹಿಡಕಲದ ಮೂಲಕ ಹಾರೂಗೇರಿಗೆ ಬಂದು ಹಿರ್‍ಯಾಳದಿಂದ ಹಾಯ್ದು ಶೇಗುಣಸಿ ಸಮೀಪ ಕೃಷ್ಣಾ ನದಿಯನ್ನು ಕೂಡುತ್ತದೆ. ಈ ಹಳ್ಳದ ದಡದಲ್ಲಿರುವ ಎಲ್ಲ ಗ್ರಾಮಗಳು ಪ್ರಾಚ್ಯ ನೆಲೆಗಳು.

ಕರ್ಕಾ ನದಿಯೆಂದು ನಂಬಲಾಗಿರುವ ಬಾಗಿ ಬೆಟ್ಟದಲ್ಲಿ ಹುಟ್ಟುವ ಹಳ್ಳ ಪೂರ್ವದಿಂದ

ಪಶ್ಚಿಮಕ್ಕೆ ಹರಿದು ಕೃಷ್ಣಾ ನದಿಯನ್ನು ಸೇರುತ್ತದೆ. ಬಾಗಿ ಬೆಟ್ಟವೇ ಇದರ ಉಗಮಸ್ಥಾನ. ಮಾವಿನಹೊಂಡ ದೇವನಕಟೆ, ಬೂದಿಹಾಳ, ಇದರ ದಡದ ಮೇಲಿರುವ ಗ್ರಾಮಗಳು ಇವೆಲ್ಲ ಪ್ರಾಚ್ಯ ನೆಲೆಗಳು. ಹುಬ್ಬರವಾಡಿ ಬೃಹತ್ ಶಿಲಾಗೋರಿಗಳು ಈ ಹಳ್ಳದ ದಕ್ಷಿಣದಲ್ಲಿ ಎರಡು ಕಿ.ಮೀ ಅಂತರದಲ್ಲಿದೆ. ಇದು ಮಾವಿನಹೊಂಡ ಗ್ರಾಮದ ಹತ್ತಿರ ಒಂದು ವಿಶಾಲ ಸರೋವರವನ್ನು ನಿರ್ಮಿಸಿರಬೇಕು. ಈ ಪ್ರದೇಶ ತುಂಬಾ ರಮಣೀಯವಾಗಿದೆ. ಬಾಗಿ ಬೆಟ್ಟದಲ್ಲಿ ಒಂದು ಗುಹೆ ಇದೆ.

೪.೪ ಅಧ್ಯಯನದ ಅವಕಾಶಗಳು :

ಪ್ರಸ್ತುತ ನಿಬಂಧ ಈ ಪ್ರವೇಶಿಕೆ ಮಾತ್ರ ಪ್ರಾಚ್ಯ ನೆಲೆಗಳ ಅಧ್ಯಯನಕ್ಕೆ ಉತ್ಖನನ ಅಗತ್ಯವಾದುದು. ಕೆಲವು ನೆಲೆಗಳಲ್ಲಿ ಉತ್ಖನನ ಕೈಗೊಳ್ಳುವ ಅಗತ್ಯವಿದೆ. ಈ ನಿಬಂಧದಲ್ಲಿ ಉತ್ಖನನಕ್ಕೆ ಒಳಪಡಬೇಕಾದ ಸ್ಥಳಗಳನ್ನು ಸಾದರ್ಭಿಕವಾಗಿ ಸೂಚಿಸಲಾಗಿದೆ. ಹೀಗೆ ಉತ್ಖನನಗಳ ಮೂಲಕ ಈ ನೆಲೆಗಳನ್ನು ಅಧ್ಯಯನಕ್ಕೊಳಪಡಿಸುವ ಅಗತ್ಯವಿದೆ. ಅದಕ್ಕೆ ಪೂರ್ವ ಪೀಠಿಕೆಯಾಗಿ ಒಂದು ಸ್ಥೂಲ ನಕ್ಷೆಯನ್ನು ಒದಗಿಸಿದ ಶ್ರೇಯಸ್ಸು ಈ ನಿಬಂದಕ್ಕೆ ಸಲ್ಲುತ್ತದೆ ಎಂಬ ವಿಶ್ವಾಸ. ಈ ಕ್ಷೇತ್ರದಲ್ಲಿ ಅಧ್ಯಯನ ನಡೆಸುವವರು. ಒಂದೊಂದು ನೆಲೆಯ ಕುರಿತು. ವ್ಯಾಪಕವಾದ ಕ್ಷೇತ್ರ ಕಾರ್ಯ ಕೈಗೊಳ್ಳಬೇಕು. ಆಗ ನಿಖರವಾದ ಅಧ್ಯಯನ ಸಾಧ್ಯವಾಗಬಲ್ಲದು. ಈ ಕ್ಷೇತ್ರದಲ್ಲಿ ಅಧ್ಯಯನ ಕೈಗೊಳ್ಳುವವರಿಗೆ ಒಂದು ದೊಡ್ಡ ಅವಕಾಶ ರಾಯಬಾಗ ತಾಲೂಕಿನಲ್ಲಿದೆ.

ಪ್ರಾಚ್ಯ ಅವಶೇಷಗಳು


ಖಣದಾಳ ಪ್ರಾಚ್ಯ ನೆಲೆಯಲ್ಲಿ ದೊರೆತ ಕಲ್ಲಿನ ಅವಶೇಷಗಳು


ಖಣದಾಳ ಪ್ರಾಚ್ಯ ನೆಲೆಯಲ್ಲಿ ದೊರೆತ ಮಡಕೆಯ ಚೂರುಗಳು


ಹಾರೂಗೇರಿಯ ಉಪ್ಪಿನ ಮಾಳ ಪ್ರಾಚ್ಯ ನೆಲೆ


ರಾಯಬಾಗದ ಮಧ್ಯಭಾಗದಲ್ಲಿಯ ಪ್ರಾಚೀನ ನೆಲೆ


ರಾಯಬಾಗದ ನ್ಯೂ ಹೈಸ್ಕೂಲ ಪಕ್ಕದ ಪ್ರಾಚ್ಯ ನೆಲೆ


ನಂದಿಕುರಳಿ ಪಂಚಲಿಂಗೇಶ್ವರ ಎದುರಿನ ಪ್ರಾಚ್ಯ ನೆಲೆ















ATHANI
TALUKA
CHIKKODI
TALUKA
JAMKHANDI
TALUKA
MUDHOL
TALUKA
KRISHNA RIVER
RAIBAG
TO KAGAWAD
TO GOTUR
TO SANKARATTI
TO TERDAL
TO BAGALKOT
TO MUDALGI
TO GOKAK
TO BELGAUM
FROM NIPPANI
NAGARMUNOLI
RABAKAVI
GUNDWAD
KUDCHI
19.70
22.40
SHIRGUR
SIDDAPUR
KHEMALAPUR
PARAMANANDWADI
CHIKUD
SUTTATI
5.46
SH53
SH73
SH31
SH18
SH17
14.51
CHINCHALI
CHINCHALI R.S
YELPARATTI
KOLIGUDD
SEGUNSHI
49.35
0.8
0.00
SAUNDATTI
DIGGEWADI (OLD)
JALAPUR
BHIRDI
ANKLI
1.4
3.93
51.60
DIGGEWADI (NEW)
WADI
NASLAPUR
KENCHANHATTI
YEDRAVI
10.70
BEKKRI
NILATI
MORAB
ALANKNUR
BAD-BYAKUD
YEGARATTI
44.49
0.0
HURUGERI
NANDIKURLI
12.19
0/0
15.6
ALAGWADI
NIDAGUNDI
BOMNAL
NAGRAL
HULLYAL PARK
HANABARWADI
KEMPATTI
HIDKAI
BIRNAL
BASTWAD
MUGALKHOD
3.00
HUBARATTI
SHAHUPARK
SHAHUPARK COLONY
BYAKUD
MEKHALI
BAVACHI
BUDIHAL
KHANDAL
PALBHAVI
SULTANPUR
HANDIGUNDI
KAPPALGUDDI
MARKUDI
39.15
DEVANKATTI
MAVINHONDA
R.S TEMPLE
SANSUDDI
ITNAL
MARADI
59.66
32.75
KATAKBHAVI
GIRINAIKWADI
20.80
CHIKODI R.S
4.00
12.60
BHENWAD
MANTUR
DEVAPUR-HATTI
GURLAPUR
72.15
30.20
27.50
39.20
18.83
43.00
57.00
15.89
KABBUR
JODATTI
NIPNAL
KANKANWADI



ಬಸವನ ಬೆಟ್ಟದಲ್ಲಿ ಚಾರಣ...



ನಮ್ಮ ಊರು ನ



...ಾಗಿ ಬೆಟ್ಟದಲ್ಲೊಂದು ಮಿನಿ ಮಹಾಬಳೇಶ್ವರ

...ಣಿ ವಾರ್ತೆ



ಬಸವನ ಬೆಟ್ಟದ ಕಣಿವೆಯ ದೃಶ್ಯ.

...ಗೇರಿ: ನಾವು ದೂರದೂರದ ಪ್ರವಾಸಿ ...ನ್ನು ಹುಡುಕಿಕೊಂಡು ಹೋಗುತ್ತೇವೆ. ...ಮ್ಮ ಸನಿಹದಲ್ಲೇ ಇರುವ ಸುಂದರ ತಾಣ ...ೋಡುವುದೇ ಇಲ್ಲ. ರಾಯಬಾಗ ತಾಲ್ಲೂ ...ವ ಬಾಗಿಬೆಟ್ಟ ಮಿನಿ ಮಹಾಬಳೇಶ್ವರವೆಂ ...ಬಹಳಷ್ಟು ಜನರಿಗೆ ಗೊತ್ತಿಲ್ಲ. ಆ ಬೆಟ್ಟ ...ತ್ತಿ ಸೂರ್ಯೋದಯ ಹಾಗೂ ಸೂರ್ಯಾಸ್ತಗ ...ೋಡುವುದೇ ರಮಣೀಯ ಅನುಭವ.

...ಯ ನಿಸರ್ಗ ಸಹಜ ಗವಿ ಹಾಗೂ ನೀರಿನ ...ಗಳು ನಮ್ಮನ್ನು ಚಕಿತಗೊಳಿಸುತ್ತದೆ. ...ಕಾಲದಲ್ಲಿ ರಾಯಬಾಗದ ಪರಿಸರವನ್ನು ...ಡು ಎಂದು ಕರೆಯುತ್ತಿದ್ದರು. ಈ ಪ್ರದೇಶ ...ಾಕಷ್ಟು ಎತ್ತರ ಮತ್ತು ವಿಸ್ತಾರವಾದ ...ಗುಡ್ಡಗಳಿದ್ದು, ಅವುಗಳನ್ನು ಬಾಗಿಗುಡ್ಡಗ ... ಕರೆಯುವರು. ಬಾಗಿಗುಡ್ಡಗಳನ್ನು ...ದು ಚಾರಣದ ದಿವ್ಯಾನುಭವ.

...ಯಬಾಗದಿಂದ ಬೂದಿಹಾಳಕ್ಕೆ ಬಂದು ... ಒಂದೂವರೆ ಕಿ.ಮೀ. ದಕ್ಷಿಣಕ್ಕೆ ಹೋದರೆ ...ಗುಡ್ಡ ಎದುರಾಗುತ್ತದೆ. ಇನ್ನೂರು ಅಡಿಗ ...ಎತ್ತರವಿರುವ ಈ ಬೆಟ್ಟವನ್ನು ಹತ್ತಲು ... ದಾರಿಗಳಿವೆ. ಒಂದು ಕಾಲುದಾರಿ ...ಂದು ಬಂಡಿದಾರಿ. ಕಾಲುದಾರಿಯಲ್ಲಿ ...ರೆ ಕೊಳ್ಳವೊಂದು ಸಿಗುತ್ತದೆ. ಆ ಕೊಳ್ಳದ



ರಾಮನ ಬೆಟ್ಟದಲ್ಲಿರುವ ಪ್ರಾಚೀನ ಮಾನವನ ಗುಹೆ.

...ಮೇಲೆ ಶಿವಾಲಯವಿದ್ದು ಆದರ ಮುಂದೆ ...ಹೊಂಡವಿದೆ. ಅದು ಸದಾಕಾಲ ತುಂಬಿ ಕೊಂಡಿರುತ್ತದೆ. ಹೊಂಡದ ಕೆಳಭಾಗದಲ್ಲಿ ಹುಣಸಿ ಹೊತ್ತ ನಾಲ್ಕೈದು ಮರಗಳಿವೆ. ಬಸವನಗುಡ್ಡದ ಮೇಲೆ ಸಾಲು ಸಾಲು ಗಾಳಿಯಂತ್ರಗಳಿವೆ. ಬೆಟ್ಟದಲ್ಲಿ ರಾಮಸ್ವಾಮಿ ಎಂಬ ಯೋಗಿಯ ಸಮಾಧಿಯಿದೆ.

ಬೂದಿಹಾಳದಿಂದ ಪೂರ್ವಕ್ಕೆ ದೇವನಕಟ್ಟೆ ದಾಟ ಮಾವಿನಹೊಂಡದ ದಾರಿಯಲ್ಲಿ ಸಾಗಿದರೆ ರಾಮನಗುಡ್ಡ ಎದುರಾಗುತ್ತದೆ. ರಾಮನಗುಡ್ಡದ ಸೊಗಡು ಮಹಾಬಳೇಶ್ವರದ ಸಂಭ್ರಮವನ್ನು ಅಕ್ಷರಶಃ ನೆನಪಿಸುತ್ತದೆ. ದೇವನಕಟ್ಟೆ-ಮಾವಿನಹೊಂಡ-ರಾಮನಕಟ್ಟೆ-ರಾಮತೀರ್ಥಗಳ ನಡುವಿನ ಪರಿಸರ ಪ್ರಾಚೀನ ಕಾಲದಲ್ಲೊಂದು ಸರೋವರವಾಗಿದ್ದದ್ದು ಗೋಚರಿಸಲಿದೆ. ಸುಮಾರು ಐದುನೂರು ಎಕರೆಗಳಷ್ಟು ವಿಸ್ತಾರವಾದ ತಗ್ಗು ಪ್ರದೇಶ ಬೆಟ್ಟಗಳಿಂದ ಸುತ್ತುವರೆದು ಒಂದು ತಟ್ಟೆಯಂತೆ ಕಾಣುತ್ತದೆ. ಅದೇ ಕಾರಣಕ್ಕೆ ಇದನ್ನು ಮಾವಿನಹೊಂಡ ಎಂದು ಕರೆದಿರಬೇಕು. ಹೊಂಡ ಎಂದರೆ ಸರೋವರ. ರಾಮನಗುಡ್ಡದ ಪಶ್ಚಿಮದ ಕೊರಕಲಿನಲ್ಲಿ ಒಂದು ಸಣ್ಣ ಝರಿ ಇದ್ದು, ಇದು ಕರ್ಣಾವತಿ ನದಿಯ ಉಗಮಸ್ಥಾನವೆಂದು ಸ್ಥಳೀಯರು ಹೇಳು ತ್ತಾರೆ. ಈಗ ನದಿಯಿಲ್ಲ. ಮಳೆ ಕಡಿಮೆಯಾದ್ದರಿಂದ ಕಾಡು ಇಲ್ಲ. ಮಳೆಗಾಲದಲ್ಲಿ ತುಂಬಿ ಹರಿಯುವ, ಬೇಸಿಗೆಯಲ್ಲಿ ಬತ್ತುವ ಹಳ್ಳವೊಂದು ಹರದಿದೆ. ಅದು ಕರ್ಣಾವತಿ ನದಿಯೆಂಬುದು ಸ್ಥಳೀಯರ ಭಾವನೆ. ಮಾವಿನಹೊಂಡ ದಾಟ ಭೆಂಡವಾಡಕ್ಕೆ ಹೋಗುವ ದಾರಿಯಲ್ಲಿ ರಾಮನಕಟ್ಟೆ ಎಂಬ ತೀರ್ಥಕ್ಷೇತ್ರವಿದೆ. ಅಲ್ಲಿಂದಲೇ ರಾಮನಗುಡ್ಡದ ಆರಂಭ. ರಾಮ-ಲಕ್ಷ್ಮಣ-ಸೀತೆ ಒಂದು ರಾತ್ರಿ ನಂದಿಕುರಳಿಯಲ್ಲಿ ತಂಗಿ, ವಿಹಾರಕ್ಕೆ ಈ ಬೆಟ್ಟಕ್ಕೆ ಬಂದಾಗ ಸೀತೆಗೆ ಬಾಯಾರಿಕೆಯಾಯಿತಂತೆ. ಆಗ ರಾಮ ಬಿಲ್ಲಿಗೆ ಬಾಣ ಹೂಡಿ ನೆಲಕ್ಕೆ ಎಸೆದು ತೀರ್ಥೋದ್ಭವಕ್ಕೆ ಕಾರಣನಾದನೆಂಬ ಪುರಾಣ ಕಥೆಯಿದೆ. ಇನ್ನೊಂದು ಕಥೆಯ ಪ್ರಕಾರ ಸೀತೆಗೆ ಲಿಂಗಾರ್ಚನೆಗೆ ಕೃಷ್ಣೆಯ ನೀರು ಬೇಕಾಯಿತಂತೆ. ಆಗ ರಾಮ ಬಾಣ ಎಸೆದು ಕೃಷ್ಣೆಯನ್ನೇ ಇಲ್ಲಿಗೆ ಕರೆ ತಂದನಂತೆ. ಈ ಹೊಂಡ ಬೇಸಿಗೆ-ಮಳೆಗಾಲ ಸದಾ ಕಾಲ ನೀರಿನಿಂದ ತುಂಬಿರುತ್ತದೆ. ಮಳೆಗಾಲದಲ್ಲಿ ಉಕ್ಕಿ ಹರಿಯುತ್ತದೆ. ಅದರ ಆಳ ಎಷ್ಟಿದೆಯೆಂದು ತಿಳಿದಿಲ್ಲ. ಹೊಂಡದ ಪಶ್ಚಿಮದಲ್ಲಿ ಶಿವಾಲಯ ವಿದೆ. ಅಲ್ಲಿಂದ ಒಂದು ಫರ್ಲಾಂಗ್ ಮುಂದೆ ಹೋದರೆ ರೇವಣಸಿದ್ದೇಶ್ವರ ದೇವಾಲಯವಿದೆ.

ರಾಮನಕಟ್ಟೆಯಿಂದ ಐದು ಕಿ.ಮೀ. ಮೋಟಾರ್ ರಸ್ತೆಯಲ್ಲಿ ಬೆಟ್ಟ ಸುತ್ತಿ ಸುತ್ತಿ ಮೇಲೆ ಏರಿದರೆ ರಾಮನಗುಡ್ಡದ ದರ್ಶನವಾಗಲಿದೆ. ಆ ಬೆಟ್ಟದ ಮೇಲೆ ನಿಂತು ನೋಡಿದರೆ ಸಮಗ್ರ ರಾಯಬಾಗ ತಾಲ್ಲೂಕನ್ನೇ ಕಾಣಬಹುದು. ಪಶ್ಚಿಮ ದಿಕ್ಕಿನಲ್ಲಿ ಮಣ್ಣಿನ ಗುಹೆಯಿದ್ದು, ಅದರ ಪಕ್ಕದಲ್ಲಿಯೇ ಜೋಗಪ್ಪನ ಪಡಿಯಿದೆ. ಪ್ರಾಚೀನ ಮಾನವರು ವಾಸಿಸುವ ನೈಸರ್ಗಿಕ ಗುಹೆ ಇದಾಗಿದೆ. ಬಾಗಿ ಗುಡ್ಡಗಳು ಮಣ್ಣಿನ ಗುಡ್ಡಗಳು. ಅಚ್ಚಗೆಂಪು, ಕಪ್ಪು, ಗರಸು ಮಣ್ಣುಗಳಿಂದ ಕೂಡಿರುವ ಇಲ್ಲಿಯ ನೆಲದ ವೈವಿಧ್ಯತೆ ಬೆರಗುಗೊಳಿಸುತ್ತದೆ. ಮಳೆಗಾಲದಲ್ಲಿ ಇಲ್ಲಿಗೆ ಭೇಟಿ ನೀಡಿದರೆ ನಿಸರ್ಗದ ಗರ್ದಿಗಮ್ಮತ್ತನ್ನು ಅನುಭವಿಸಬಹುದು. ಶಾಲಾಮಕ್ಕಳಿಗೆ ಅತ್ಯುತ್ತಮ ಪಿಕ್‌ನಿಕ್ ಸ್ಪಾಟ್. ಸಂಜೆಯ ಸೂರ್ಯಾಸ್ತ ರಂಗು ತುಂಬಬಲ್ಲದು. ಶಿಲಾಯುಗದ ಅವಶೇಷಗಳು ಹಾಗೂ ಪ್ರಾಚೀನ ಮಾನವನ ನೆಲೆಗಳನ್ನು ಈ ಪ್ರದೇಶದಲ್ಲಿ ಕಾಣಬಹುದು. ಕರ್ನಾಟಕ ಸರಕಾರ ಇದನ್ನು ಪ್ರವಾಸಿತಾಣವಾಗಿ ಅಭಿವೃದ್ಧಿಪಡಿಸಬೇಕಾದ ಅಗತ್ಯವಿದೆ ಎಂದು ಹಾರೂಗೇರಿಯ ಬಿ.ಆರ್.ದರೂರ ಸಂಶೋಧನ ಕೇಂದ್ರದ ನಿರ್ದೇಶಕ ಸಾಹಿತಿ ಡಾ.ವಿ.ಎಸ್. ಮಾಳಿ ಹೇಳುತ್ತಾರೆ.

ಶ್ರೀನಿವಾಸ ಕುಲಕರ್ಣಿ

...ಶ ದಾಖಲೆಗಾಗಿ ಇಂದು






ಅನುಬಂಧ – ೩

ಆಕರ ಗ್ರಂಥಗಳು

ಅ) ಗ್ರಂಥಗಳು

೧]	ರಮೇಶ ನಾಯಿಕ	ಕರ್ನಾಟಕ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ ಕ. ವಿ. ವಿ. ಹಂಪಿ ೨೦೦೭
೨]	ಪಿ. ಜಿ. ಕೆಂಪಣ್ಣವರ ಟಿ. ಆರ್. ಜೊಡಟ್ಟಿ	ಜೈನ ಕ್ಷೇತ್ರಗಳ ಐತಿಹ್ಯ, ಪ್ರಕಾಶಕರು: ಬಿ. ಬಿ. ಕರ್ಣವಾಡಿ ೧೯೯೦
೩]	ಡಾ. ಕೆ. ಬಿ. ಶಿವತಾರಕ	ಕರ್ನಾಟಕ ಪುರಾತತ್ವ ನೆಲೆಗಳು, ಕ.ವಿ.ವಿ. ಹಂಪಿ ೨೦೦೧
೪]	ಡಾ. ಶ್ರೀನಿವಾಸ ಪಾಡಿಗಾರ	ಪುರಾತತ್ವ ಶಾಸ್ತ್ರ ಪರಿಚಯ, ಗಾಯಿತ್ರಿ ಪ್ರಕಾಶನ, ಧಾರವಾಡ ೧೯೮೭
೫]	ಅಪ್ಪಣ್ಣ. ನ. ಹಂಜೆ	ರಾಯಬಾಗ ಪ್ರದೇಶದ ದೇವಾಲಯಗಳು ಶಿಲ್ಪ ಮತ್ತು ಶಾಸನಗಳು (ಅಪ್ರಕಟಿತ) ಕ. ವಿ. ವಿ ಧಾರವಾಡ ೨೦೦೦

ಬ) ಸಂಚಿಕೆಗಳು

೧)	ಇಂಡಿಯನ್ ಆರ್ಕಿಯಾಲಜಿ ಎ–ರಿವ್ಯೂ	೧೯೬೫–೬೬, ೧೯೬೭–೬೮, ೧೯೯೦–೯೧
೨)	ಡಾ. ಶ್ರೀನಿವಾಸ ಪಾಡಿಗಾರ	ಭಾರತೀಯ ಪುರಾತತ್ವ ಸಮೀಕ್ಷೆ : ಪ್ರಕಾಶನ ಹೊಸ ದೆಹಲಿ ೨೦೦೪ (ಜರ್ನಲ್)

ಕ) ಅಭಿನಂದನ ಗ್ರಂಥ

ಶ್ರೀ ಪಿ. ಬಿ. ದೇಸಾಯಿ	ಸ್ಟಡಿಸ್ ಇನ್ ಇಂಡಿಯನ್ ಹಿಸ್ಟರಿ ಆ್ಯಂಡ್ ಕಲ್ಚರ್

ಡ) ಲೇಖನ

೧]	ಡಾ. ವ್ಹಿ. ಎಸ್. ಮಾಳಿ	'ಪ್ರಜಾವಾಣಿ' ದಿನಪತ್ರಿಕೆ "ನಮ್ಮೂರ ನಮ್ಮ ಜಿಲ್ಲೆ" ದಿನಾಂಕ : ೦೫ ಜೂನ್ ೨೦೧೧